ವಿಶ್ವವಾಣಿ
ವಿಶ್ವಾಸವೇ ವಿಶ್ವ

ನಾರೇ. ನಾರೇ.. ನಾರೇ. ನಾರೇ.. ನನ್ನನ್ನಾರೇ ನಾರೇ..,
ಬರ್ ಸೋರೆ ಮೇಘ ಮೇಘ , ಬರ್ ಸೋರೆ ಮೇಘ ಬರ್ ಸೋರೆ

ಮಳೆಯ ಮಧುರಾನುಭವಕ್ಕೆ ಮೈ, ಮನಗಳನ್ನು ತೆರೆದು, ಎರಡೂ ಕೈಗಳನ್ನು ಚಾಚಿ ಮಳೆಯ ಹನಿಗಳ ರೋಮಾಂಚನವನ್ನು ಅನುಭವಿಸುತ್ತಿರುವ ಯುವತಿಯೊಬ್ಬರು ವಿಧಾನಸೌಧದ ಬಳಿ ವಿಶ್ವವಾಣಿ ಛಾಯಾಚಿತ್ರಗ್ರಾಹಕ **ಸುಧಾಕರ್ ದೇವರಾಜ್** ಅವರ ಕ್ಯಾಮೆರಾ ಕಣ್ಣಲ್ಲಿ ಸೆರೆಸಿಕ್ಕಿದ್ದು ಹೀಗೆ...

ಸೊಂಪಾದ ಪುಟಗಳು

ಕುಮಾರಣ್ಣಂಗೂ ಈಗ ವಿಜಯೇಂದ್ರ ಬೇಕಿಲ್ಲ
ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ
6

ಅಲ್ಲೂ, ಇಲ್ಲೂ, ಎಲ್ಲೆಲ್ಲೂ ಸಲ್ಲುವ ಸೈಕಲ್
ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
7

ದಾರಿದೀಪೋಕ್ತಿ

ನೀವು ಕೆಳಕ್ಕೆ ಬೀಳುವುದು ಸ್ವಾಭಾವಿಕ. ಆದರೆ ಬಿದ್ದಲ್ಲಿಯೇ ಇರಬೇಕಾ ಅಥವಾ ಎದ್ದು ನಿಲ್ಲಬೇಕಾ ಎಂಬುದು ನಿಮ್ಮ ಆಯ್ಕೆಗೆ ಬಿಟ್ಟದ್ದು. ಈ ವಿಷಯದಲ್ಲಿ ನಿಮ್ಮ ನಿರ್ಧಾರವೇ ಅಂತಿಮ.

ವಕ್ರತುಂಡೋಕ್ತಿ

ಹೆಂಡತಿಗೆ ಅರ್ಥ ಆಗದಿರುವ ಭಾಷೆಗೆ ಗಂಡನ ಮೌನ ಅಂತಾರೆ.

ಇವಿಗಳಿಗೆ ಪರ್ಮಿಟ್ ಪಡೆಯದಿದ್ದರೆ ದಂಡ

ಬೆಂಗಳೂರು: ಸರಕು ಸಾಗಣೆ ಉದ್ದೇಶಕ್ಕೆ ಬಳಕೆಯಾಗುವ ಬ್ಯಾಟರಿ ಚಾಲಿತ ಬಸ್, ಆಟೋರಿಕ್ಷಾ, ಕಾರು ಸೇರಿದಂತೆ ಇತರೆ ವಾಹನಗಳಿಗೆ ಪರ್ಮಿಟ್ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದ್ದು, ಪರ್ಮಿಟ್ ಇಲ್ಲದಿದ್ದರೆ ದಂಡ ಕಟ್ಟಬೇಕಾಗುತ್ತದೆ ಎಂದು ಸಾರಿಗೆ ಇಲಾಖೆ ಎಚ್ಚರಿಕೆ ನೀಡಿದೆ. ಕೆಎಸ್ಆರ್‌ಟಿಸಿ, ಬಿಎಂಟಿಸಿಯಲ್ಲಿರುವ ಇವಿ ಬಸ್‌ಗಳೊಂದಿಗೆ ಖಾಸಗಿ ಸಾರಿಗೆ ಬಸ್‌ಗಳಿಗೂ ಪರ್ಮಿಟ್ ಪಡೆಯುವುದು ಅನಿವಾರ್ಯವಾಗಿದೆ. ಇವಿ ಬಳಕೆಗೆ ಪ್ರೋತ್ಸಾಹ ನೀಡಲು ವಾಣಿಜ್ಯ ಉದ್ದೇಶಕ್ಕೆ ಬಳಸುವ ಬ್ಯಾಟರಿ ಚಾಲಿತ ಎಲೆಕ್ಟ್ರಿಕ್ ವಾಹನಗಳಿಗೆ ಪರ್ಮಿಟ್‌ನಿಂದ ವಿನಾಯಿತಿ ನೀಡಿತ್ತು. ಈ ವಿನಾಯಿತಿ ಹಿಂಪಡೆಯಲಾಗಿದೆ. ಪರ್ಮಿಟ್ ಪಡೆಯಲು ವಿಧಿಸುವ ಶುಲ್ಕದಿಂದ ಹಸಿರು ವಾಹನಗಳಿಗೆ ವಿನಾಯಿತಿ ನೀಡಲಾಗಿದ್ದು, ಉಚಿತವಾಗಿ ಪರ್ಮಿಟ್ ನೀಡಲಾಗುವುದು ಎಂದು ತಿಳಿಸಿದೆ.

ನ್ಯಾ.ವರ್ಮಾ ಪದಚ್ಯುತಿಗೆ ನೂರು ಸಹಿ ಸಂಗ್ರಹ

ದೆಹಲಿ: ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಆಗಿದ್ದಾಗ ಅಧಿಕೃತ ನಿವಾಸದಲ್ಲಿ ಕೋಟಿಗಟ್ಟಲೆ ಹಣ ಪತ್ತೆಯಾಗಿದ್ದ ಪ್ರಕರಣದಲ್ಲಿ ಸಿಲುಕಿಕೊಂಡಿರುವ ನ್ಯಾ.ಯಶವಂತ್ ವರ್ಮಾ ಪದಚ್ಯುತಿಗೆ ಸಂಸತ್ತಿನಲ್ಲಿ ನಿರ್ಣಯ ಮಂಡಿಸುವ ನೋಟಿಸ್‌ಗೆ 100 ಸಂಸದರು ಸಹಿ ಹಾಕಿದ್ದಾರೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಭಾನುವಾರ ತಿಳಿಸಿದ್ದಾರೆ.

ವಿವರಪುಟ → 8

ಫನ್‌ತರಂಗ

- ರಘುಪತಿ ಶೃಂಗೇರಿ -

ರಾಜಕೀಯ ಮುಖಂಡನಿಗೆ ಸನ್ಮಾನ ಮಾಡಿ 'ಗದೆ' ಕೊಟ್ಟ ಪಕ್ಷದ ಕಾರ್ಯಕರ್ತರು
ಸುದ್ದಿ



ಶವಗಳನ್ನು ಹೂತಿರುವ ಆರೋಪಕ್ಕೆ ಸಂಬಂಧಿಸಿ ಸಮಗ್ರ ತನಿಖೆಗೆ ಆದೇಶ | ಎಡಿಜಿಪಿ ಪ್ರಣವ್ ಮೊಹಂತಿ ನೇತೃತ್ವದಲ್ಲಿ ತಂಡ | ಸರಕಾರದ ನಿರ್ಧಾರವನ್ನು ಸ್ವಾಗತಿಸಿದ ಡಾ.ವೀರೇಂದ್ರ ಹೆಗ್ಗಡೆ

ಧರ್ಮಸಂಕಟ ರಹಸ್ಯ ಭೇದಿಸಲು ಎಸ್‌ಐಟಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಭಾರಿ ಸದ್ದು ಮಾಡುತ್ತಿರುವ ಧರ್ಮಸ್ಥಳದ ಸುತ್ತಲಿನ ಜಾಗದಲ್ಲಿ ಶವಗಳನ್ನು ಹೂಳಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ಮಾಡಲು ಕೊನೆಗೂ ಸರಕಾರ ವಿಶೇಷ ತನಿಖಾ ತಂಡ ರಚಿಸಿ ಆದೇಶ ಹೊರಡಿಸಿದೆ.

ಮಹಿಳಾ ಆಯೋಗ, ಹಲವು ಸಂಘ-ಸಂಸ್ಥೆಗಳು ಎಸ್‌ಐಟಿ ರಚಿಸಬೇಕು ಎಂದು ಸರಕಾರದ ಮೇಲೆ ಒತ್ತಡ ಹೇರಿದ್ದವು. ಆರಂಭದಲ್ಲಿ ವಿಶೇಷ ತನಿಖಾ ತಂಡದ ಅಗತ್ಯವಿಲ್ಲವೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಬಹುತೇಕರು ಅಭಿಪ್ರಾಯಪಟ್ಟರೂ, ಒತ್ತಡ ಹೆಚ್ಚಿದ ಹಿನ್ನೆಲೆಯಲ್ಲಿ ಎಸ್‌ಐಟಿ ರಚಿಸಲಾಗಿದೆ. ಸರಕಾರದ ಈ ನಡೆಯನ್ನು ಎಡ-ಬಲ ಪಂಥದವರು ಸೇರಿದಂತೆ ಸ್ವತಃ ಧರ್ಮಸ್ಥಳದ ಧರ್ಮದರ್ಶಿಗಾಳಗಿರುವ ಡಾ.ವೀರೇಂದ್ರ ಹೆಗ್ಗಡೆ ಅವರು ಸ್ವಾಗತಿಸಿದ್ದಾರೆ.

'ತಾನು ಹಲವು ಮೃತದೇಹಗಳನ್ನು ವಿಲೇವಾರಿ ಮಾಡಿದ್ದೆ' ಎಂದು ವ್ಯಕ್ತಿಯೊಬ್ಬರು ವಕೀಲರ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಸರಕಾರ ರಚಿಸಿರುವ ಎಸ್‌ಐಟಿ ಸಮಗ್ರ ತನಿಖೆ ನಡೆಸಲಿದೆ. ಈ ತಂಡದ ನೇತೃತ್ವವನ್ನು ಎಡಿಜಿಪಿ ಪ್ರಣವ್ ಮೊಹಂತಿಗೆ ವಹಿಸಿದ್ದು, ಇನ್ನುಳಿದಂತೆ ಹಿರಿಯ ಐಪಿಎಸ್ ಅಧಿಕಾರಿ ಗಳಾದ ಎನ್.ಎಂ. ಅನುಚೇತ್, ಸೌಮ್ಯಲತಾ, ಜಿತೇಂದ್ರ ಕುಮಾರ್ ದಯಾಮ ತಂಡ ದಲ್ಲಿದ್ದಾರೆ.

ಧರ್ಮಸ್ಥಳ ಠಾಣೆಯಲ್ಲಿ ದಾಖಲಾದ ಪ್ರಕರಣ ಹಾಗೂ ಇದರ ಸಂಬಂಧ ಕರ್ನಾಟಕ ರಾಜ್ಯದ ಇತರ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ/ದಾಖಲಾಗುವ ಇತರ ಎಲ್ಲ ಕ್ರಿಮಿನಲ್ ಪ್ರಕರಣಗಳ ತನಿಖೆಯನ್ನು ಈ ವಿಶೇಷ ತನಿಖಾ ತಂಡಕ್ಕೆ ವರ್ಗಾಯಿಸಬೇಕು ಎಂದು ಡಿಜಿ-ಐಜಿಪಿ ಆದೇಶಿಸಿದ್ದಾರೆ. ವಿಶೇಷ ತನಿಖಾ ತಂಡವು ತನಿಖೆಗೆ ಸಂಬಂಧಿಸಿದ ತನಿಖಾ ಪ್ರಗತಿಯನ್ನು ನಿಗದಿತ ಸಮಯದಲ್ಲಿ ಡಿಜಿ-ಐಜಿಪಿಗೆ ವರದಿ ಮಾಡಬೇಕು ಮತ್ತು ತನಿಖಾ ವರದಿಯನ್ನು ಪೊಲೀಸ್ ಮಹಾ ನಿರ್ದೇಶಕರ ಮುಖಾಂತರ ಶೀಘ್ರವಾಗಿ ಸರಕಾರಕ್ಕೆ ಸಲ್ಲಿಸಬೇಕು ಎಂದು ನಿರ್ದೇಶನ ನೀಡಲಾಗಿದೆ.

ಸಾರ್ವಜನಿಕ ವಲಯದಲ್ಲೂ ಧರ್ಮಸ್ಥಳ ಪ್ರಕರಣ ಸಂಬಂಧ ವ್ಯಾಪಕ ಚರ್ಚೆಯಾಗಿತ್ತು. ಇತ್ತೀಚೆಗೆ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಗೋಪಾಲ್ ಗೌಡ ಅವರು, ಧರ್ಮಸ್ಥಳದಲ್ಲಿ ಶವಗಳನ್ನು ವಿಲೇವಾರಿ ಮಾಡಿದ ಪ್ರಕರಣ ಸಂಬಂಧ ಸಾಕ್ಷಿಗಳಿಗೆ ರಾಜ್ಯ ಸರಕಾರ ತಕ್ಷಣವೇ ಭದ್ರತೆ ಒದಗಿಸಬೇಕು. ಜತೆಗೆ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಬೇಕು ಎಂದು ಒತ್ತಾಯಿಸಿದ್ದರು. ಜತೆಗೆ ಹಿರಿಯ ವಕೀಲರಾದ ಬಾಲನ್ ಮತ್ತು ಸಿ.ಎಸ್.ದ್ವಾರಕನಾಥ್ ಅವರ ನೇತೃತ್ವದ ವಕೀಲರ ನಿಯೋಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ ಭೇಟಿಯಾಗಿ ಈ ಪ್ರಕರಣದಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿ ಮನವಿ ಸಲ್ಲಿಸಿದ್ದರು.

ಎಸ್‌ಐಟಿ ರಚನೆಗೆ ಪತ್ರ ಬರೆದಿದ್ದ ಮಹಿಳಾ ಆಯೋಗ: ಧರ್ಮಸ್ಥಳದ ಸುತ್ತ ಹಲವು ಶವಗಳನ್ನು ಹೂತಿರುವುದಾಗಿ ವ್ಯಕ್ತಿಯೊಬ್ಬರು ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ್ದಾರೆ. ಈ ಸಂಬಂಧ ಮಾಧ್ಯಮಗಳು ವ್ಯಕ್ತಿಯೊಬ್ಬರ ತಲೆಬುರುಡೆ ದೊರಕಿದ ಬಗ್ಗೆ ಹಾಗೂ ನಾಪತ್ತೆಯಾದ ವೈದ್ಯಕೀಯ ವಿದ್ಯಾರ್ಥಿನಿ ಯೊಬ್ಬರ ಕುಟುಂಬದವರ ಹೇಳಿಕೆಯ ವರದಿ ಪ್ರಸಾರ ಮಾಡಿವೆ. ಮಾಧ್ಯಮಗಳ ವರದಿ ಮತ್ತು ಶವಗಳನ್ನು ಹೂತಿರುವ ವ್ಯಕ್ತಿಯ ಹೇಳಿಕೆಯಲ್ಲಿ ಕಳೆದ 20ಕ್ಕೂ ಹೆಚ್ಚು ವರ್ಷ ಹಲವು ಮಹಿಳೆಯರ, ವಿದ್ಯಾರ್ಥಿನಿಯರ ಮೇಲೆ ಗಂಭೀರ ಸ್ವರೂಪದ ದೌರ್ಜನ್ಯ, ಹತ್ಯೆ, ಅತ್ಯಾಚಾರ, ಅಸ್ವಾಭಾವಿಕವಾದ ಸಾವು ಮತ್ತು ನಾಪತ್ತೆ ಪ್ರಕರಣಗಳು ನಡೆದಿರುವ ಬಗ್ಗೆ ತಿಳಿಸಲಾಗಿದೆ.

→ 4

ತಂಡದಲ್ಲಿ ಯಾರ್‍ಯಾರು?

- ಪ್ರಣವ್ ಮೊಹಂತಿ, ಎಡಿಜಿಪಿ, ಎಸ್‌ಐಟಿ ಮುಖ್ಯಸ್ಥ
- ಎನ್.ಎಂ.ಅನುಚೇತ್, ಸದಸ್ಯರು
- ಸೌಮ್ಯಲತಾ, ಸದಸ್ಯರು,
- ಜಿತೇಂದ್ರ ಕುಮಾರ್, ಸದಸ್ಯರು

ಧರ್ಮಸ್ಥಳ ಭಾಗದಲ್ಲಿ ನೂರಾರು ಶವಗಳನ್ನು ಹೂತಿರುವುದಾಗಿ ವ್ಯಕ್ತಿಯೊಬ್ಬರು ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ್ದಾರೆ. ಮನುಷ್ಯನ ತಲೆಬುರುಡೆ ದೊರಕಿದ ಸ್ಥಳ ಹಾಗೂ ನಾಪತ್ತೆಯಾದ ವೈದ್ಯಕೀಯ ವಿದ್ಯಾರ್ಥಿನಿಯ ಕುಟುಂಬದವರ ಹೇಳಿಕೆಗಳನ್ನು ಗಮನಿಸಿದ್ದೇನೆ. ಈ ಭಾಗದಲ್ಲಿ ಅಸಹಜ ಸಾವು, ಕೊಲೆ, ಅತ್ಯಾಚಾರದಂತಹ ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳು ನಡೆದಿರಬಹುದಾಗಿದ್ದು, ಈ ಎಲ್ಲ ಸಾಧ್ಯತೆಗಳನ್ನು ಪರಿಗಣಿಸಿ ಪ್ರಕರಣದ ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸುವಂತೆ ರಾಜ್ಯ ಮಹಿಳಾ ಆಯೋಗವು ರಾಜ್ಯ ಸರಕಾರಕ್ಕೆ ಕೋರಿತ್ತು. ಆದ್ದರಿಂದ ನಾಲ್ವರು ಐಪಿಎಸ್ ಅಧಿಕಾರಿಗಳನ್ನೊಳಗೊಂಡ ವಿಶೇಷ ತನಿಖಾ ತಂಡವನ್ನು ರಚಿಸಿ ಆದೇಶಿಸಲಾಗಿದೆ. ಈ ತಂಡವು ಧರ್ಮಸ್ಥಳ ಠಾಣೆಯಲ್ಲಿ ದಾಖಲಾಗಿರುವ ದೂರು ಸೇರಿದಂತೆ ಇದಕ್ಕೆ ಸಂಬಂಧಪಟ್ಟಂತೆ ರಾಜ್ಯದ ಇತರ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಹಾಗೂ ದಾಖಲಾಗುವ ಎಲ್ಲ ಕ್ರಿಮಿನಲ್ ಪ್ರಕರಣಗಳನ್ನು ಸಮಗ್ರ ತನಿಖೆ ನಡೆಸಿ, ವರದಿ ನೀಡಲಿದೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ ಕೋಟ್

ಧರ್ಮಸ್ಥಳ ಗ್ರಾಮದ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ 'ಹಲವಾರು ಶವಗಳನ್ನು ಹೂತಿದ್ದೆ' ಎಂಬ ದೂರು ಪ್ರಕರಣವು ಇತ್ತೀಚಿನ ದಿನಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಹಲವಾರು ತರ್ಕವಾತರ್ಕಗಳು, ಊಹಾಪೋಹಗಳು ಹಾಗೂ ಗೊಂದಲಗಳನ್ನು ಹುಟ್ಟುಹಾಕಿದೆ. ಈ ಘಟನೆಗೆ ಸಂಬಂಧಿಸಿದಂತೆ ಪ್ರಾಮಾಣಿಕವಾಗಿ ತನಿಖೆ ನಡೆಯಬೇಕೆಂಬ ನಮ್ಮ ಹಾಗೂ ಸಾರ್ವಜನಿಕರ ನಿರೀಕ್ಷೆಯ ಹಿನ್ನೆಲೆಯಲ್ಲಿ ರಾಜ್ಯ ಸರಕಾರವು ಈ ಪ್ರಕರಣವನ್ನು ವಿಶೇಷ ತನಿಖಾ ತಂಡಕ್ಕೆ ಹಸ್ತಾಂತರಿಸಿದೆ ಎಂಬುದು ತಿಳಿದು ಬಂದಿದೆ. ಸರಕಾರದ ಈ ನಿಲುವು ಉತ್ತಮವಾಗಿದೆ. ಸಮಾಜದ ನೈತಿಕತೆ ಹಾಗೂ ಶ್ರದ್ಧೆಗೆ ನಿಲುಕುವ ಬಲವಾದ ಆಧಾರವೆಂದರೆ ಸತ್ಯ. ಆದ್ದರಿಂದ, ಈ ಪ್ರಕರಣದಲ್ಲಿ ಎಸ್‌ಐಟಿ ಸತ್ಯಾಂಶವನ್ನು ಅತೀ ಶೀಘ್ರವಾಗಿ ಪ್ರಾಮಾಣಿಕ ತನಿಖೆ ನಡೆಸಿ ಸಾರ್ವಜನಿಕರ ಮುಂದೆ ಬಹಿರಂಗಪಡಿಸಬೇಕು ಎಂಬುದು ನಮ್ಮ ಆಶಯ.

-ಕೆ. ಪಾರ್ಶ್ವನಾಥ್ ಜೈನ್ ವಕ್ತಾರರು, ಶ್ರೀ ಕ್ಷೇತ್ರ ಧರ್ಮಸ್ಥಳ

ಸುಗಮವಾಗಿ ಕಲಾಪ ನಡೆಯಲು ಸಹಕಾರ ನೀಡಲು ನಡ್ಡಾ ಮನವಿ

ಸಂಸತ್ ಅಧಿವೇಶನ ಸರ್ವಪಕ್ಷಗಳ ಸಭೆ

ಕೇಂದ್ರ ಸಚಿವ ಜೆ.ಪಿ.ನಡ್ಡಾ ಅಧ್ಯಕ್ಷತೆಯಲ್ಲಿ ಸರ್ವಪಕ್ಷ ಸಭೆ ನಡೆಯಿತು.

ದೆಹಲಿ: ಸೋಮವಾರ ಆರಂಭವಾಗಲಿರುವ ಸಂಸತ್‌ನ ಮುಂಗಾರು ಅಧಿವೇಶನಕ್ಕೂ ಮುನ್ನ ಕೇಂದ್ರ ಸರಕಾರ ಭಾನುವಾರ ಕರೆದಿದ್ದ ಸರ್ವಪಕ್ಷ ಸಭೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ನಾಯಕರು ಭಾಗವಹಿಸಿದ್ದರು. ಸಭೆಯ ಅಧ್ಯಕ್ಷತೆ ವಹಿಸಿದ್ದ ಕೇಂದ್ರ ಸಚಿವ ಜೆ.ಪಿ.ನಡ್ಡಾ ಅವರು ಸುಗಮವಾಗಿ ಕಲಾಪ ನಡೆಯಲು ಸಹಕಾರ ನೀಡಬೇಕು ಎಂದು ಪ್ರತಿಪಕ್ಷ ನಾಯಕರಲ್ಲಿ ಮನವಿ ಮಾಡಿದರು.

ಬಿಹಾರದ ಮತದಾರರ ಪಟ್ಟಿ ಪರಿಷ್ಕರಣೆ, ಪಹಲ್ಗಾಮ್ ಉಗ್ರರ ದಾಳಿ ಮತ್ತು ಭಾರತ-ಪಾಕ್ ನಡುವಿನ ಕದನ ವಿರಾಮಕ್ಕೆ ಸಂಬಂಧಿಸಿದಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗಳು ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಪ್ರತಿಪಕ್ಷಗಳು ಧ್ವನಿ ಎತ್ತಿದವು.

34 ಪ್ರಶ್ನೆಗಳ ಸಲ್ಲಿಕೆ

ಕಾಂಗ್ರೆಸ್, ಬಿಜೆಪಿ, ಟಿಎಂಸಿ, ಡಿಎಂಕೆ, ಜೆಡಿಯು, ಸಿಪಿಎಂ, ಸಿಪಿಐ, ಶಿವಸೇನಾ, ಜನಸೇನಾ ಹಾಗೂ ಎನ್‌ಸಿಪಿ(ಎಸ್‌ಪಿ) ಪಕ್ಷಗಳಿಗೆ ಸೇರಿದ 50 ಸಂಸದರು ರಾಜ್ಯಸಭೆ ಮತ್ತು ಲೋಕಸಭೆಯಲ್ಲಿ ಶೂನ್ಯ ವೇಳೆ ವಿವಿಧ ವಿಚಾರಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಲು ಸಜ್ಜಾಗಿದ್ದಾರೆ. ವಿವಿಧ ಪಕ್ಷಗಳ ಸಂಸದರಿಂದ 34 ಪ್ರಶ್ನೆಗಳ ಸಲ್ಲಿಕೆಯಾಗಿವೆ ಎಂದು ಮೂಲಗಳು ತಿಳಿಸಿವೆ. ಈ ಪೈಕಿ, ಏರ್ ಇಂಡಿಯಾ ವಿಮಾನ ಪತನಕ್ಕೆ ಸಂಬಂಧಿಸಿ ಲೋಕಸಭೆಯಲ್ಲಿ 23 ಪ್ರಶ್ನೆಗಳು ಹಾಗೂ ರಾಜ್ಯಸಭೆಯಲ್ಲಿ 11 ಪ್ರಶ್ನೆಗಳನ್ನು ಕೇಳಲಾಗುತ್ತದೆ ಎಂದು ತಿಳಿದುಬಂದಿದೆ.

ಇಂಡಿಯಾ ಒಕ್ಕೂಟ ಸಭೆ

ದೇಶದ ಜ್ವಲಂತ ಸಮಸ್ಯೆಗಳ ಬಗ್ಗೆ ಸಂಸತ್ತಿನ ಮಳೆಗಾಲ ಅಧಿವೇಶನದಲ್ಲಿ ಒಗ್ಗಟ್ಟಿನಿಂದ ಧ್ವನಿ ಎತ್ತಿ ಕೇಂದ್ರ ಸರಕಾರವನ್ನು ಮುಜುಗರಕ್ಕೆ ಸಿಲುಕಿಸಲು 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಭಾನುವಾರ ಸಭೆ ನಡೆಸಿವೆ. ವರ್ಚುವಲ್ ರೂಪದಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಆರ್‌ಜೆಡಿ, ಎಸ್‌ಪಿ, ಎನ್‌ಸಿಪಿ-ಎಸ್‌ಪಿ, ಶಿವಸೇನಾ (ಯುಬಿಟಿ), ಜೆಎಂಎಂ, ಸಿಪಿಎಂ, ಸಿಪಿಐ, ಸಿಪಿಐ-ಎಂಎಲ್, ಫಾರ್ವರ್ಡ್ ಬ್ಲಾಕ್, ಐಯುಎಂಎಲ್ ಮತ್ತು ಕೇರಳ ಕಾಂಗ್ರೆಸ್ ಸೇರಿದಂತೆ ಇಪ್ಪತ್ತನಾಲ್ಕು ರಾಜಕೀಯ ಪಕ್ಷಗಳು ಭಾಗವಹಿಸಿದ್ದವು. ಬಿಹಾರದಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ, ಪಹಲ್ಗಾಮ್ ದಾಳಿ ಮತ್ತು ಸಿಂದೂರ ಕಾರ್ಯಾಚರಣೆ ಸೇರಿದಂತೆ ಹಲವಾರು ಪ್ರಮುಖ ವಿಷಯಗಳ ಕುರಿತು ನಾಯಕರು ಚರ್ಚಿಸಿದರು.

→ 4

ಇಂದಿನಿಂದ ವೀರಶೈವ-ಲಿಂಗಾಯತ ಪಂಚ ಪೀಠಾಧ್ಯಕ್ಷರ ಶೃಂಗ ಸಮ್ಮೇಳನ | 500ಕ್ಕೂ ಅಧಿಕ ಸ್ವಾಮೀಜಿಗಳು ಭಾಗಿ

ಪಂಚಪೀಠಾಧ್ಯಕ್ಷರ ಸಮಾಗಮ

ದಾವಣಗೆರೆ: ನಗರದ ರೇಣುಕಾ ಮಂದಿರದಲ್ಲಿ ವೀರಶೈವ-ಲಿಂಗಾಯತ ಪಂಚ ಪೀಠಗಳ ಪೀಠಾಧ್ಯಕ್ಷರ ಸಮಾವೇಶವನ್ನು ಜು.21 ಮತ್ತು 22ರಂದು ಆಯೋಜಿಸಲಾಗಿದ್ದು, ಪಂಚಪೀಠಗಳ ಶ್ರೀಗಳು ಸೇರಿದಂತೆ ರಾಜ್ಯ ಮತ್ತು ಹೊರ ರಾಜ್ಯಗಳಿಂದ ಸಮುದಾಯದ 500ಕ್ಕೂ ಹೆಚ್ಚು ಮಠಾಧೀಶರು ಶೃಂಗ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಎಡೆಯೂರು ಕ್ಷೇತ್ರದ ಶ್ರೀ ರೇಣುಕಾ ಶಿವಾಚಾರ್ಯ ಶ್ರೀ ಮಾಹಿತಿ ನೀಡಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ, ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಅವರು ಬಾಳೆಹೊನ್ನೂರು ರಂಭಾಪುರಿ ಶ್ರೀಗಳೊಂದಿಗೆ ಚರ್ಚಿಸಿ ಪಂಚಪೀಠಾಧ್ಯಕ್ಷರಲ್ಲಿದ್ದ ಒಡಕು ಸರಿಪಡಿಸಿ ಅವರನ್ನೆಲ್ಲ ಒಂದೆಡೆ ಸೇರಿಸಬೇಕೆಂಬ ಸಂಕಲ್ಪ ಮಾಡಿದ್ದರು. ಬಹಳಷ್ಟು ಜನರಿಗೆ ಪಂಚಪೀಠಗಳು ಒಂದಾಗುತ್ತವಾ ಎಂಬ ಅನುಮಾನವಿತ್ತು. ಈಗ ಅದೆಲ್ಲಕ್ಕೂ ಉತ್ತರವಾಗಿಯೇ ಈ ಸಮಾವೇಶ ನಡೆಯುತ್ತಿದೆ ಎಂದರು.

ಕೇದಾರ ಶ್ರೀಗಳು ಸಮಾವೇಶಕ್ಕೆ ಬರುತ್ತಾರಾ? ಎಂಬ ಜಿಜ್ಞಾಸೆ ಕಾಡಿತ್ತು. ಆದರೆ, ಅವರು ಕೂಡ ಸಮಾವೇಶದಲ್ಲಿ ಪಾಲ್ಗೊಳ್ಳುತ್ತಿರುವುದು ನಮಗೆಲ್ಲ ಸಂತಸ ತಂದಿದೆ. ಸಮಾವೇಶದಲ್ಲಿ ಸಮಾಜದ ಎಲ್ಲ ಮಠಾಧೀಶರು, ಗಣ್ಯಮಾನ್ಯರು ಪಾಲ್ಗೊಳ್ಳಲಿದ್ದು, ಎರಡು ದಿನಗಳ ಕಾಲ ಬೆಳಗ್ಗೆ 11 ಗಂಟೆಗೆ ಸಮಾವೇಶ ನಡೆಯಲಿದೆ. ಸಮಾಜದ ಸಂಘಟನೆ, ಜಾತಿ ಗಣತಿ ಸೇರಿದಂತೆ ಹಲವು ಠರಾವುಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದು ತಿಳಿಸಿದರು.

ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಣೆ



ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿಯ ಕಬಿನಿ ಜಲಾಶಯಕ್ಕೆ ಭಾನುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಾಗಿನ ಅರ್ಪಿಸಿದರು.

ಶಾಸಕ ಚವಾಣ್ ಪುತ್ರನ ವಿರುದ್ಧ ಎಫ್‌ಐಆರ್

ಬೀದರ್: ಮದುವೆ ಮಾಡಿಕೊಳ್ಳುವುದಾಗಿ ನಂಬಿಸಿ ಲೈಂಗಿಕ ದೌರ್ಜನ್ಯವೆಸಗಿದ ಆರೋಪದಡಿ ಔರಾದ್ ಶಾಸಕ ಪ್ರಭು ಚವಾಣ್ ಅವರ ಪುತ್ರ ಪ್ರತೀಕ್ ಚವಾಣ್ ವಿರುದ್ಧ ಭಾನುವಾರ ಪ್ರಕರಣ ದಾಖಲಾಗಿದೆ. ಮಹಾರಾಷ್ಟ್ರದ ಉದಗೀರ್ ಸಮೀಪದ ಹಣೆಗಾಂವ್ ತಾಂಡಾದ ಯುವತಿ ಸಂಧ್ಯಾ ನಾಮದೇವ್ ರಾಠೋಡ್ ಅವರು ನೀಡಿದ ದೂರಿನನ್ವಯ ಕೇಸ್ ದಾಖಲಾಗಿದೆ. '2023ರ ಡಿ. 25ರಂದು ಔರಾದ್ ತಾಲೂಕಿನ ಘಮಸುಬಾಯಿ ಬೊಂತಿ ತಾಂಡಾದಲ್ಲಿ ಶಾಸಕ ಪ್ರಭು ಚವಾಣ್ ಅವರ ಪುತ್ರ ಪ್ರತೀಕ್ ಜತೆ ಹಿರಿಯರ ಸಮ್ಮುಖದಲ್ಲಿ ನಿಶ್ಚಿತಾರ್ಥವಾಗಿದೆ. ನಂತರ ಇಬ್ಬರೂ ನಾನಾ ಕಡೆ ಸುತ್ತಾಡಿದ್ದೇವೆ. ಈ ವೇಳೆ ಪ್ರತೀಕ್ ನನ್ನ ಮೇಲೆ ಬಲವಂತದಿಂದ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ಶಾಲೆಗಳಲ್ಲೇ ಮಕ್ಕಳ ಆಧಾರ್ ಅಪ್‌ಡೇಟ್

ದಹೆಲಿ: ದೇಶದ 7 ಕೋಟಿ ಮಕ್ಕಳ ಆಧಾರ್ ಕಾರ್ಡ್ ಅಪ್‌ಡೇಟ್ ಆಗದಿರುವ ಕಾರಣ ಶಾಲೆಗಳಲ್ಲಿಯೇ ಬಯೋಮೆಟ್ರಿಕ್ ಅಪ್‌ಡೇಟ್ ಮಾಡಲು ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ ಚಿಂತನೆ ನಡೆಸಿದೆ. ಈ ನಿಟ್ಟಿನಲ್ಲಿ ಯೋಜನೆಯೊಂದನ್ನು ರೂಪಿಸಲಾಗುತ್ತಿದ್ದು, 40ರಿಂದ 60 ದಿನಗಳ ಒಳಗೆ ಯೋಜನೆ ಸಿದ್ಧಗೊಳ್ಳಲಿದೆ ಎಂದು ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ್ ಕುಮಾರ್ ತಿಳಿಸಿದ್ದಾರೆ. 5 ವರ್ಷದ ದಾಟಿದ ಪ್ರತಿ ಮಗುವಿನ ಬಯೋಮೆಟ್ರಿಕ್ ಅಪ್‌ಡೇಟ್ ಮಾಡುವುದು ಕಡ್ಡಾಯವಾಗಿದೆ. 7 ವರ್ಷ ದಾಟಿದ ಬಳಿಕವೂ ಅಪ್‌ಡೇಟ್ ಆಗದಿದ್ದರೆ ಆ ಮಗುವಿನ ಆಧಾರ್ ಕಾರ್ಡ್ ಸಂಖ್ಯೆ ನಿಷ್ಕ್ರಿಯವಾಗಲಿದೆ. ಈ ಕಾರಣದಿಂದ ಪೋಷಕರ ಸಮ್ಮತಿ ಪಡೆದು ಶಾಲೆಗಳಲ್ಲೇ ಬಯೋಮೆಟ್ರಿಕ್ ಅಪ್‌ಡೇಟ್ ಮಾಡಲು ಚಿಂತನೆ ನಡೆಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ನಿತೀಶ್‌ರನ್ನು ಮುಗಿಸಲು ಚಿರಾಗ್, ಪಾಸ್ವಾನ್ ವ್ಯೂಹ

ರಾಘವ ಶರ್ಮ ನಿಡ್ಲೆ
skraghu99@gmail.com

ಬಿಹಾರ ವಿಧಾನಸಭೆ ಚುನಾವಣೆಗೆ ದಿನಗಣನೆ ಆರಂಭವಾಗಿದ್ದು, ಸಿಎಂ ನಿತೀಶ್ ಕುಮಾರ್ ಈಗಾಗಲೇ ಹಲವು ಜನಪ್ರಿಯ ಯೋಜನೆಗಳನ್ನು ಘೋಷಿಸುತ್ತಾ, ಚುನಾವಣಾ ಲಾಭ-ಲೆಕ್ಕಾಚಾರದಲ್ಲಿ ತೊಡಗಿದ್ದಾರೆ. ಎನ್‌ಡಿಎ ಮೈತ್ರಿಕೂಟದ ಮಿತ್ರಪಕ್ಷ ಜೆಡಿಯುಗೆ ಈ ಚುನಾವಣೆಯಲ್ಲಿ ಸೀಟುಗಳನ್ನು ಹೆಚ್ಚಿಸಿಕೊಂಡು, ಕಳೆದು ಹೋಗಿರುವ ರಾಜಕೀಯ ಪ್ರಾಬಲ್ಯ ಮರುಸ್ಥಾಪಿಸುವ ಸವಾಲಿದೆ. ಒಂದು ವೇಳೆ ಈ ಬಾರಿಯೂ 2020ರ ಫಲಿತಾಂಶವೇ ಪುನಾರವರ್ತನೆಯಾದರೆ, ಅದು ಜೆಡಿಯು ರಾಜಕೀಯ ಅಧಃಪತನಕ್ಕೆ ನಾಂದಿ ಹಾಡುವುದು ನಿಶ್ಚಿತ.

ಎಲ್ಲಕ್ಕಿಂತ ಮುಖ್ಯವಾಗಿ, ವೃದ್ಧಾಪ್ಯದಲ್ಲಿರುವ ನಿತೀಶ್‌ಗೆ ಉತ್ತಮ ಫಲಿತಾಂಶ ಪಡೆದುಕೊಂಡು, ನಂತರ ಪಕ್ಷದ ನಾಯಕತ್ವವನ್ನು ಮತ್ತೊಬ್ಬರಿಗೆ ಹಸ್ತಾಂತರ ಮಾಡುವ ಯೋಚನೆಯಿದ್ದಂತಿದೆ. ಆದರೆ, ಲೋಕಜನಶಕ್ತಿ ಪಾರ್ಟಿಯ (ರಾಮ್ ವಿಲಾಸ್-ಆರ್‌ವಿ) ನಾಯಕ, ಕೇಂದ್ರ ಸಚಿವ ಚಿರಾಗ್ ಪಾಸ್ವಾನ್ ನಡೆಗಳನ್ನು ನೋಡಿದರೆ, 2020ರಂತೆ ಈ ಸಲವೂ ಜೆಡಿಯು ಮತಗಳನ್ನು ವಿಭಜಿಸಿ, ನಿತೀಶ್‌ಗೆ ಹಾನಿ ಮಾಡುವ ಉದ್ದೇಶವಿರುವುದು ಸ್ಪಷ್ಟ.

1990ರ ನಂತರದ ವಿಧಾನಸಭೆ ಚುನಾವಣೆಗೆ ಹೋಲಿಸಿದರೆ 2020ರ ಚುನಾವಣೆ ರಾಜ್ಯದಲ್ಲಿ ಹೊಸ ಇತಿಹಾಸ ಸೃಷ್ಟಿಸಿತ್ತು. 30 ವರ್ಷಗಳ ನಂತರ ಮೊದಲ ಬಾರಿಗೆ ರಾಷ್ಟ್ರೀಯ ಪಕ್ಷವೊಂದು (ಬಿಜೆಪಿ) ರಾಜ್ಯ ಚುನಾವಣೆಯಲ್ಲಿ ಅಗ್ರಮಾನ್ಯ ಪಕ್ಷವಾಗಿ ಹೊರಹೊಮ್ಮಿತ್ತು. ಅಲ್ಲಿಯವರೆಗೆ ರಾಷ್ಟ್ರೀಯ ಜನತಾದಳ (ಆರ್‌ಜೆಡಿ) ಮತ್ತು ಜೆಡಿಯು ಎಂಬ ಎರಡು ಪ್ರಾದೇಶಿಕ ಪಕ್ಷಗಳ ಪ್ರಾಬಲ್ಯಕ್ಕೆ ಸಾಕ್ಷಿಯಾಗಿದ್ದ ಬಿಹಾರದಲ್ಲಿ ಮೊದಲ ಬಾರಿಗೆ ಬಿಜೆಪಿಗೆ ಹಿರಿಯಣ್ಣನ ಸ್ಥಾನ ಸಿಕ್ಕಿತ್ತು. ಹೀಗಿದ್ದರೂ, ಪಿಎಂ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಜೆಡಿಯು ನಾಯಕ ನಿತೀಶ್‌ರನ್ನೇ ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಿದ್ದರು. ಆದರೆ, ಬಿಜೆಪಿಯಿಂದ ಇಬ್ಬರು ಉಪ ಮುಖ್ಯಮಂತ್ರಿಗಳಿರುವಂತೆ ನೋಡಿಕೊಂಡಿದ್ದರು.

ಕಳೆದ ಚುನಾವಣೆಯಲ್ಲಿ ಆಡಳಿತ ವಿರೋಧಿ ಅಲೆ ನಿತೀಶ್ ಕುಮಾರ್ ಮೇಲಿತ್ತೇ ವಿನಃ ಬಿಜೆಪಿ ವಿರುದ್ಧ ವಿರೋಧಿ ವಾತಾವರಣ ಇರಲಿಲ್ಲ. ತಮ್ಮ ಬಗ್ಗೆ ಜನರಲ್ಲಿ ಹಿಂದಿದ್ದ ವಿಶ್ವಾಸಾರ್ಹತೆ ಈ ಬಾರಿ ಇದ್ದಂತಿಲ್ಲ ಎಂಬುದು ಚುನಾವಣಾ ಪ್ರಚಾರಗಳಿಗೆ ಅಲ್ಪ ಜನಸ್ಪಂದನೆ ಸಿಕ್ಕಾಗಲೇ ನಿತೀಶ್ ಅರಿವಿಗೆ ಬಂದಿತ್ತು. ಕೊನೆ-ಕೊನೆಗಂತೂ ನಿತೀಶ್ ತೀರಾ ಹತಾಶರಾದ ವಂತೆ ಕಂಡುಬಂದಿದ್ದರು. ಇದು ನನ್ನ ಕೊನೆ ಚುನಾವಣೆ, ಮತ್ತೊಂದು ಅವಕಾಶ ಕೊಡಿ ಎಂದು ಮತದಾರರಲ್ಲಿ ಅಂಗಲಾಚಿದ್ದರು.

2020ರಲ್ಲಿ ಜೆಡಿಯು ಪ್ರಾಬಲ್ಯ ತಗ್ಗಿಸಿ, ಬಿಜೆಪಿ ಸೀಟುಗಳು ದ್ವಿಗುಣಗೊಳಿಸುವಲ್ಲಿ ಚಿರಾಗ್ ಮಹತ್ವದ ಪಾತ್ರವಹಿಸಿದ್ದು ರಾಜ್ಯದ ಪಾಲಿಗೆ ಐತಿಹಾಸಿಕ ಬೆಳವಣಿಗೆ. ಎಲ್‌ಜೆಪಿಯ ವ್ಯವಸ್ಥಿತ ಮತವಿಭಜನೆ ತಂತ್ರ ಬಿಜೆಪಿಗೆ ಭಾರೀ ಲಾಭ ತಂದುಕೊಟ್ಟಿತ್ತು. ನಾನು ಪ್ರಧಾನಿ ಮೋದಿಜೀಯವರ ಹನುಮಾನ್ ಎನ್ನುತ್ತಲೇ, 137 ಸ್ಥಾನಗಳಲ್ಲಿ ಚಿರಾಗ್ ಅವರು ಎಲ್‌ಜೆಪಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರು. ಜೆಡಿಯು ಬಲಿಷ್ಠವಿದ್ದ ಕ್ಷೇತ್ರಗಳಲ್ಲೇ ಹೆಚ್ಚು ಅಭ್ಯರ್ಥಿಗಳನ್ನು ಹಾಕಿದ್ದ ಚಿರಾಗ್, ಜೆಡಿಯು ಮತಗಳನ್ನು ವಿಭಜಿಸುವಲ್ಲೂ ಯಶಸ್ವಿಯಾದರು. ಇದರಿಂದಾಗಿ, 2015ರಲ್ಲಿ 71 ಕ್ಷೇತ್ರಗಳಲ್ಲಿ ಶಾಸಕ ಸ್ಥಾನ ಹೊಂದಿದ್ದ ಜೆಡಿಯು, 2020ರಲ್ಲಿ 43ಕ್ಕಿಳಿದಿತ್ತು. ಸ್ಪರ್ಧಿಸಿದ 115 ಸ್ಥಾನಗಳಲ್ಲಿ 72ರಲ್ಲಿ ಜೆಡಿಯು ಸೋಲುಂಡಿತ್ತು. ಈ ಎಲ್ಲಾ ಕ್ಷೇತ್ರಗಳಲ್ಲಿ ಎಲ್‌ಜೆಪಿ ಮತಪಾಲು ಹೆಚ್ಚಿದ್ದಲ್ಲದೆ, ಜೆಡಿಯು ಮತಗಳ ವಿಭಜನೆ ಅಂತಿಮ ಫಲಿತಾಂಶವನ್ನು ಪರಿಣಾಮಕಾರಿಯಾಗಿ ಬದಲಿಸಿತ್ತು.

ಮಿತ್ರಪಕ್ಷ ಜೆಡಿಯುವನ್ನು ಹಣಿಯುವ ಚಿರಾಗ್ ತಂತ್ರಗಾರಿಕೆಯನ್ನು ಬಿಜೆಪಿ ವಿರೋಧಿಸಲೇ ಇಲ್ಲ. 'ಬೇಡಪ್ಪಾ, ನೀನು ಸುಮ್ಮನಿರು ಎಂದು ಚಿರಾಗ್‌ಗೆ ಬಿಜೆಪಿಯವರು ತಿಳಿಹೇಳಲಿಲ್ಲ.

→ 4

ಮೋದಿಯ ಹನುಮನಂತಿದ್ದ ಚಿರಾಗ್

ಕಳೆದ ಚುನಾವಣೆಯಲ್ಲಿ ತಾನು ಪ್ರಧಾನಿ ನರೇಂದ್ರ ಮೋದಿಯವರ ಹನುಮಾನ್ ಎಂದೇ ಪ್ರಚಾರ ಮಾಡಿದ್ದ ಚಿರಾಗ್, ಈಗಲೂ ಅದೇ ಮಾತನ್ನು ಪುನರುಚ್ಚರಿಸುತ್ತಿದ್ದಾರೆ. ಹಾಗೆ ನೋಡಿದರೆ, 2020ರ ನಂತರದಲ್ಲಿ ಮೋದಿ-ಚಿರಾಗ್ ಸಂಬಂಧ ಮತ್ತಷ್ಟು ದೃಢವಾಗಿದೆ. 2018ರಲ್ಲಿ ಸುಪ್ರೀಂಕೋರ್ಟ್‌ನ ಯು.ಯು. ಲಲಿತ್ ಮತ್ತು ಎ.ಕೆ. ಗೋಯೆಲ್ ಒಳಗೊಂಡ ದ್ವಿಸದಸ್ಯ ನ್ಯಾಯಪೀಠ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆಗಟ್ಟುವಿಕೆ ಕಾಯಿದೆಯಲ್ಲಿ ತಿದ್ದುಪಡಿ ತಂದ ತೀರ್ಪು ಪ್ರಕಟಿಸಿದ್ದನ್ನು ಪ್ರಶ್ನಿಸಿದ್ದ ಚಿರಾಗ್ ಪಾಸ್ವಾನ್, ಉತ್ತರ ಭಾರತದಲ್ಲಿ ಪ್ರತಿಭಟನೆಗಳನ್ನು ನಡೆಸಿ, ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದ್ದರು. ನ್ಯಾ.ಎ.ಕೆ. ಗೋಯೆಲ್ ನಿವೃತ್ತಿ ಬಳಿಕ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣದ ಮುಖ್ಯ ನ್ಯಾಯಾಧೀಶರನ್ನಾಗಿ ನೇಮಕ ಮಾಡಿದ್ದನ್ನೂ ಪ್ರಶ್ನಿಸಿದ್ದ ಅವರು, ನೇಮಕಾತಿ ರದ್ದುಗೊಳಿಸುವಂತೆ ಪ್ರಧಾನಿ ಮೋದಿಗೆ ಪತ್ರ ಬರೆದಿದ್ದರು. ಸುಪ್ರೀಂಕೋರ್ಟ್ ತೀರ್ಪು ಜಾರಿಗೊಳ್ಳದಂತೆ ನೋಡಿಕೊಳ್ಳಲು ಸುಗ್ರೀವಾಜ್ಞೆ ಹೊರಡಿಸಬೇಕು ಎಂಬ ಚಿರಾಗ್ ಹಠಕ್ಕೆ ಮಣಿದಿದ್ದ ಕೇಂದ್ರ, ಸುಗ್ರೀವಾಜ್ಞೆ ಹೊರಡಿಸಲು ಒಪ್ಪಿಕೊಂಡಿತ್ತು. 2024ರ ಆಗಸ್ಟ್‌ನಲ್ಲಿ ಪರಿಶಿಷ್ಟ ಜಾತಿಗಳ ಉಪ-ವರ್ಗೀಕರಣಕ್ಕೆ ಅವಕಾಶ ನೀಡಿದ್ದ ಸುಪ್ರೀಂಕೋರ್ಟ್ ಸಂವಿಧಾನ ಪೀಠದ ತೀರ್ಪನ್ನು ಚಿರಾಗ್ ಪಾಸ್ವಾನ್ ವಿರೋಧಿಸಿದ್ದರು. ಸುಪ್ರೀಂಕೋರ್ಟ್‌ನ ಎಸ್‌ಸಿ/ಎಸ್‌ಟಿ ಕೆನೆಪದರದ ನಿಲುವಿಗೂ ಆಕ್ಷೇಪ ತೆಗೆದಿದ್ದರು. ಕೇಂದ್ರ ಸರಕಾರ ಚಿರಾಗ್ ಅಭಿಪ್ರಾಯಗಳನ್ನು ಪರಿಗಣಿಸಿ, ಕೆಲ ತಿದ್ದುಪಡಿಗಳನ್ನು ತಂದು, ದಲಿತರು ಮತ್ತು ಆದಿವಾಸಿಗಳ ಮೇಲೆ ಕೆನೆಪದರ ನೀತಿ ಅನ್ವಯವಾಗದಂತೆ ನೋಡಿಕೊಳ್ಳಲು ನಿರ್ಧರಿಸಿತು ಮತ್ತು ಈ ನಿಟ್ಟಿನಲ್ಲಿ ಕ್ಯಾಬಿನೆಟ್ ನಿರ್ಣಯವನ್ನೂ ಅಂಗೀಕರಿಸಿತ್ತು.

ಸಮಾಚಾರ ಸಣ್ಣದಲ್ಲ

ಮಗುವಿನೊಂದಿಗೆ ತಾಯಿ ಆತ್ಮಹತ್ಯೆಗೆ ಯತ್ನ

ಗದಗ: ಕೌಟುಂಬಿಕ ಕಲಹದಿಂದ ಮನನೊಂದು, ಒಂದು ವರ್ಷದ ಮಗುವಿನೊಂದಿಗೆ ತಾಯಿ ನದಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ ಮಹಿಳೆಯನ್ನು ಪೊಲೀಸರು ರಕ್ಷಿಸಿದ ಘಟನೆ ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಕೊರ್ಲಹಳ್ಳಿ ಬಳಿ ನಡೆದಿದೆ. ತುಂಗಭದ್ರಾ ನದಿ ಸೇತುವೆ ಬಳಿ ನಿನ್ನೆ ನಡೆದಿದ್ದು, ಪ್ರಕರಣ ತಡವಾಗಿ ಬೆಳಕಿಗೆ ಬಂದಿದೆ. ಆತ್ಮಹತ್ಯೆಗೆ ಯತ್ನಿಸಿದ ಮಹಿಳೆ ವಿಜಯನಗರ ಜಿಲ್ಲೆ ಹೂವಿನಹಡಗಲಿ ನಿವಾಸಿ ಶಶಿಕಲಾ ಬಸವನಕೋಟೆ ಎಂದು ಗುರುತಿಸಲಾಗಿದೆ. ಆಕೆಯು ತಮ್ಮ ಒಂದು ವರ್ಷದ ಮಗು ಜೊತೆ ನದಿಗೆ ಹಾರಲು ಪ್ರಯತ್ನಿಸುತ್ತಿದ್ದಳು. ಆಗ ಬೈಕ್ ಮೇಲೆ ದಾವಣಗೆರೆ ತೆರಳುತ್ತಿದ್ದ ದಂಪತಿಗಳು ಇದನ್ನು ಗಮನಿಸಿದ್ದಾರೆ. ಕೂಡಲೆ ಆಕೆಯನ್ನು ತಡೆದು ವಿಚಾರಿ ತಕ್ಷಣ 112 ನಂಬರಿಗೆ ಕರೆಮಾಡಿ ಮಾಹಿತಿ ನೀಡಿದರು. ಕೂಡಲೇ ಸ್ಥಳಕ್ಕೆ ಧಾವಿಸಿದ ಮುಂಡರಗಿ ಪೊಲೀಸರು ಶಶಿಕಲಾ ಹಾಗೂ ಮಗುವನ್ನು ಸುರಕ್ಷಿತವಾಗಿ ರಕ್ಷಿಸಿದರು. ಪೊಲೀಸರು ಆಕೆಗೆ ಸಮಾಧಾನ ಹೇಳಿ ಕುಟುಂಬಸ್ಥರಿಗೆ ಮಾಹಿತಿ ನೀಡಿ ಕಳುಹಿಸಿದರು. ಮುಂಡರಗಿ ಪೊಲೀಸರು ತೋರಿದ ಸಮಯೋಚಿತ ಕಾರ್ಯಾಚರಣೆ ಹೃದಯ ಸ್ಪರ್ಶಿ ಆಗಿದೆ. ಪೊಲೀಸರ ಕಾರ್ಯಕ್ಷಮತೆ ಹಾಗೂ ಮಾನವೀಯತೆಗೆ ಎಲ್ಲಡೆ ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಉದ್ಯೋಗಾಧಾರಿತ ತರಬೇತಿ ನೀಡಲು ಸಲಹೆ

ಕಾರವಾರ: ಜಿಲ್ಲೆಯಲ್ಲಿ ಯುವನಿಧಿ ಫಲಾನುಭವಿಗಳಾಗಿರುವ ಯುವ ಜನತೆಗೆ ಉದ್ಯೋಗಾಧಾರಿತ ಕೌಶಲ ತರಬೇತಿಗಳನ್ನು ನೀಡುವ ಮೂಲಕ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಬೇಕು ಎಂದು ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ದಿಲೀಷ್ ಶಶಿ ನಿರ್ದೇಶನ ನೀಡಿದರು. ಅವರು ಶನಿವಾರ ಜಿಲ್ಲಾ ಪಂಚಾಯತ್ ನ ತಮ್ಮ ಕಚೇರಿಯಲ್ಲಿ 2025 ನೇ ಸಾಲಿನ ಯುವನಿಧಿ ನೋಂದಣಿ ಪ್ರಕ್ರಿಯೆ ಕುರಿತ ಪ್ರಚಾರ ಸಾಮಗ್ರಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದರು. ಜಿಲ್ಲೆಯಲ್ಲಿರುವ ಯುವನಿಧಿ ಫಲಾನುಭವಿಗಳಿಗೆ ಕೌಶಲ್ಯ ತರಬೇತಿಗಳನ್ನು ನೀಡುವ ಮೂಲಕ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಗ್ಯಾರಂಟಿ ಪ್ರಾಧಿಕಾರದ ಉಪಾಧ್ಯಕ್ಷ ನಾಗರಾಜ್ ಮುರುಡೇಶ್ವರ, ಜಿ.ಪಂ. ಮುಖ್ಯ ಯೋಜನಾಧಿಕಾರಿ ಸೋಮಶೇಖರ್ ಮೇಸ್ತಾ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಉಮೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಕೃಷ್ಣಪ್ಪ , ಜಿಲ್ಲಾ ಉದ್ಯೋಗಾಧಿಕಾರಿ (ಪ್ರ) ವಿನೋದ್ ನಾಯ್ಕ್, ಕೌಶಲ್ಯಾಭಿವೃದ್ದಿ ಇಲಾಖೆಯ ಸಹಾಯಕ ನಿರ್ದೇಶಕ ರಜತ್ ಹಬ್ಬು, ಐಟಿಐ ಕಾಲೇಜಿನ ಪ್ರಾಂಶುಪಾಲ ಪ್ರಕಾಶ್ ಕುಡಾಳಕರ್, ಸೀಡಾಕ್ ಸಿಬ್ಬಂದಿ ಶಿವರಾಜ್ ಕುಮಾರ್ ಹೆಳವಿ ಹಾಜರಿದ್ದರು.

ರಾಜಣ್ಣ ಮಲ್ಲಾಡದಗೆ ನಿಲಯದಿಂದ ಸನ್ಮಾನ

ಗದಗ: ನಗರದ ಲಯನ್ಸ್ ಕ್ಲಬ್‌ನ 2025-26ನೇ ಸಾಲಿಗೆ ಕಾರ್ಯದರ್ಶಿಯಾಗಿ ಆಯ್ಕೆಯಾದ ಗಣ್ಯ ಉದ್ಯಮಿ ಹಾಗೂ ಶ್ರೀ ಅನ್ನಪೂರ್ಣೇಶ್ವರಿ ಪ್ರಸಾದ ನಿಲಯದ ಸದಸ್ಯರಾದ ರಾಜಣ್ಣ ಮಲ್ಲಾಡದ ಅವರನ್ನು ನಗರದ ಶ್ರೀ ಅನ್ನಪೂರ್ಣೇಶ್ವರಿ ಪ್ರಸಾದ ನಿಲಯದ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ನಿಲಯದ ಗೌರವಾಧ್ಯಕ್ಷರಾದ ಎಸ್.ಎಸ್. ಕಳಸಾಪೂರ, ಉಪಾಧ್ಯಕ್ಷರಾದ ಉಮೇಶ ಪೂಜಾರ, ಪದಾಧಿಕಾರಿಗಳಾದ ಗುರುಮೂರ್ತಿ ಮರೇಗುದ್ದಿ, ವೆಂಕಟೇಶ ಇಮರಾಪೂರ, ಮುತ್ತು ಜಡಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಕಾರ್ಮಿಕರ ದತ್ತಾಂಶ: ದಾಖಲೆ ಸಲ್ಲಿಕೆಗೆ ಸೂಚನೆ

ಗದಗ: ನರಗುಂದ ಪುರಸಭೆ ವ್ಯಾಪ್ತಿಯಲ್ಲಿ ಬರುವ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಮಂತ್ರಾಲಯ ಭಾರತ ಸರಕಾರ ನವದೆಹಲಿ ಅವರು ನ್ಯೂ ಅರ್ಬನ್ ಪೂವರ್ಟಿ ಅಲಿವೇಷನ್ ಮಿಷನ್ ಅಭಿಯಾನವನ್ನು ಅನುಷ್ಠಾನಗೊಳಿಸಲು ಯೋಜನೆ ರೂಪಿಸುತ್ತಿದೆ. 2025-26 ನೇ ಸಾಲಿನ ರಾಷ್ಟ್ರೀಯ ಜೀವನೋಪಾಯ ಅಭಿಯಾನ ನಿರ್ದೇಶಕರ ಪತ್ರದ ನ್ವಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರು, ಮಿಷೋ, ಅಮೆಜಾನ್, ಫ್ಲಿಪ್, ಕಾರ್ಟ.ಡುಂಜೋ ಮತ್ತು ಆರೈಕೆ ಕೆಲಸಗಾರರು, ತ್ಯಾಜ್ಯ ಕೆಲಸಗಾರರು, ಮನೆ ಕೆಲಸಗಾರರು, ಸಾರಿಗೆ ಕಾರ್ಮಿಕರು, ಸರಕು ಸಾಗಾಣಿಕೆ ವಾಹನ ಚಾಲಕರ ಸಂಘ ಇತ್ಯಾಧಿ ಕಾರ್ಮಿಕರ ದತ್ತಾಂಶ ಸಂಗ್ರಹಣೆ ಮಾಡಲು ಅಭಿಯಾನ ನಿರ್ದೇಶಕರ ನಿದೇಶನದನ್ವಯ 2025ರ ಜು.30ರಂದು ಕಚೇರಿ ವೇಳೆಯಲ್ಲಿ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ನರಗುಂದ ಪುರಸಭೆಯ ಡೇ-ನಲ್ಮ ವಿಭಾಗದಲ್ಲಿ ಕೇಳಿ ಪಡೆಯಬಹುದಾಗಿದೆ ಎಂದು ನರಗುಂದ ಪುರಸಭೆ ಕಾರ್ಯಾಲಯವನ್ನು ಸಂಪರ್ಕಿಸಬಹುದಾಗಿದೆ.

{ಸಿದ್ದರಾಮಯ್ಯ } ಮುಖ್ಯಮಂತ್ರಿ

ಬಿಜೆಪಿಯವರು ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ. ನನ್ನ ಹಾಗೂ ಡಿಸಿಎಂ ನಡುವೆ ಒಡಕುಂಟು ಮಾಡುವ ಉದ್ದೇಶದಿಂದ ಬಿಜೆಪಿಯವರು ಅನಗತ್ಯ ಹೇಳಿಕೆಗಳನ್ನು ನೀಡುತ್ತಾರೆ. ಇದರಿಂದ ರಾಜಕೀಯ ಲಾಭವಾಗಬಹುದೆಂಬ ಭ್ರಮೆ ಬಿಜೆಪಿಯವರಿಗಿದ್ದು, ಅವರಿಗೆ ಇದು ಸದಾ ಭ್ರಮೆಯಾಗಿಯೇ ಇರಲಿದೆ.

ಸ್ನಾತಕೋತ್ತರ ಗಣಿತಶಾಸ್ತ್ರದ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ | ಕರ್ನಾಟಕ ವಿವಿ ಕುಲಪತಿ

ನಿರಂತರ ಅಧ್ಯಯನದಿಂದ ಸಾಧನೆ ಸಾಧ್ಯ

ಧಾರವಾಡ: ಸ್ಪರ್ಧಾತ್ಮಕ ಜಗತ್ತಿಗೆ ನಮ್ಮನ್ನು ನಾವು ಸಜ್ಜುಗೊಳಿಸಬೇಕಾದ ಅವಶ್ಯಕತೆ ಇದೆ. ಜಗತ್ತು ವಿಶಾಲವಾಗಿದ್ದು, ಹೇರಳವಾದ ಅವಕಾಶಗಳನ್ನು ಪಡೆಯಲು ಹಾತೊರೆಯಬೇಕು ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎ.ಎಮ್. ಖಾನ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಅವರು ಕರ್ನಾಟಕ ವಿಶ್ವವಿದ್ಯಾಲಯದ ಗಣಿತಶಾಸ್ತ್ರ ವಿಭಾಗ, ಗಣಿತಶಾಸ್ತ್ರ ಸಂಘವು ಕರ್ನಾಟಕ ವಿಶ್ವವಿದ್ಯಾಲಯ ಮಾನಸೋಲ್ಲಾಸ ಸಭಾಂಗಣದಲ್ಲಿ ಉತ್ಕರ್ಷ -2025 ಸ್ನಾತಕೋತ್ತರ ಗಣಿತಶಾಸ್ತ್ರದ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದರು.

ಯಶಸ್ಸು ಸಾಧಿಸಲು ಯಾವುದೇ 'ಶಾರ್ಟ್ ಕಟ್' ಇರುವುದಿಲ್ಲ ಕಠಿಣ ಪರಿಶ್ರಮದಿಂದ ಅಧ್ಯಯನ ಮಾಡಿದಾಗ ಮಾತ್ರ ನಿರ್ದಿಷ್ಟ ಗುರಿಯನ್ನು ಸಾಧಿಸಲು ಸಾಧ್ಯ ಆದ್ದರಿಂದ ವಿದ್ಯಾರ್ಥಿಗಳು 'ಸಾಧ್ಯವಿಲ್ಲ' ಎಂಬ ಪದವನ್ನು ನಿಮ್ಮ ಜೀವನದಿಂದ ತೆಗೆದುಹಾಕಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಗಣಿತ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಹೊಸ ರೀತಿಯ ತಾಂತ್ರಿಕ ಕೌಶಲಗಳನ್ನು ಅಳವಡಿಸಿಕೊಳ್ಳಬೇಕು, ಪ್ರಸ್ತುತ ಅವಕಾಶಗಳಿಗೆ ತಕ್ಕಂತೆ ಮೆಟಲ್ಯಾಬ್, ಪೈಥಾನ್ ಸೇರಿದಂತೆ ನವೀನ ತಂತ್ರಾಂಶಗಳನ್ನು ಕಲಿಯಲು ಪ್ರಯತ್ನಿಸಿ ಎಂದರು.

ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎ.ಎಮ್. ಖಾನ್ ಅವರು ಮಾತನಾಡಿದರು.

ಕರ್ನಾಟಕ ವಿಶ್ವವಿದ್ಯಾಲಯದ ಕುಲಸಚಿವರಾದ ಶಂಕರಪ್ಪ ವಣಿಕ್ಯಾಳ ಮಾತನಾಡಿ, ವಿದ್ಯಾರ್ಥಿಗಳು ಸಂಸ್ಕಾರ, ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿನಿಯರು ಶಿಕ್ಷಣ ಪಡೆದುಕೊಳ್ಳುವುದು ಅತಿ ಅವಶ್ಯ. ಅಚಲವಾದ ನಿರ್ಧಾರದಿಂದ ಅಧ್ಯಯನ ಮಾಡಬೇಕು. ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿ ಬಾಳಬೇಕು ಎಂದರು.

ಸಿಂಡಿಕೇಟ್ ಸದಸ್ಯರಾದ ರಾಬರ್ಟ್ ದದ್ದಾಪೂರಿ ಮಾತನಾಡಿ, ಮನಸ್ಸನ್ನು ನಿಗ್ರಹಿಸಿ, ದೃಢವಾದ ಮನಸ್ಸಿನಿಂದ ಗುರಿಯ ಕಡೆಗೆ ಮುನ್ನುಗ್ಗಲು ಪ್ರಯತ್ನಿಸಬೇಕು. ಆತ್ಮ ವಿಶ್ವಾಸದಿಂದ ಸವಾಲುಗಳನ್ನು ಎದುರಿಸಿ, ಜೀವನದ ಅನುಭವಗಳಿಂದ ಜೀವನದ ಪಾಠವನ್ನು ಕಲಿಯಿರಿ ಎಂದರು.

> ಆಯ್ಕೆಮಾಡಿಕೊಂಡ ವಿಷಯದಲ್ಲಿ ಸಾಧನೆ ಮಾಡಲು ಪ್ರಯತ್ನಿಸಬೇಕು. ಗಣಿತ ವಿಷಯದಿಂದ ರಾಷ್ಟ್ರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳಲು ಇದೊಂದು ಉತ್ತಮ ಅವಕಾಶವಾಗಿದೆ. ಪ್ರಸ್ತುತ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಉನ್ನತವಾದ ಹುದ್ದೆ ಪಡೆಯಲು ಗುರಿಯನ್ನು ಹೊಂದಿರಿ.
> -ಶಂಕರಪ್ಪ ವಣಿಕ್ಯಾಳ, ಕರ್ನಾಟಕ ವಿವಿ ಕುಲಸಚಿವ

ಸಿಂಡಿಕೇಟ್ ಸದಸ್ಯರಾದ ಶ್ಯಾಮ ಮಲ್ಲನಗೌಡರ ಮಾತನಾಡಿ...ಹೊಸತನವನ್ನು ಕಲಿಯಲು ಪ್ರಯತ್ನಮಾಡಬೇಕು, ಸ್ಪರ್ಧಾತ್ಮಕ ಯುಗದಲ್ಲಿ ಸಾಧನೆ ಮಾಡಲು ಅವಿರತ ಶ್ರಮದ ಅಗತ್ಯವಿದೆ ಸಮಾಜದಲ್ಲಿ ಮಾದರಿ ವ್ಯಕ್ತಿಯಾಗಿ ಉತ್ತಮ ಭವಿಷ್ಯವನ್ನು ಕಟ್ಟಿಕೊಳ್ಳಲು ಪ್ರಯತ್ನಿಸಿ ಎಂದು ಸಲಹೆ ನೀಡಿದರು.

ಸಿಂಡಿಕೇಟ್ ಸದಸ್ಯರಾದ ಮಹೇಶ ಹುಲ್ಲೆನ್ನವರ ಮಾತನಾಡಿ, ಪ್ರತಿಯೊಂದು ಅನ್ನಿವೇಶದಲ್ಲಿ ಮತ್ತು ಜಿವನದಲ್ಲಿ ಗಣಿತ ಹಾಸುಹೊಕ್ಕಾಗಿದೆ. ಸಮಾಜ ಮುಚ್ಚುವಂತೆ, ಇನ್ನೊಬ್ಬರಿಗೆ ಸಹಾಯವಾಗುವ ರೀತಿಯಲ್ಲಿ ಬೆಳೆಯಬೇಕು ಎಂದರು.

ಸಿಂಡಿಕೇಟ್ ಸದಸ್ಯರಾದ ಡಾ.ಬಸವರಾಜ ಗೊರವರ ಮಾತನಾಡಿ, ಭವ್ಯ ಭಾರತದವನ್ನು ಕಟ್ಟಲು ಯುವಕರ ಪಾತ್ರ ಬಹಳ ಇದೆ. ಗಣಿತ ವಿಷಯವನ್ನು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳ ವ್ಯಕ್ತಿತ್ವ ಪರಿವರ್ತನಾಶೀಲ ವಾಗಿದ್ದು ಯೋಜನಾಬದ್ಧ ಅಧ್ಯಯನದ ಮೂಲಕ ಸಮಾಜದಲ್ಲಿ ಉತ್ತಮ ಸ್ಥಾನವನ್ನು ಪಡೆಯಲು ಸಾಧ್ಯ ಎಂದರು.

ಕರ್ನಾಟಕ ವಿಶ್ವವಿದ್ಯಾಲಯ ಗಣಿತ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ಎಸ್.ಸಿ.ಶಿರಾಳಶೆಟ್ಟಿ ಮಾತನಾಡಿ, ಇಂದಿನ ಯುಗದಲ್ಲಿ ಸೃಜನಶೀಲ ಕೌಶಲ್ಯ ಮತ್ತು ಸವಾಲುಗಳನ್ನು ಎದುರಿಸುವ ಸಾಮರ್ಥ್ಯ ಬೆಳಸಿಕೊಳ್ಳಬೇಕು. ಗಣಿತದ ಹೊಸ ಆಯಾಮಗಳನ್ನು ಇಟ್ಟುಕೊಂಡು ಜಗತ್ತಿನ ಶ್ರೇಷ್ಠ ಸಂಶೋಧನಾ ನಿಯತಕಾಲಿಕೆಗಳಲ್ಲಿ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿ. ಸ್ಪರ್ಧಾತ್ಮಕ ಉನ್ನತವಾದ ನೇಟ್, ಸೇಟ್, ಜೆ.ಆರ್.ಎಫ್ ಪರೀಕ್ಷೆಗಳನ್ನು ಬರೆಯಲು ಪದರಯತ್ನಿಸಿ ಎಂದರು.

ಈ ಸಂದರ್ಭದಲ್ಲಿ ಗಣಿತ ಶಾಸ್ತ್ರ ವಿಭಾಗವು ಹಮ್ಮಿಕೊಂಡ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಪ್ರೊ. ಎಚ್.ಎಸ್.ರಮನೆ, ಡಾ.ಆಶಾ.ಎಸ್.ಕೆ, ಪ್ರೊ. ಎಸ್.ಆರ್.ದ್ಯಾವನಾಳ, ಪ್ರೊ.ಪಿ.ಜಿ.ಪಾಟೀಲ, ಸಂಶೋಧಕರಾ ಶಕುಂತಲಾ ಕಲಕೋಟಿ, ಅಭಿಷೇಕ ಸಂಗೋಳ್ಳಿ, ವಿದ್ಯಾರ್ಥಿ ಪ್ರತಿನಿಧಿಗಳಾದ ವಿಶಾಲ್ ಪೂಜಾರ, ಜ್ಯೋತಿ ಪಾಟೀಲ, ಸೌಂದರ್ಯ, ಶರಣು, ಮಂಜುನಾಥ ಭಜಂತ್ರಿ, ಸ್ನೇಹಾ, ಸಿಜಲ್, ಲಕ್ಷ್ಮೀಶ್ ಹೆಗಡೆ ಸೇರಿದಂತೆ ಇತರರು ಇದ್ದರು.

ನ್ಯಾನೊ ಗೊಬ್ಬರ ಬಳಸಿ ಉತ್ತಮ ಬೆಳೆ ಬೆಳೆದ ರೈತ

ಕಲಘಟಗಿ: ನ್ಯಾನೊ ಯೂರಿಯಾ ಬಳಕೆ ಮಾಡಿಕೊಂಡು ಉತ್ತಮ ಸೋಯಾಬಿನ್ ಬೆಳೆ ಬೆಳೆದ ದಾಸ್ತಿಕೊಪ್ಪ ಗ್ರಾಮದ ರೈತ ದಾನೇಶ ಸವಣೂರ ಅವರ ಜಮೀನಿಗೆ ಕೃಷಿ ಇಲಾಖೆಯ ಅಧಿಕಾರಿಗಳು ಶನಿವಾರ ಭೇಟಿ ನೀಡಿ ಬೆಳೆಯನ್ನ ವೀಕ್ಷಣೆ ಮಾಡಿ ನ್ಯಾನೊ ಯೂರಿಯಾ ಬಗ್ಗೆ ಜಾಗೃತಿ ಮೂಡಿಸಿದರು.

ಈ ವೇಳೆ ಜಂಟಿ ಕೃಷಿ ನಿರ್ದೇಶಕ ಮಂಜುನಾಥ ಅಂತರವಳ್ಳಿ ಮಾತನಾಡಿ, ಯೂರಿಯಾ ರಸಗೊಬ್ಬರ ಬಳಕೆ ಮಾಡುವುದರಿಂದ ಅನೇಕ ತೊಂದರೆ ಅನುಭವಿಸಬೇಕಾಗುತ್ತದೆ. ಗೊಬ್ಬರ ಹಾಕುವಾಗ ಮಳೆಯಾದರೆ ರಸಗೊಬ್ಬರ ಎಲೆಗಳ ಮೇಲೆ ಬಿದ್ದು ಹಳದಿ ರೋಗ ಉತ್ಪತ್ತಿಯಾಗುತ್ತದೆ. ಸುಳಿಯಲ್ಲಿ ಬಿದ್ದಾಗ ಸುಳಿರೋಗ ಬಂದು ಬೆಳೆಯಲ್ಲಿ ಎರಿಳಿತವಾಗುತ್ತದೆ. ಈ ರಸಗೊಬ್ಬರ ಯೂರಿಯಾ ಬಳಸುವುದರಿಂದ ಕೆರೆಗಳಲ್ಲಿನ ನೀರಿನಲ್ಲಿ ಮಿಶ್ರಣವಾಗಿ ನಮ್ಮ ಆರೋಗ್ಯದ ಮೇಲೂ ಪರಿಣಾಮ ಬೀರುತ್ತದೆ. ಆದ್ದರಿಂದ ಈ ಎಲ್ಲ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ನ್ಯಾನೊ ಯೂರಿಯಾ ತಂದಿದ್ದು ಇದನ್ನ ಸಮರ್ಪಕವಾಗಿ ಬಳಕೆ ಮಾಡಿದರೆ ರಸಗೊಬ್ಬರಕ್ಕಿಂತಲೂ ಹೆಚ್ಚಿನ ಫಲಿತಾಂಶವನ್ನು ರೈತರು ಪಡೆದುಕೊಳ್ಳಬಹುದು ಎಂದರು.

ದಾಸ್ತಿಕೊಪ್ಪ ಗ್ರಾಮದ ರೈತ ದಾನೇಶ ಸವಣೂರ ಅವರ ಜಮೀನಿಗೆ ಕೃಷಿ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಬೆಳೆಯನ್ನ ವೀಕ್ಷಣೆ ಮಾಡಿದರು.

ಸಹಾಯಕ ಕೃಷಿ ನಿರ್ದೇಶಕ ಅಮರ್ ನಾಯಕ್ ಮಾತನಾಡಿ, ಮಳೆ ಇಲ್ಲದ ಸಮಯದಲ್ಲಿ ನ್ಯಾನೊ ಯೂರಿಯಾ ಗೊಬ್ಬರವನ್ನು ಬೆಳೆಗಳ ಮೇಲೆ ಸಿಂಪಡಣೆ ಮಾಡುವುದರಿಂದ, ಒಂದು ಪ್ರಮಾಣವು ವ್ಯರ್ಥವಾಗದೇ ಎಲೆಗಳ ಮೂಖಾಂತರ ಬೆಳೆಗಳ ಖಾಂಡಕ್ಕೆ ತಲುಪಿ ಬೆಳೆಗಳು ಚೇತರಕಿಗೊಳ್ಳುತ್ತವೆ. ಆದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ರೈತರು ಈ ನ್ಯಾನೊ ಯೂರಿಯಾ ಬಳಕೆ ಮಾಡಿಕೊಳ್ಳಿ ಎಂದರು. ಈ ಸಂದರ್ಭದಲ್ಲಿ ಸಹಾಯಕ ಕೃಷಿ ಅಧಿಕಾರಿ ಎಮ್.ಸಿ ಕುಮಚಗಿ, ಶಿವರಾಜ ಗೋಲಪ್ಪನವರ ಸೇರಿದಂತೆ ರೈತರು ಇದ್ದರು.

ಶ್ರೀಸಾಯಿ ಮಂದಿರಕ್ಕೆ ಪದಾಧಿಕಾರಿಗಳ ಆಯ್ಕೆ

ಶ್ರೀ ಶಿರಡಿ ಸಾಯಿ ಮಂದಿರದ, ಶ್ರೀ ಶಿರಡಿ ಸಾಯಿ ಸದ್ಭಕ್ತ ಮಂಡಳಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಹುಬ್ಬಳ್ಳಿ: ಇಲ್ಲಿನ ಹಳೇ ಕೋರ್ಟ್ ವೃತ್ತದ ಬಳಿ ಇರುವ ಶ್ರೀ ಶಿರಡಿ ಸಾಯಿ ಮಂದಿರದ, ಶ್ರೀ ಶಿರಡಿ ಸಾಯಿ ಸದ್ಭಕ್ತ ಮಂಡಳಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಭಾನುವಾರ ನಡೆದ ವಾರ್ಷಿಕ ಸರ್ವ ಸಾಧಾರಣ ಸಭೆ ಬಳಿಕ ನೂತನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನ ಸೇರಿದಂತೆ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಮಹಾದೇವ ಮಾಶ್ಯಾಳ, ಉಪಾಧ್ಯಕ್ಷರಾಗಿ ಪ್ರಿಯಾಂಕಾ ಕಠಾರೆ, ಮೋಹನ ಗಿರಡ್ಡಿ, ಕಾರ್ಯದರ್ಶಿಯಾಗಿ ಬ್ರಜ ಮೋಹನ ಭುತಡಾ, ಸಹ ಕಾರ್ಯದರ್ಶಿಯಾಗಿ ಪ್ರಕಾಶ ಚಳಗೇರಿ ಮತ್ತು ಕೋಶಾಧ್ಯಕ್ಷರಾಗಿ ನರಸಿಂಗಸಾ ರತನ್ ಅವರನ್ನು ಆಯ್ಕೆ ಮಾಡಲಾಯಿತು. ನಿರ್ದೇಶಕರಾಗಿ ಪಾರ್ವತಿ ಕಮತಗಿ, ಪವಿತ್ರಾ ಕಡಪಟ್ಟಿ, ಸುಮನ ಬೊಂಗಾಳೆ, ಉಮೇಶ ನಾಯಕ, ಶರಣಪ್ಪ ದೇವನೂರ, ಗೋವಿಂದ ಕೋಟಕರ, ಪ್ರದೀಪಕುಮಾರ ಕಳ್ಳಿಮಠ, ಬಸವರಾಜ ಅಂಬಲಿ, ಅಶೋಕ ಗಾಯಕವಾಡ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಇಂದು ಪತ್ರಿಕಾ ದಿನಾಚರಣೆ

ಹಾವೇರಿ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕದ ವತಿಯಿಂದ ಜು.21ರಂದು ಬೆಳಗ್ಗೆ 10.30ಕ್ಕೆ ನಗರದ ಹಾನಗಲ್ ರಸ್ತೆಯಲ್ಲಿರುವ ಶಿವಾ ಕನ್ವೆನ್ಷನ್ ಹಾಲ್ ನಲ್ಲಿ ಹಾವೇರಿ ಜಿಲ್ಲಾ ಮಟ್ಟದ ಪತ್ರಿಕಾ ದಿನಾಚರಣೆ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದೆ.

ಜವಳಿ, ಕಬ್ಬು ಅಭಿವೃದ್ಧಿ, ಕೃಷಿ ಮಾರುಕಟ್ಟೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಸಮಾರಂಭ ಉದ್ಘಾಟಿಸಲಿದ್ದಾರೆ. ಮಾಜಿ ಸಿಎಂ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ದಿಕ್ಸೂಚಿ ಭಾಷಣ ಮಾಡಲಿ ದ್ದಾರೆ. ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ ಪ್ರಭಾಕರ ಪ್ರತಿಭಾ ಪುರಸ್ಕಾರ ವಿತರಿಸಲಿದ್ದಾರೆ. ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರ ಆಶಯ ನುಡಿಗಳನ್ನಾಡಲಿದ್ದಾರೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ನಾಗರಾಜ ಕುರುವತ್ತೇರ ಅಧ್ಯಕ್ಷತೆ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ವಿಧಾನಸಭೆ ಉಪ ಸಭಾಧ್ಯಕ್ಷ ಹಾಗೂ ಶಾಸಕ ರುದ್ರಪ್ಪ ಲಮಾಣ , ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ, ಶಾಸಕ ಬಸವರಾಜ ಶಿವಣ್ಣನವರ, ನಗರಸಭೆ ಅಧ್ಯಕ್ಷೆ ಶಶಿಕಲಾ ರಾಮು ಮಾಳಗಿ, ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಎಫ್.ಎನ್ ಗಾಜಿಗೌಡ್ರ, ನಿಕಟಪೂರ್ವ ನಗರಸಭೆ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಸಂಜೀವಕುಮಾರ ನೀರಲಗಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ, ವಸತಿ ಸಚಿವರ ಮಾಧ್ಯಮ ಸಂಯೋಜಕ ಲಕ್ಷ್ಮಿ ನಾರಾಯಣ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯದರ್ಶಿ ನಿಂಗಪ್ಪ ಚಾವಡಿ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಪಿ.ಎಂ ಸತ್ಯಪ್ಪನವರ, ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ, ಜಿಲ್ಲಾ ಪಂಚಾಯಿತಿ ಸಿಇಓ ರುಚಿ ಬಿಂದಾಲ್ ಭಾಗವಹಿಸಲಿದ್ದಾರೆ ಎಂದು ಸಂಘದ ಜಿಲ್ಲಾಧ್ಯಕ್ಷ ನಾಗರಾಜ ಕುರುವತ್ತೇರ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೀರೇಶ ಮಡ್ಲೂರ ತಿಳಿಸಿದ್ದಾರೆ.

> **ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ**
> ಪ್ರತಿಭಾ ಪುರಸ್ಕಾರ: ಸಮಾರಂಭದಲ್ಲಿ ಕಳೆದ 2024-25ನೇ ಸಾಲಿನ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಿ ಗೌರವಿಸಲಾಗುವುದು.

ವೀರಗಲ್ಲು ಪಕ್ಕ ಸ್ಮಾರಕಕ್ಕೆ ಭೂಮಿ ಪೂಜೆ: ಸಿ.ಸಿ.ಪಾಟೀಲ

ನರಗುಂದ: 45ನೆ ರೈತ ಹುತಾತ್ಮ ದಿನಾಚರಣೆಯಂದು ರೈತ ಹುತಾತ್ಮ ವೀರಗಲ್ಲು ಪಕ್ಕ ಸ್ಮಾರಕ ನಿರ್ಮಾಣಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರು ಭೂಮಿ ಪೂಜೆ ನೆರವೇರಿಲಿದ್ದು ರೈತರ ಬಹುದಿನಗಳ ಬೇಡಿಕೆ ಬೇಗನೆ ಈಡೇರುತ್ತಿದ್ದು ಹೆಮ್ಮೆ ತಂದಿದೆ ಎಂದು ಶಾಸಕ ಸಿ.ಸಿ.ಪಾಟೀಲ ನುಡಿದರು.

ಇಲ್ಲಿನ ಬಿಜೆಪಿ ಕಾರ್ಯಾಲಯದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ರೈತ ಮುಖಂಡ ಶಂಕರ ಅಂಬಲಿ ನೇತೃತ್ವದಲ್ಲಿ ರೈತ ಸಂಘದ ಮುಖಂಡರ ಸಮ್ಮುಖದಲ್ಲಿ ಸ್ಮಾರಕ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಲಿದ್ದು ಸ್ಮಾರಕ ನಿರ್ಮಾಣಕ್ಕೆ ದಾನಿಗಳು ಭೂಮಿ ಕೊಡಲು ಮುಂದೆ ಬಂದ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಗಳು, ತಹಸೀಲ್ದಾರರಿಗೆ ಸಚಿವರು ಸೂಚನೆ ನೀಡಿ ಸ್ಮಾರಕ ನಿರ್ಮಾಣಕ್ಕೆ ಸಿದ್ದತೆ ಮಾಡಿಕೊಂಡಿರುವುದು ಹೆಮ್ಮೆ ತರುವ ಸಂಗತಿ ಎಂದರು.

ದೇಸಾಯಿಗೌಡ ಪಾಟೀಲ, ಸಲೀಮ್ ಮೇಗಲಮನಿ, ಶಂಕರಗೌಡ ವೀರನಗೌಡ್ರ, ಎಂ.ಬಿ.ಪಾಟೀಲ ಅವರ ಮನ ವಲಿಸಿ ಸ್ಮಾರಕಕ್ಕೆ ಭೂಮಿ ಬಿಟ್ಟು ಕೊಡಲು ಒಪ್ಪಂದ ಮಾಡಿಕೊಳ್ಳಲಾಗಿತ್ತು, ಕೊನೆಗಳಿಗೆಯಲ್ಲಿ ಇಬ್ಬರು ಹಿಂದೆ ಸರಿದಿದ್ದರಿಂದ ದೇಸಾಯಿಗೌಡ ಪಾಟೀಲ ಮತ್ತು ಸಲೀಮ್ ಮೇಗಲಮನಿ ಅವರು ನೀಡಿದ ಜಾಗೆಯಲ್ಲಿ ಭೂಮಿ ಪೂಜೆ ನೆರವೇರಿಸಲಾಗುವುದು, ಈ ಕಾರ್ಯಕ್ರಮದಲ್ಲಿ ನಾನು ಪಾಲ್ಗೊಳ್ಳುತ್ತಿದ್ದೇನೆ, ಜು.21 ರ ಬೆಳಿಗ್ಗೆ 8 ಗಂಟೆಗೆ ಭೂಮಿ ನೆರವೇರಲಿದೆ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಎ.ಎಂ. ಹುಡೇದ, ಎಸ್.ಆರ್.ಪಾಟೀಲ, ಬಿ.ಬಿ.ಐನಾಪುರ, ದೇಸಾಯಿಗೌಡ ಪಾಟೀಲ, ಚಂದ್ರು ದಂಡಿನ, ವಸಂತ ಮೇಟಿ ಮುಂತಾದವರಿದ್ದರು.

ಬಿಜೆಪಿ ಕಾರ್ಯಾಲಯದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಶಾಸಕ ಸಿ.ಸಿ.ಪಾಟೀಲ ಅವರು ಮಾತನಾಡಿದರು.

ಮಹಾವೇದಿಕೆ ಪತ್ರಿಕಾಗೋಷ್ಠಿ: ರೈತ ಹುತಾತ್ಮ ದಿ.ವೀರಪ್ಪ ಕಡ್ಲಿಕೊಪ್ಪ ವೀರಗಲ್ಲು ಪಕ್ಕ ಸ್ಮಾರಕ ನಿರ್ಮಾಣಕ್ಕೆ ಶಾಸಕ ಸಿ.ಸಿ.ಪಾಟೀಲ ಅವರ ಅಧ್ಯಕ್ಷತೆಯಲ್ಲಿ ಸಚಿವ ಎಚ್.ಕೆ.ಪಾಟೀಲ ಅವರು ಜು.21 ರಂದು ಬೆಳಿಗ್ಗೆ ಭೂಮಿ ನೆರವೇರಿಸಲಿದ್ದಾರೆ ಎಂದು ಮಹದಾಯಿಗಾಗಿ ಮಹಾವೇದಿಕೆ ಅಧ್ಯಕ್ಷ ಶಂಕರ ಅಂಬಲಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ವೀರಗಲ್ಲು ಖಾಸಗಿ ಅವರ ಜಾಗೆಯಲ್ಲಿದೆ ಆ ಜಾಗೆ ಮಾಲೀಕರಿಬ್ಬರು 5.50 ಫೂಟ್ ಜಾಗೆಯನ್ನು ಬಿಟ್ಟು ಕೊಟ್ಟಿದ್ದು ದಾನಿಗಳು ನೀಡಿದ ಜಾಗೆಯಲ್ಲಿ ಹುತಾತ್ಮ ರೈತನ ಸ್ಮಾರಕ ನಿರ್ಮಿಸಲು ಜಿಲ್ಲಾಧಿಕಾರಿಗಳು, ತಹಸೀಲ್ದಾರರಿಗೆ ಸಚಿವರು ಸೂಚನೆ ನೀಡಿದಂತೆ ಭೂಮಿ ಪೂಜೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಅಂದು ಸಚಿವರು, ಶಾಸಕರೊಂದಿಗೆ ಮಾಜಿ ಶಾಸಕ ಬಿ. ಆರ್.ಯಾವಗಲ್ಲ, ಕಾಂಗ್ರೆಸ್ ಮುಖಂಡ ಡಾ. ಸಂಗಮೇಶ ಕೊಳ್ಳಿಯವರ, ಬಿ.ಎಸ್.ಉಪ್ಪಾರ, ರೈತ ಸಂಘದ ರಾಜ್ಯಾಧ್ಯಕ್ಷ ಎಚ್.ಆರ್.ಬಸವರಾಜಪ್ಪ ಹಾಗೂ ರೈತ ಪರ, ಕನ್ನಡ ಪರ, ದಲಿತ ಸಂಘಟನೆಗಳಿಗೆ ಆಹ್ವಾನ ನೀಡಲಾಗಿದೆ ಎಂದರು. ರೈತ ಸಂಘದ ಅಧ್ಯಕ್ಷ ಬಸವರಾಜ ಸಾಬಳೆ, ಚನ್ನು ನಂದಿ, ಬಿ.ಎಸ್.ಉಪ್ಪಾರ, ಮುತ್ತುರಾಜ ಹೊಸಗೂರ, ಸಿದ್ದು ಬಾಗೂರ, ಪ್ರವೀಣ ಎರಗಟ್ಟಿ, ಶಂಕರಗೌಡ ಪಾಟೀಲ ಇದ್ದರು.

ತಾಳ್ಮೆ, ಸಮಯ ಪ್ರಜ್ಞೆ ಸಾಧನೆಯ ಮೊದಲ ಹೆಜ್ಜೆ

ಗಜೇಂದ್ರಗಡ: ತಾಳ್ಮೆ, ಸಮಯ ಪ್ರಜ್ಞೆ ಸಾಧನೆಯ ಮೊದಲ ಹೆಜ್ಜೆ ಆಗಿದೆ. ಇದನ್ನು ವಿದ್ಯಾರ್ಥಿಗಳು ಅರಿತು ತಮ್ಮ ಬದುಕಿನುದ್ದಕ್ಕೂ ಅಳವಡಿಸಿಕೊಂಡರೆ ಯಾವ ಕ್ಷೇತ್ರದಲ್ಲಿ ಬೇಕಾದರೂ ಸಾಧನೆ ಮಾಡಬಹುದು ಈ ನಿಟ್ಟಿನಲ್ಲಿ ಶೈಕ್ಷಣೀಕ ಅಭಿವೃದ್ಧಿಗೆ ರಾಜ್ಯ ಸರಕಾರ ಬದ್ಧವಾಗಿದೆ ಎಂದು ರಾಜ್ಯ ಖನಿಜ ನಿಗಮ ಅಧ್ಯಕ್ಷ, ಶಾಸಕ ಜಿ.ಎಸ್ ಪಾಟೀಲ ಹೇಳಿದರು. ಪಟ್ಟಣದ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ 2025-26ನೇ ಸಾಲಿನ ವಿದ್ಯಾರ್ಥಿಗಳ ಸ್ವಾಗತ ಮತ್ತು ವಿವಿಧ ಸಾಂಘಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು. ಪ್ರಸ್ತುತ ದಿನಗಳಲ್ಲಿ ಸ್ವಾವಲಂಬಿ ಜೀವನ ನಡೆಸಲು ಸಾವಿರಾರು ದಾರಿಗಳಿವೆ ಎಂದರು. ವಿಪ ಸದಸ್ಯ ಎಸ್.ವಿ. ಸಂಕನೂರ ಮಾತನಾಡಿದರು. ಇದೇ ಸಂದರ್ಭದಲ್ಲಿ 2024ನೇ ಸಾಲಿನಲ್ಲಿ ವಿವಿಧ ವಿಭಾಗದಲ್ಲಿ ಉತ್ತಮ ಸಾಧನೆಗೈದ ಕಾಲೇಜಿನ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಮಹಾವಿದ್ಯಾಲಯದಿಂದ ವರ್ಗಾವಣೆಗೊಂಡ ಉಪನ್ಯಾಸಕ ಎಂ.ಎಂ. ಕಂದಗಲ್ಲರನ್ನು ಬೀಳ್ಕೊಡಲಾಯಿತು. ಮುಖಂಡ ಸಿದ್ದಪ್ಪ ಬಂಡಿ, ಪ್ರಾಚಾರ್ಯ ರಮೇಶ ಮರಾಠಿ, ಪುರಸಭೆ ಅಧ್ಯಕ್ಷ ಸುಭಾಸ ಮ್ಯಾಗೇರಿ, ಸ್ಥಾಯಿ ಸಮಿತಿ ಚೇರಮನ್ ಮುದಿಯಪ್ಪ ಮುಧೋಳ, ಪುರಸಭೆ ಸದಸ್ಯರಾದ ಶಿವರಾಜ ಘೋರ್ಪಡೆ, ರಾಜು ಸಾಂಗ್ಲಿಕಾರ, ವೆಂಕಟೇಶ ಮುದಗಲ್ಲ, ಶ್ರೀಧರ ಬಿದರಳ್ಳಿ, ಎಸ್.ಎಚ್. ಮುಚಖಂಡಿ, ಶ್ರೀಧರ ಗಂಜಿಗೌಡರ, ಬಸವರಾಜ ಕೊಟಗಿ ಇದ್ದರು.

ಇಂದು ರೈತ ಹುತಾತ್ಮ ದಿನಾಚರಣೆ | ವಿವಿಧ ಪಕ್ಷ, ಸಂಘಟನೆಗಳಿಂದ ಶ್ರದ್ಧಾಂಜಲಿ

ಮಲಪ್ರಭಾ ಜಲಾಶಯಕ್ಕೆ ಬಾರದ ನೀರು: ರೈತರ ಆಕ್ರೋಶ

ಪ್ರಭು ಗುಡಾರದ ನರಗುಂದ

ರೈತರ ಜಮೀನುಗಳಿಗೆ ನೀರು ಹರಿಸದೆ ರೈತರಿಂದ ಕರ ವಸೂಲಿ ಮಾಡುವ ಸರಕಾರದ ವಿರುದ್ಧ 1980ರಲ್ಲಿ ಬಂಡಾಯ ಕಹಳೆಯನ್ನು ಊದಿ ಪೋಲಿಸರ ಗುಂಡಿಗೆ ಎದೆಯೊಡ್ಡಿ ಹುತಾತ್ಮರಾದ ವೀರಪ್ಪ ಕಡ್ಲಿಕೊಪ್ಪ ಅವರ ಸ್ಮರಣಾರ್ಥ ಇಂದು 45ನೆ ವರ್ಷದ ರೈತ ಹುತಾತ್ಮ ದಿನಾಚರಣೆ ನಡೆಯಲಿದ್ದು ವಿವಿಧ ರಾಜಕೀಯ ಪಕ್ಷಗಳು, ಕನ್ನಡ ಪರ ಸಂಘಟನೆಗಳು ಹುತಾತ್ಮ ವೀರಗಲ್ಲಿಗೆ ಬಂದು ಶ್ರದ್ಧಾಂಜಲಿ ಅರ್ಪಿಸಲಿವೆ.

ಕುಡಿಯುವ ನೀರಿಗಾಗಿ ಹೋರಾಟ ಮಾಡುತ್ತಿರುವ ರೈತರಿಗೆ 45 ವರ್ಷ ಕಳೆದರು ನ್ಯಾಯ ಸಿಕ್ಕಿಲ್ಲ, ದೇವರು ಕೊಟ್ಟರೂ ಪೂಜಾರ ಕೊಡವಲ್ಲ ಎಂಬಂತೆ ಸುದೀರ್ಘ ಹೋರಾಟದ ನಂತರ ನ್ಯಾಯಾಧೀಕರಣ ರಾಜ್ಯಕ್ಕೆ ನೀರು ಹಂಚಿಕೆ ಮಾಡಿ ಆದೇಶ ನೀಡಿದೆ, ಆದೇಶದಂತೆ ಮಲಪ್ರಭಾ ಜಲಾಶಯಕ್ಕೆ 13 ಟಿಎಂಸಿ ನೀರು ಹರಿಸಬೇಕಾದ ಆಳುವ ನಾಯಕರು ರಾಜಕೀಯ ಕೆಸರಾಟದಲ್ಲಿ ತೊಡಗಿ ವಿಳಂಭದೋರಣೆ ಅನುಸರಿಸುತ್ತಾ ಬಂದಿದ್ದು ಜಗಜ್ಜಾಹೀರ.

ನರಗುಂದ ರೈತರ ಚಳುವಳಿಯಲ್ಲಿ ಪೋಲಿಸರ ಗುಂಡಿಗೆ ಬಲಿಯಾದ ದಿ.ವೀರಪ್ಪ ಕಡ್ಲಿಕೊಪ್ಪ ಅವರ ಬಾಗಿಲು ಇಲ್ಲದ ವೀರಗಲ್ಲು.

ಇನ್ನೊಂದು ಕಡೆ ನೀರಾವರಿ ಕರ ಭರಿಸಿದ ರೈತರ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಂಡ ಸರ್ಕಾರ 45 ವರ್ಷ ಕಳೆದರೂ ರೈತರ ಜಮೀನಿನ ಪಹಣಿ ಪತ್ರಿಕೆಯಲ್ಲಿ ಸರಕಾರ ಎಂದು ನಮೂದಿಸಿ ರೈತರಿಗೆ ಸಿಗಬೇಕಾದ ಸೌಲಭ್ಯಗಳು ಸಿಗದಂತೆ ಮಾಡಿದೆ, ಸರಕಾರ ಹೆಸರನ್ನು ತೆಗೆದು ರೈತರ ಹೆಸರನ್ನು ನಮೋದಿಸಿ ನಮ್ಮ ಜಮೀನನ್ನು ನಮಗೆ ಮರಳಿಸಿಬೇಕು ಎಂದು ಒತ್ತಾಯಿಸಿ ಬೀದಿಗೆ ಇಳಿಯುವಂತೆ ಮಾಡಿದೆ. ರೈತರ ಹೆಸರನ್ನು ಹೇಳಿಕೊಂಡು ಹಸಿರು ಟಾವಲ್ ಹಾಕಿಕೊಂಡು ಪೋಜು ಕೊಡುತ್ತಾ ರೈತರ ಪರ ಮೊಸಳೆ ಕಣ್ಣೀರು ಹಾಕುವ ರಾಜಕಾರಣಿಗಳು ವರ್ಷಕ್ಕೊಮ್ಮೆ ಬಂಡಾಯ ನೆಲಕ್ಕೆ ಬಂದು ಹುತಾತ್ಮ ವೀರಗಲ್ಲಿಗೆ ಮಾಲಾರ್ಪಣೆ ಮಾಡುವ ರಾಜಕಾರಣಿಗಳು ಮತ್ತೆ ಇತ್ತ ಹೊರಳಿ ನೋಡುವುದಿಲ್ಲ. ಕಳೆದ 45 ವರ್ಷ ಕಳೆದರೂ ವೀರಗಲ್ಲು ಸ್ವತಂತ್ರವಾಗಿಲ್ಲ, ವೀರಗಲ್ಲಿಗೆ ಇದ್ದ ಬಾಗಿಲು ಮುರಿದ್ದು ಮರು ಜೋಡಣೆ ಮಾಡಿ ಗೌರವ ಸಲ್ಲಿಸಲಾಗದ ಅಧಿಕಾರಿಗಳು. ಖಾಸಗಿ ಜಾಗೆಯಲ್ಲಿರುವ ವೀರಗಲ್ಲು, ಪಕ್ಕದಲ್ಲಿರುವ ಹೋರಾಟ ವೇದಿಕೆಗಳನ್ನು ತೆರವುಗೊಳಿಸಿ ನಮ್ಮ ಜಮೀನನ್ನು ಬಿಟ್ಟುಕೊಡಬೇಕು ಎಂದು ಕೋರ್ಟ ಮೂಲಕ ಆದೇಶ ತಂದಿದ್ದಾರೆ. ಈ ನಡುವೆ ಜಮೀನು ಖರೀದಿಸಿದವರು ಹುತಾತ್ಮನ ಸ್ಮಾರಕ ನಿರ್ಮಿಸಲು 5.50 ಫೂಟ್ ಜಾಗೆಯನ್ನು ದಾನವಾಗಿ ನೀಡಲು ಮುಂದೆ ಬಂದಿದ್ದಾರೆ, ಇನ್ನೊಂದು ಕಡೆ ವೀರಗಲ್ಲು ಪಕ್ಕ ಕಟ್ಟಿಗೆ ಅಡ್ಡೆಯ ಮಾಲೀಕರನ್ನು ತೆರವುಗಳಿಸಿದರೆ ನಾವು ಸ್ಮಾರಕ ನಿರ್ಮಿಸಲು ಜಾಗೆ ಕೊಡುವುದಾಗಿ ಶರತ್ತು ಹಾಕಿದ್ದಾರೆ. ಈ ಗೊಂದಲಗಳ ನಡುವೆ ಸ್ಮಾರಕ ನಿರ್ಮಿಸಲು ಜಾಗೆ ನೀಡಿದ್ದರಿಂದ ಉಸ್ತುವಾರಿ ಸಚಿವರು, ಶಾಸಕರು ಭೂಮಿ ಪೂಜೆಗೆ ಮುಂದಾಗಿರುವುದು ರೈತರನ್ನು ಸಮಾಧಾನ ಪಡಿಸುವುದಕ್ಕಾಗಿ ಈ ಭೂಮಿ ಪೂಜೆ ಎಂಬ ಗುಲ್ಲು ಎದ್ದಿದೆ. ಒಟ್ಟಿಗೆ ಪ್ರತಿ ವರ್ಷದಂತೆ 45ನೇ ರೈತ ಹುತಾತ್ಮ ದಿನಾಚರಣೆಯಂದು ಬೆಳಗ್ಗೆ 9ರಿಂದ 1 ಗಂಟೆ ವರೆಗೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್, ಕಳಸಾ ಬಂಡೂರಿ ಹೋರಾಟ ಸಮಿತಿ, ಮಹದಾಯಿಗಾಗಿ ಮಹಾವೇದಿಕೆ, ಕನ್ನಡ ಪರ ಸಂಘಟನೆಗಳು, ರೈತ ಪರ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಬಂದು ವೀರಗಲ್ಲಿಗೆ ಮಾಲಾರ್ಪಣೆ ಮಾಡಿ ರೈತ ಹುತಾತ್ಮರ ಆತ್ಮಕ್ಕೆ ಶಾಂತಿ ಕೋರಲಿದ್ದಾರೆ.

ಸಮಾಚಾರ ಸಣ್ಣದಲ್ಲ

ತಂಗಿ ಜೊತೆ ಪೇಟೆ ಸುತ್ತಲು ಹೋದವನು ನಾಪತ್ತೆ

ಭಟ್ಕಳ: ತಂಗಿಜತೆ ಭಟ್ಕಳ ಪೇಟೆ ತಿರುಗಲು ಹೋಗಿದ್ದ 18 ವರ್ಷದ ಜಿಯಾನ ಮುನಾಫ್ ಈವರೆಗೂ ಮನೆಗೆ ಬಂದಿಲ್ಲ. ಜಿಯಾನ ಮುನಾಫ್ ಎಲ್ಲಿ ಹೋದರು? ಎಂದು ಜೊತೆಗಿದ್ದ ತಂಗಿಗೂ ಗೊತ್ತಾಗಿಲ್ಲ! ಭಟ್ಕಳದ ಶಿರಾಲಿ ಬಳಿಯ ತಟ್ಟಿಹಕ್ಕಲುವಿನಲ್ಲಿ ಜಿಯಾನ ಮುನಾಫ್ ವಾಸ ಇದ್ದರು. ಜುಲೈ 18ರ ಸಂಜೆ 4.45ಕ್ಕೆ ಅವರು ಭಟ್ಕಳಕ್ಕೆ ಹೋಗಿ ಬರುವುದಾಗಿ ಮನೆಯಲ್ಲಿ ಹೇಳಿದ್ದರು. ಆಗ, ಜಿಯಾನ್ ಮುನಾಫ್ ಅವರ ತಂಗಿಯೂ ಜತೆ ಬಂದರು. ಅವರಿಬ್ಬರು ರಿಕ್ಷಾ ಏರಿ ಭಟ್ಕಳ ಪೇಟೆ ಸುತ್ತಾಡಿದರು. 5.45ರ ವೇಳೆಗೆ ತಟ್ಟಿಹಕ್ಕಲು ಮೈದಾನದ ಬಳಿ ತಂಗಿಯನ್ನು ಬಿಟ್ಟ ಜಿಯಾನ ಮುನಾಫ್ ಸ್ನೇಹಿತೆಯ ಮನೆಗೆ ಹೋಗಿ ಬರುವುದಾಗಿ ಹೇಳಿದರು. ಅದೇ ರಿಕ್ಷಾ ಏರಿ ಜಿಯಾನ್ ಮುನಾಫ್ ಮುಂದೆ ಹೋದರು. ಆದರೆ, ಮರುದಿನ ಬೆಳಗಾದರೂ ಜಿಯಾನ್ ಮುನಾಫ್ ಮನೆಗೆ ಬರಲಿಲ್ಲ. ಸಂಜೆಯಾದರೂ ಅವರ ಸುಳಿವು ಸಿಗಲಿಲ್ಲ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಗುಂಪುಗಳ ನಡುವೆ ಮಾರಾಮಾರಿ: ಚಾಕು ಇರಿತ

ಹಳಿಯಾಳ: ಯಲ್ಲಮ್ಮ ಬಾರಿನಲ್ಲಿ ಎರಡು ಗುಂಪುಗಳ ನಡುವೆ ಮಾರಾಮಾರಿ ನಡೆದಿದ್ದು, ಮದ್ಯದ ನಶೆಯಲ್ಲಿದ್ದ ಸಮಿವುಲ್ಲಾ ಬೇಪಾರಿ ಎಂಬಾತ ಮಹಮದ್ ಸಾಧಿಕ್ ಎಂಬಾತನಿಗೆ ಚಾಕು ವಿನಿಂದ ಇರಿದಿದ್ದಾನೆ. ಹಳಿಯಾಳದ ಕಸಬಾಗಲ್ಲಿಯಲ್ಲಿ ಪಾಸ್ಟ್‌ಫುಡ್ ಅಂಗಡಿ ನಡೆಸುವ ಯುನುಸ್ ಅಹ್ಮದ್ ಅವರು ಜುಲೈ 17ರ ಸಂಜೆ ಹಳಿಯಾಳದ ರಾಮದೇವಗಲ್ಲಿಯಲ್ಲಿರುವ ಯಲ್ಲಮ್ಮ ಬಾರ್‌ಗೆ ಹೋಗಿದ್ದರು. ತಮ್ಮೊಂದಿಗೆ ಫಿಶ್ ಮಾರ್ಕೆಟ್ ಬಳಿಯ ಸ್ಲಂ ಏರಿಯಾದ ಮಹಮದ್ ಸಾಧೀಕ್ ಅವರನ್ನು ಕರೆದೊಯ್ದಿದ್ದರು.

ಬಾರಿನಲ್ಲಿ ಪೇಂಟಿಂಗ್ ಕೆಲಸ ಮಾಡುವ ಸಮಿವುಲ್ಲಾ ಬೇಪಾರಿ ಸಹ ಬಂದಿದ್ದರು. ಅವರ ಜತೆ ಸ್ನೇಹಿತರಾದ ಪ್ರತೀಕ ಕಠಾರಿ, ದವಾ ಪೇಂಟರ್ ಸಹ ಇದ್ದರು. ಈ ಎಲ್ಲರೂ ಸೇರಿ ಕಂಠಪೂರ್ತಿ ಕುಡಿದಿದ್ದು, ಈ ನಡುವೆ ಸಮಿವುಲ್ಲಾ ಬೇಪಾರಿ ಎಂಬಾತ ಮಹಮದ್ ಸಾಧಿಕ್ ಮಧ್ಯೆ ಜಗಳ ಶುರುವಾಯಿತು. ಕಿಸೆಯಲ್ಲಿದ್ದ ಚಾಕು ತೆಗೆದ ಸಮಿವುಲ್ಲಾ ಮಹಮದ್ ಸಾಧಿಕ್ ಕುತ್ತಿಗೆಗೆ ಚಾಕುವಿನಿಂದ ಇರಿದು ಗಾಯ ಮಾಡಿದ್ದ. ಅದಾದ ನಂತರ ಕಿವಿಗೆ ಸಹ ಚಾಕು ಚುಚ್ಚಿದ್ದ. ಪರಿಣಾಮ ಮಹಮದ್ ಸಾಧೀಕ್ ಭಾರೀ ಪ್ರಮಾಣದಲ್ಲಿ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಹಳಿಯಾಳ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ದಾಖಲೆಗಳ ಡಿಜಿಟಲೀಕರಣ ಆದ್ಯತೆ: ಜಿಲ್ಲಾಧಿಕಾರಿ

ಹಾವೇರಿ: ಕಂದಾಯ ಇಲಾಖೆಯ ಕೆಲಸಗಳನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ಇ-ಆಫೀಸ ವ್ಯವಸ್ಥೆ ಅಳವಡಿಸಲಾಗಿದೆ. ಇದನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದರ ಮೂಲಕ ಕಡತಗಳನ್ನು ತುರ್ತಾಗಿ ವಿಲೇಮಾಡಬಹುದು ಇದರಿಂದ ಜನರ ಕೆಲಸಗಳನ್ನು ವಿಳಂಭ ಮಾಡದೇ ತುರ್ತಾಗಿ ಮಾಡಿಕೊಡಬಹುದಾಗಿದೆ ಎಂದು ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ್ ದಾನಮ್ಮನವರ ಹೇಳಿದರು. ಶುಕ್ರವಾರ ಶಿಗ್ಗಾಂವ ಮತ್ತು ಹಿರೇಕೆರೂರ ತಹಸೀಲ್ದಾರ್ ಕಚೇರಿಗಳಿಗೆ ಭೇಟಿ ನೀಡಿ ಪ್ರಗತಿ ಪರಿಶೀಲನೆ ಸಭೆ ನಡೆಸಿ ಮಾತನಾಡಿದ ಅವರು, ಜಿಲ್ಲೆಯ ಎಲ್ಲ ತಾಲೂಕ ತಹಸೀಲ್ದಾರ್ ಕಚೇರಿಗಳ ರೆಕಾರ್ಡ್ ರೂಮನಲ್ಲಿರುವ ಜನ ಸಾಮಾನ್ಯರ ದಾಖಲೆಗಳನ್ನು ಸ್ಕ್ಯಾನ್ ಮಾಡುವ ಮೂಲಕ ಶಾಶ್ವತವಾಗಿ ಅವುಗಳನ್ನು ಉಳಿಸಲು ಡಿಜಿಟಲೀಕರಣ ವ್ಯವಸ್ಥೆ ಜಾರಿಗೊಳಿಸಿದೆ. ದಾಖಲೆಗಳ ರಕ್ಷಣೆಗೆ ಉತ್ತಮ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದ್ದು ಈ ನಿಟ್ಟಿನಲ್ಲಿ ಜನಸಾಮಾನ್ಯರ ಾಖಲೆಗಳನ್ನು ರಕ್ಷಿಸಿ,ಅವರುಗಳಿಗೆ ಸುಲಭವಾಗಿ ದೊರೆಯುವಂತೆ ಮಾಡುವುದಾಗಿದೆ. ಇತ್ತೀಚ್ಚಿಗೆ ಕಂದಾಯ ಸಚಿವರು ಜಿಲ್ಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಈ ಕುರಿತು ವಿಷಯ ಪ್ರಸ್ತಾಪಿಸಿದಾಗ ಯಾವುದೇ ಕಚೇರಿಗಳು ನಿಗದಿತ ಗುರಿ ತಲುಪಲಿರುವುದಿಲ್ಲ ಇದನ್ನು ಗಂಭೀರವಾಗಿ ಪರಿಗಣಿಸಿದ್ದು ಕೂಡಲೇ ಆಗಿರುವ ತಾಂತ್ರಿಕ ಸಮಸ್ಯೆಗಳನ್ನು ಸರಿ ಪಡಿಸಿ ವಿಳಂಭಮಾಡದೇ ದಾಖಲೆಗಳ ಡಿಜಿಟಲೀಕರಣಕ್ಕೆ ಒತ್ತು ನೀಡಬೇಕು ಎಂದರು. ಸಭೆಯಲ್ಲಿ ತಹಸೀಲ್ದಾರ್ ರೇಣುಕಾ , ಗ್ರೇಡ್ 2 ತಹಶೀಲ್ದಾರ ಸಿದ್ದನಗೌಡ್ರ, ಉಪ ತಹಶೀಲ್ದಾರರು, ಕಂದಾಯ ನಿರೀಕ್ಷಕರು, ಗ್ರಾಮಾಡಳಿತ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಪಿಎಸ್‌ಐ ಫಕೀರಪ್ಪ ಘಟಕಾಂಬ್ಳೆ ಆತ್ಮಹತ್ಯೆ

ಶಿರಸಿ: ಇಲ್ಲಿನ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಎಎಸ್‌ಐ ಆಗಿ ಪದೋನ್ನತಿಯೊಂದಿಗೆ ಮಂಗಳೂರಿನ ಬಂಟ್ವಾಳ ಪೊಲೀಸ್ ಠಾಣೆಯಲ್ಲಿ ಪಿಎಸ್‌ಐ ಆಗಿ ಸೇವೆ ಸಲ್ಲಿಸುತ್ತಿದ್ದ ಕೀರಪ್ಪ ಘಟಕಾಂಬ್ಳೆಯವರು ತಾವು ತಂಗಿದ್ದ ರೂಮಿನಲ್ಲಿಯೇ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ.

ಮೂಲತಃ ಹಳಿಯಾಳದ ನಿವಾಸಿಯಾಗಿದ್ದ ಅವರು ಪತ್ನಿ ಎರಡು ಮಕ್ಕಳು ಮತ್ತು ಬಂಧು ಮಿತ್ರರನ್ನು ಅಗಲಿದ್ದಾರೆ.

ಶಿರಸಿ ಗ್ರಾಮೀಣ ಠಾಣೆಯಿಂದ ವರ್ಗಾವಣೆಗೊಂಡು ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಎಎಸ್‌ಐ ಕಾರ್ಯ ನಿರ್ವಹಿಸುತ್ತಿದ್ದ ಅವರಿಗೆ ಕಳೆದ ಎಂಟು ತಿಂಗಳ ಹಿಂದಷ್ಟೇ ಪದೋನ್ನತಿಗೊಂಡು ಪಿಎಸ್‌ಐ ಆಗಿ ಬಂಟ್ವಾಳ ಪೊಲೀಸ್ ಠಾಣೆಗೆ ವರ್ಗಾವಣೆಗೊಂಡಿದ್ದರಿಂದ ಅವರು ತಮ್ಮ ಸಂಸಾರವನ್ನು ಶಿರಸಿಯಲ್ಲಿಯೇ ಬಿಟ್ಟು ತಾವು ಬಂಟ್ವಾಳದಲ್ಲಿ ಸೇವೆ ಸಲ್ಲಿಸುತ್ತಿದ್ದರು.

ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನ । ಚುಟುಕು ಭೂಷಣ ಪ್ರಶಸ್ತಿ ಪ್ರದಾನ । ಶ್ರೀ ಶಿವಲಿಂಗ ಸ್ವಾಮೀಜಿ

ಶಿಕ್ಷಣದಲ್ಲಿ ಕನ್ನಡದ ಎಲ್ಲ ಸಾಹಿತ್ಯ ಪ್ರಕಾರಗಳ ಬಳಕೆ ಆಗಲಿ

ಶಿರಸಿ: ಅನಾಗರಿಕ ಸಂಸ್ಕೃತಿಯನ್ನು ದೂರಗೊಳಿಸಿ, ಸಮಾಜವನ್ನು ಒಳ್ಳೆಯ ದಾರಿಗೆ ತರುವ ಜವಾಬ್ದಾರಿಗಳು ಮಠಗಳ ಮೇಲಿದೆ ಎಂದು ಬಣ್ಣದಮಠದ ಶ್ರೀ ಶಿವಲಿಂಗ ಸ್ವಾಮೀಜಿ ನುಡಿದರು.

ಭಾನುವಾರ ಬಣ್ಣದಮಠದ ವಚನ ಮಂದಿರಲ್ಲಿ ಕರ್ನಾಟಕ ಚುಟುಕು ಸಾಹಿತ್ಯ ಪರಿಷತ್ ಶಿರಸಿ ಶೈಕ್ಷಣಿಕ ಜಿಲ್ಲೆ, ಬಣ್ಣದ ಮಠ, ಲಯನ್ಸ್ ಕ್ಲಬ್ ಶಿರಸಿ ಸಹಯೋಗದಲ್ಲಿ ಹಮ್ಮಿಕೊಂಡ ಜಿಲ್ಲಾ ಚುಟುಕು ಸಾಹಿತ್ಯ ಸಮ್ಮೇಳನ 2025 ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಸಮಾರಂಭದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ನಿಸರ್ಗದಲ್ಲಿ ಸಹಜವಾಗಿ ಉತ್ಪತ್ತಿಯಾಗುವುದು ಸಾಹಿತ್ಯ. ಮಕ್ಕಳಿಗೆ ಶಿಕ್ಷಣದ ಜತೆ ಉತ್ತಮ ಸಂಸ್ಕಾರ ನೀಡುವುದರಿಂದ ಸಮಾಜದಲ್ಲಿ ಆಗುತ್ತಿರುವ ಅನಾಚಾರಗಳನ್ನು ತಪ್ಪಿಸಲು ಸಾಧ್ಯ ಎಂದರು.

ಭಾರತದಲ್ಲಿ ಕೈ ಮುಗಿಯುವ ಪದ್ಧತಿ ರೂಢಿಯಲ್ಲಿದ್ದರೆ, ವಿದೇಶಗಳಲ್ಲಿ ಕೈ ಕೊಡುವ ಪದ್ಧತಿ ಇದೆ. ಭಾರತೀಯರು ಎಂದಿಗೂ ಕೈಕೊಡುವುದಿಲ್ಲ, ಕೈಮುಗಿದು ಎಲ್ಲರೂ ನಮ್ಮವರು ಎಂದು ಹತ್ತಿರದಿಂದ ಆತಿಥ್ಯ ನೀಡುತ್ತಾರೆ ಎಂದು ಹೇಳಿದರು.

ಕೃಷಿ ಉತ್ತಮ ಕಾರ್ಯವಾಗಿದ್ದು, ರೈತರು ಎಲ್ಲರಿಗೂ ಹಂಚಿ ತಿನ್ನುತ್ತಾರೆ. ಆದರೆ ರೈತರಿಗೆ ಕಷ್ಟ ಮುಗಿಯುವುದಿಲ್ಲ. ಕೇವಲ 20 ಕೋಟಿ ರೈತರು, ದೇಶದ 150 ಕೋಟಿ ಜನರಿಗೆ ಆಹಾರ ನೀಡುತ್ತಿದ್ದಾರೆ ಎಂದರು.

ಸಮ್ಮೇಳನಾಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಜಿ.ವಿ.ಭಟ್ಟ ಕೊಪ್ಪಲತೋಟ ಮಾತನಾಡಿ, ಸಾಹಿತ್ಯವೆಂದರೆ ಅದು ಮನುಷ್ಯನ ಸೃಜನಶೀಲ ಅಭಿವ್ಯಕ್ತಿ. ಅದನ್ನು ಅಧ್ಯಯನದಿಂದ ಉಳಿಸಿ-ಬೆಳೆಸಿಕೊಳ್ಳಬಹುದು. ಸಾಹಿತಿ, ಕವಿ, ಚಿಂತನಕನಾಗುತ್ತೇನೆ ಎಂದು ಕನಸು ಕಂಡವನಲ್ಲ. ಸಂಗೀತ, ಸಾಹಿತ್ಯ, ಕಲೆ ಇವುಗಳಲ್ಲಿ ಚಿಕ್ಕಂದಿನಿಂದಲೂ ಆಸಕ್ತಿ ಇರುವುದರಿಂದ ಆ ಅಭಿರುಚಿ ನನ್ನನ್ನು ಇಲ್ಲಿಯವರೆಗೂ ತಂದು ನಿಲ್ಲಿಸಿದೆ ಎಂದರು.

ಕಾರ್ಯಕ್ರಮದಲ್ಲಿ ಮುಕ್ತಕ ಕವಿ ಕೃಷ್ಣ ಪದಕಿ, ಚುಟುಕು ಕವಿ ಜಗದೀಶ ಭಂಡಾರಿ ಹಾಗೂ ಚುಟುಕು ಕವಯತ್ರಿ ಭಾರತಿ ನಲವಡೆ ಅವರಿಗೆ ಚುಟುಕು ಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಚುಸಾಪ ರಾಜ್ಯ ಸಂಚಾಲಕ ಕೃಷ್ಣಮೂರ್ತಿ ಕುಲಕರ್ಣಿ, ರಾಜ್ಯ ಸಲಹಾ ಸಮಿತಿ ಸದಸ್ಯ ಜಿ.ಎ.ಹೆಗಡೆ ಸೋಂದಾ, ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಮಂಜುನಾಥ ಹೆಗಡೆ ಹೂಡ್ಲಮನೆ, ಪದಾಧಿಕಾರಿ ದೀಪಾಲಿ ಸಾಮಂತ, ಗುರುಸಿದ್ದರಾಜ ಮಹಿಳಾ ಮಂಡಳ ಅಧ್ಯಕ್ಷೆ ವೀರಮ್ಮ ಹಿರೇಮಠ, ಲಯನ್ಸ್ ಕ್ಲಬ್ ಅಧ್ಯಕ್ಷ ಗುರುರಾಜ ಹೊನ್ನಾವರ ಮತ್ತಿತರರು ಉಪಸ್ಥಿತರಿದ್ದರು.

ಶಿರಸಿ ಶೈಕ್ಷಣಿಕ ಜಿಲ್ಲೆಯ ಕಚುಸಾಪ ಅಧ್ಯಕ್ಷ ಮನೋಹರ ಮಲ್ಮನೆ ಸ್ವಾಗತಿಸಿದರು. ಉಪನ್ಯಾಸಕಿ ಭವ್ಯಾ ಹಳೆಯೂರ ನಿರೂಪಿಸಿದರು. ಶುಶ್ರಾವ್ಯ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳು ಸ್ವಾಗತ ಗೀತೆ, ನಾಡಗೀತೆ ಹಾಗೂ ರೈತ ಗೀತೆ ಹಾಡಿದರು.

ನಿರ್ಣಯಗಳು

- ಎಲ್ಲ ಭಾಷೆಯ, ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಶಿಶು ಸಾಹಿತ್ಯಗಳ ಕೊರತೆಯಾಗಿದೆ. ಶಿಶು ಸಾಹಿತ್ಯವನ್ನು ಬರೆಯುವ ಅಗತ್ಯ ಬಹಳ ಇದೆ.
- ಯಾವುದೇ ಸಮ್ಮೇಳನವನ್ನು ನಡೆಸುವಾಗ ಅದಕ್ಕೆ ಆರ್ಥಿಕ ನೆರವನ್ನು ಆಡಳಿತಾರೂಢ ಸರ್ಕಾರವೇ ಭರಿಸಿದರೆ ಒಳಿತು.
- ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು ಯೋಗ. ಉತ್ತಮ ವೈದ್ಯರು, ಅತ್ಯುತ್ತಮವಾದ ವ್ಯವಸ್ಥೆ ನೀಡಬೇಕು. ಶಿರಸಿಯಲ್ಲಿ ಸಾಹಿತ್ಯ ಭವನ ನಿರ್ಮಾಣವಾಗಬೇಕು.
- ನಗರದಲ್ಲಿ ವಾಹನ ನಿಲುಗಡೆಗೆ ಸುಸಜ್ಜಿತವಾದ ವ್ಯವಸ್ಥೆ ಕೈಗೊಳ್ಳಬೇಕು.
- ನಗರದಲ್ಲಿ ನೈರ್ಮಲ್ಯದ ಕಡೆಗೆ ವಿಶೇಷ ಮುತುವರ್ಜಿ ವಹಿಸಬೇಕು.
- ಶಿಕ್ಷಣ ಪದ್ಧತಿಯಲ್ಲಿ ಕನ್ನಡದ ಎಲ್ಲ ಸಾಹಿತ್ಯ ಪ್ರಕಾರಗಳ ಬಳಕೆ
- ಸುಸಜ್ಜಿತವಾದ ವ್ಯಾಯಾಮ ಶಾಲೆ ಮಂಜೂರಿ.
- ಸಾಹಿತ್ಯ ಸಾಧನೆ ಮಡಿದ ವಯೋವೃದ್ದರಿಗೆ ಮಾಶಾಸನ ನೀಡಬೇಕು.

ಅರಣ್ಯಭೂಮಿ ತೆರವು: ಕರ್ನಾಟಕದಲ್ಲಿ 10,000 ಎಕರೆ ಗುರಿ

ಶಿರಸಿ: ಕರ್ನಾಟಕ ರಾಜ್ಯದಲ್ಲಿ ಪ್ರಸಕ್ತ ವರ್ಷ 10,000 ಎಕರೆ ಅರಣ್ಯ ಭೂಮಿ ಒತ್ತುವರಿಯನ್ನು ತೆರವುಗೊಳಿಸಲು ಅರಣ್ಯ ಇಲಾಖೆ ನಿರ್ಧರಿಸಿದೆ. ಈ ಆದೇಶವು ಅರಣ್ಯವಾಸಿಗಳಲ್ಲಿ ಆತಂಕ ಮೂಡಿಸಿದ್ದು, ಅರಣ್ಯ ಹಕ್ಕು ಕಾಯಿದೆಯ ಅಡಿಯಲ್ಲಿ ಅರ್ಜಿಗಳು ವಿಚಾರಣಾ ಹಂತದಲ್ಲಿರುವಾಗ ಈ ಕ್ರಮ ಅವೈಜ್ಞಾನಿಕ ಎಂದು ರಾಜ್ಯ ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಅರಣ್ಯ ಇಲಾಖೆಯ ಆದೇಶದ ಪ್ರಕಾರ, ಪ್ರಸಕ್ತ ವರ್ಷ ಉತ್ತರ ಕನ್ನಡ ಜಿಲ್ಲೆಯಲ್ಲಿ 1450 ಎಕರೆ ಅರಣ್ಯ ಭೂಮಿಯನ್ನು ತೆರವುಗೊಳಿಸುವ ಗುರಿ ಹೊಂದಲಾಗಿದೆ. ಇದು ಜಿಲ್ಲೆಯ ಅರಣ್ಯವಾಸಿಗಳ ಆತಂಕಕ್ಕೆ ಕಾರಣವಾಗಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮೀನಾಕ್ಷಿ ನೇಗಿ ಅವರು ಈ ಕುರಿತು ಲಿಖಿತ ಆದೇಶ ಹೊರಡಿಸಿದ್ದಾರೆ. ಈ ಆದೇಶದಲ್ಲಿ, ಒಕ್ಕಲೆಬ್ಬಿಸುವ ಪ್ರಕ್ರಿಯೆಯನ್ನು ಪ್ರಮುಖ ಕಾರ್ಯಕ್ಷಮತೆ ಸೂಚಕಗಳ ಅಡಿಯಲ್ಲಿ ಮೇಲ್ವಿಚಾರಣೆ ಮಾಡಲಾಗುವುದು ಮತ್ತು ಅಧೀನ ಅಧಿಕಾರಿಗಳು ಅರಣ್ಯ ಭೂಮಿಯಿಂದ ಒತ್ತುವರಿದಾರರನ್ನು ತೆರವುಗೊಳಿಸಲು ಕಟ್ಟುನಿಟ್ಟಿನ ನಿಯಮಗಳನ್ನು ಪಾಲಿಸಬೇಕು ಎಂದು ಸೂಚಿಸಲಾಗಿದೆ. ಪರಿಸರ ಸಮತೋಲನ ಕಾಪಾಡುವ ಉದ್ದೇಶದಿಂದ ಅರಣ್ಯ ಒತ್ತುವರಿ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದು ಅತ್ಯಗತ್ಯ ಎಂದು ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ. 2025-26ನೇ ಸಾಲಿಗೆ ವಿವಿಧ ಅರಣ್ಯ ಸರ್ಕಲ್‌ಗಳಿಗೆ ತೆರವುಗೊಳಿಸುವ ಗುರಿಗಳನ್ನು ಸಹ ಆದೇಶದಲ್ಲಿ ನಮೂದಿಸಲಾಗಿದೆ.

ವಿವಿಧ ಅರಣ್ಯ ಸರ್ಕಲ್‌ಗಳಲ್ಲಿ ತೆರವು ಗುರಿ

ರಾಜ್ಯದಲ್ಲಿ ಒಟ್ಟು ಒತ್ತುವರಿ ಪ್ರದೇಶಗಳಲ್ಲಿ ಶಿವಮೊಗ್ಗ ಸರ್ಕಲ್‌ನಲ್ಲಿ ಅತಿ ಹೆಚ್ಚು ಒತ್ತುವರಿ (79,560.7 ಎಕರೆ) ಇದ್ದು, ಪ್ರಸಕ್ತ 2025-26ನೇ ಸಾಲಿನಲ್ಲಿ 3650 ಎಕರೆ ತೆರವುಗೊಳಿಸುವ ಗುರಿ ಹೊಂದಲಾಗಿದೆ.

ಪ್ರಮುಖ ಸರ್ಕಲ್‌ಗಳ ವಿವರಗಳು ಕೆಳಗಿನಂತಿವೆ

ಅರಣ್ಯ ಸರ್ಕಲ್ ವಿಭಾಗ	ಒಟ್ಟು ಅತಿಕ್ರಮಣ ಪ್ರದೇಶ (ಎಕರೆ)	2025-26ರಲ್ಲಿ ಒಕ್ಕಲೆಬ್ಬಿಸುವ ಗುರಿ (ಎಕರೆ)
ಶಿವಮೊಗ್ಗ (ಸಾಗರ, ಶಿವಮೊಗ್ಗ, ವನ್ಯಜೀವಿ ಭದ್ರಾವತಿ, ಶಿವಮೊಗ್ಗ)	79,560.7	3650
ಕೆನರಾ (ಶಿರಸಿ, ಹೊನ್ನಾವರ, ಹಳಿಯಾಳ)	28,033	1450
ಚಿಕ್ಕಮಗಳೂರು (ಚಿಕ್ಕಮಗಳೂರು, ಕೊಪ್ಪ, ಭದ್ರಾ ಟೈಗರ್ ರಿಸರ್ವ್)	27,818	1250
ಬೆಂಗಳೂರು (ಬೆಂಗಳೂರು ನಗರ, ಗ್ರಾಮೀಣ, ರಾಮನಗರ, ಚಿಕ್ಕಬಳ್ಳಾಪುರ, ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್)	15,070.7	750
ಹಾಸನ (ಹಾಸನ, ತುಮಕೂರು)	13,710.8	700

ರಾಜಕೀಯ ಲಾಭದ ಭ್ರಮೆ ಬಿಜೆಪಿಗೆ: ಸಿಎಂ ಸಿದ್ದರಾಮಯ್ಯ

ಮೈಸೂರು: ಸರ್ಕಾರದ ಸಾಧನೆಯ ಬಗ್ಗೆ ಸುಳ್ಳು ಹೇಳುವ ಬಿಜೆಪಿಯವರು ಎಂದಿಗೂ ಬಹಿರಂಗ ಚರ್ಚೆಗೆ ಬರುವುದಿಲ್ಲ. ಆದರೆ ನಾವು ಚರ್ಚೆಗೆ ಸದಾ ಸಿದ್ದ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕಬಿನಿ ಜಲಾಶಯಕ್ಕೆ ಭಾನುವಾರ ಬಾಗಿನ ಅರ್ಪಣೆ ಮಾಡಿದ ನಂತರ ಮಾಧ್ಯಮದವರೊಂದಿಗೆ ಮಾತನಾಡಿದರು. ನಿನ್ನೆ ನಡೆದ ಮೈಸೂರಿನ ಸಮಾವೇಶದಲ್ಲಿ ಮುಖ್ಯಮಂತ್ರಿಗಳು ಡಿಸಿಎಂಗೆ ಅವಮಾನ ಮಾಡಿದ್ದಾರೆ ಎಂದು ಬಿಜೆಪಿಯವರು ಟೀಕಿಸುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಕಾರ್ಯಕ್ರಮದಲ್ಲಿ ಇರುವವರಿಗೆ ಸ್ವಾಗತ ಮಾಡುವುದು ಪರಿಪಾಠ. ಉಪಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ಅವರು ಕಾರ್ಯಕ್ರಮದಲ್ಲಿ ಆ ವೇಳೆಯಲ್ಲಿ ಇರದಿದ್ದ ಕಾರಣ, ಅವರ ಹೆಸರನ್ನು ತೆಗೆದುಕೊಳ್ಳಲಿಲ್ಲವಾದ್ದರಿಂದ, ಇದರಲ್ಲಿ ಅವಮಾನ ಮಾಡುವ ಪ್ರಶ್ನೆಯಿಲ್ಲ. ಬಿಜೆಪಿಯವರು ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ. ನನ್ನ ಹಾಗೂ ಡಿಸಿಎಂ ನಡುವೆ ಒಡಕುಂಟು ಮಾಡುವ ಉದ್ದೇಶದಿಂದ ಬಿಜೆಪಿಯವರು ಇಂತಹ ಹೇಳಿಕೆಗಳನ್ನು ನೀಡುತ್ತಾರೆ. ಇದರಿಂದ ರಾಜಕೀಯ ಲಾಭವಾಗಬಹುದೆಂಬ ಭ್ರಮೆ ಬಿಜೆಪಿಯವರಿಗಿದ್ದು, ಇದು ಸದಾ ಭ್ರಮೆಯಾಗಿಯೇ ಇರಲಿದೆ ಎಂದರು.

ಡಿಜಿಟಲ್ ಪೇಮಂಟ್-ವಾಣಿಜ್ಯ ತೆರಿಗೆ ಇಲಾಖೆಯೊಂದಿಗೆ ಚರ್ಚಿಸಿ ತೀರ್ಮಾನ: ರಾಜ್ಯದ ಸಣ್ಣ ವ್ಯಾಪಾರಿಗಳಿಗೆ ಡಿಜಿಟಲ್ ಪೇಮೆಂಟ್‌ನಿಂದ ತೆರಿಗೆ ನೋಟಿಸ್ ನೀಡುತ್ತಿದೆ ಎಂಬ ಕೂಗೆದ್ದಿರುವ ಬಗ್ಗೆ ಪ್ರತಿಕ್ರಿಯೆ ನೀಡಿ, ಜಿಎಸ್‌ಟಿ ಎಂಬುದನ್ನು ಕೇಂದ್ರ ಸರ್ಕಾರ ಮಾಡಿದ್ದು, ಜಿಎಸ್‌ಟಿ ಕೌನ್ಸಿಲ್ ಕೇಂದ್ರ ಸರ್ಕಾರದ ಅಧೀನದಲ್ಲಿ ಬರುತ್ತದೆ. ಇದಕ್ಕೆ ರಾಜ್ಯ ಸರ್ಕಾರಗಳು ಜವಾಬ್ದಾರಿಯಿಲ್ಲ. ಆದಾಗ್ಯೂ ಈ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಸಮಾಲೋಚನೆ ನಡೆಸಿ, ರಾಜ್ಯ ಸರ್ಕಾರದ ವಾಣಿಜ್ಯ ತೆರಿಗೆ ಇಲಾಖೆಯೊಂದಿಗೆ ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು.

ಕಾಂಗ್ರೆಸ್ ಗ್ಯಾರಂಟಿಗಳನ್ನು ಬಿಜೆಪಿ ಅನುಕರಿಸುತ್ತಿದೆ: ನೆನ್ನೆ ನಡೆದ ಸಾಧನಾ ಸಮಾವೇಶ ಬಿಜೆಪಿಯವರಿಗೆ ಉತ್ತರ ನೀಡಿದೆಯೇ ಎಂಬ ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ, ಸರ್ಕಾರಕ್ಕೆ ಎರಡು ವರ್ಷತುಂಬಿದ ಸಂದರ್ಭದಲ್ಲಿ ವಿಜಯನಗರದಲ್ಲಿ ನಡೆದ ಸಮಾವೇಶದಲ್ಲಿ ಸುಮಾರು 2 ಲಕ್ಷ ಜನ ಭಾಗವಹಿಸಿದ್ದರು. ಇದು ಸರ್ಕಾರಕ್ಕೆ ಜನರ ಬೆಂಬಲವನ್ನು ಸೂಚಿಸುತ್ತದೆ. ಬಿಜೆಪಿಯವರು ಕೇವಲ ಸುಳ್ಳು ಹೇಳುತ್ತಿದ್ದಾರೆ. ನಮ್ಮ ಗ್ಯಾರಂಟಿ ಯೋಜನೆಗಳನ್ನು ಬಿಜೆಪಿಯವರು ಅನುಕರಿಸುತ್ತಿದ್ದಾರೆ. ನಮ್ಮ ಸರ್ಕಾರ ಗ್ಯಾರಂಟಿಗಳಿಗಾಗಿ 52 ಸಾವಿರ ಕೋಟಿ ರೂ.ಗಳನ್ನು ಖರ್ಚು ಮಾಡಿದೆ ಎಂದರು.

ಜಾಗದ ವಿಷಯಕ್ಕೆ ಮಾರಾಮಾರಿ: ದೂರು

ಅಂಕೋಲಾ: ಜಾಗದ ವಿಷಯವಾಗಿ ಜಗಳವಾಡುತ್ತಿದ್ದ ದರ್ಶನ ನಾಯ್ಕ ಹಾಗೂ ಬೊಮ್ಮಯ್ಯ ನಾಯ್ಕ ನಡುವೆ ನಡೆದ ಮಾರಾಮಾರಿ ನಡೆದಿದ್ದು, ಇದನ್ನು ಪ್ರಶ್ನಿಸಿದ ನಿತ್ಯಾನಂದ ನಾಯ್ಕ ಸಹ ಪೆಟ್ಟು ತಿಂದ ಘಟನೆ ನಡೆದಿದೆ.

ಅಂಕೋಲಾದ ಕಣಗಿಲ್ ಬಳಿಯ ಶಟಗೇರಿಯಲ್ಲಿ ದರ್ಶನ ನಾಯ್ಕ ವಾಸವಾಗಿದ್ದರು. ಅದೇ ಊರಿನ ಬೊಮ್ಮಯ್ಯ ನಾಯ್ಕ ಅವರು ದರ್ಶನ ನಾಯ್ಕ ಅವರೊಂದಿಗೆ ಜಾಗದ ವಿಷಯದಲ್ಲಿ ವೈಮನಸ್ಸು ಹೊಂದಿದ್ದರು. ಹೀಗಾಗಿ ಅವರಿಬ್ಬರ ನಡುವೆ ಆಗಾಗ ಜಗಳ-ಬೈಗುಳ ಸಾಮಾನ್ಯವಾಗಿತ್ತು.

ದರ್ಶನ ನಾಯ್ಕ ಬೈಕ್ ಮೇಲೆ ಹೋಗುವಾಗ ಬೊಮ್ಮಯ್ಯ ನಾಯ್ಕ ಅಡ್ಡಗಟ್ಟಿ, ಚಾಕುವಿನಿಂದ ದರ್ಶನ ನಾಯ್ಕ ಅವರ ಕೈಗೆ ಗಾಯ ಮಾಡಿದ್ದ. ಬೆದರಿದ ದರ್ಶನ ನಾಯ್ಕ ಅಲ್ಲಿಂದ ಪರಾರಿಯಾಗಿದ್ದ. ಈ ವಿಷಯವನ್ನು ತಮ್ಮ ನಿತ್ಯಾನಂದ ನಾಯ್ಕರ ಬಳಿ ಹೇಳಿದ. ಅದಾದ ನಂತರ ನಿತ್ಯಾನಂದ ನಾಯ್ಕ ಬೈಕಿನಲ್ಲಿ ಬರುತ್ತಿದ್ದ ದರ್ಶನ ನಾಯ್ಕರನ್ನು ಅಡ್ಡಗಟ್ಟಿ 'ನನ್ನ ಅಣ್ಣನಿಗೆ ಏಕೆ ಹೊಡೆದೆ?' ಎಂದು ನಿತ್ಯಾನಂದ ನಾಯ್ಕ ಪ್ರಶ್ನಿಸಿದರು.

'ನಮ್ಮ ಜಾಗದ ವಿಷಯಕ್ಕೆ ಬಂದರೆ ಹುಷಾರ್' ಎಂದು ಎಚ್ಚರಿಸಿದ ದರ್ಶನ ನಾಯ್ಕ ನಿತ್ಯಾನಂದ ನಾಯ್ಕರ ಮೇಲೂ ಕೈ ಮಾಡಿದ. ಕಿಸೆಯಲ್ಲಿದ್ದ ಚಾಕು ತೆರೆದು ನಿತ್ಯಾನಂದ ನಾಯ್ಕನಿಗೂ ಗಾಯ ಮಾಡಿದ. ಹತೆಗೆ ಅಲ್ಲಿದ್ದ ಬಡಿಗೆಯಿಂದ ಬಡಿದು ಕೊಲೆ ಬೆದರಿಕೆ ಹಾಕಿದ್ದ. ಈ ಕುರಿತು ಅಂಕೋಲಾ ಠಾಣೆಯಲ್ಲಿ ಪ್ರಕಣ ದಾಖಲಾಗಿದೆ.

ಕಳ್ಳತನ: ದೂರು ನೀಡಲು ಹಿಂದೇಟು

ಯಲ್ಲಾಪುರ: ಇಲ್ಲಿನ ಗ್ರಾಮದೇವಿ ದೇವಸ್ಥಾನದ ಬಳಿಯಿರುವ 4-5 ಮನೆಯಲ್ಲಿ ಕಳ್ಳತನ ನಡೆದಿದ್ದು, ಎರಡು ಮನೆಯವರು ಮಾತ್ರ ಪೊಲೀಸ್ ದೂರು ನೀಡಿದ್ದಾರೆ. ಉಳಿದವರು ದೂರು ನೀಡಲು ಹಿಂದೇಟು ಹಾಕಿದ್ದಾರೆ.

ಇಬ್ಬರು ಮಹಿಳೆಯರು ಮಾತ್ರ ಧೈರ್ಯವಾಗಿ ಪೊಲೀಸ್ ಠಾಣೆಗೆ ಬಂದು ಕಳ್ಳರ ವಿರುದ್ಧ ದೂರು ನೀಡಿದ್ದಾರೆ. ಆ ಕಳ್ಳರನ್ನು ಹಿಡಿದು ತಮ್ಮ ಆಭರಣ ಮರಳಿಸಿ ಎಂದು ಪೊಲೀಸರ ಬಳಿ ಒತ್ತಾಯಿಸಿದ್ದಾರೆ. ಜುಲೈ 17ರ ರಾತ್ರಿ ದೇವಿದೇವಸ್ಥಾನ ರಸ್ತೆಗೆ ಕಳ್ಳರು ಆಗಮಿಸಿದ್ದರು. ಅವರು ಅಲ್ಲಿನ ಅನೇಕ ಮನೆಗಳಿಗೆ ನುಗ್ಗಿ ಕಳ್ಳತನ ಮಾಡಿದ್ದರು. ಮಾಹಿತಿ ಪ್ರಕಾರ ಇಲ್ಲಿನ ಕೈಸರೆ, ಗುಡಿಗಾರ ಮನೆಗಳಿಗೂ ಕಳ್ಳರು ನುಗ್ಗಿದ್ದರು. ಆದರೆ, ಆ ಮನೆಯವರು ದೂರು ನೀಡಿಲ್ಲ. ಸದ್ಯ ಶಿಕ್ಷಕಿ ಸುಮಂಗಲಾ ನಾಯ್ಕ ಹಾಗೂ ಅಲ್ಲಿನ ಅನುರಾಧ ಹಿರೇಮಠ್ ಮಾತ್ರ ಪೊಲೀಸರ ಮೊರೆ ಹೋಗಿದ್ದಾರೆ. ಮನೆ ಬಾಗಿಲು ಮುರಿದು ಕಳ್ಳರು ಒಳಗೆ ನುಗ್ಗಿದ ಬಗ್ಗೆ ಅವರು ವಿವರಿಸಿದ್ದಾರೆ. ಸುಮಂಗಲಾ ನಾಯ್ಕ ಅವರು ತಮ್ಮ ಮನೆಯಲ್ಲಿದ್ದ 1.17 ಲಕ್ಷ ರೂ. ಮೌಲ್ಯದ ಆಭರಣ ಕಳ್ಳತನ ನಡೆದಿರುವ ಬಗ್ಗೆ ಹೇಳಿದ್ದಾರೆ. ಅನುರಾಧ ಹೀರೆಮಠ್ ಅವರು 2.18 ಲಕ್ಷ ರೂ ಮೌಲ್ಯದ ಆಭರಣ ಕಣ್ಮರೆಯಾದ ಬಗ್ಗೆ ಅಳಲು ತೋಡಿಕೊಂಡಿದ್ದಾರೆ.

ಈ ಎರಡು ಪ್ರಕರಣ ದಾಖಲಿಸಿಕೊಂಡ ಪೊಲೀಸರು ಕಳ್ಳರ ಹುಡುಕಾಟ ನಡೆಸಿದ್ದಾರೆ. 'ಉಳಿದ ಕೆಲ ಮನೆಗಳಿಗೆ ಕಳ್ಳರು ನುಗ್ಗಿದರೂ ಏನನ್ನು ಕದ್ದಿಲ್ಲ. ಹೀಗಾಗಿ ಅವರು ಈ ಬಗ್ಗೆ ತಲೆಕೆಡಿಸಿಕೊಂಡಿಲ್ಲ' ಎಂಬ ಮಾಹಿತಿ ಸಿಕ್ಕಿದೆ.

ಕಂಪನಿಗೆ ಜಮೀನು ಕೊಡಿಸುವುದಾಗಿ ವಂಚನೆ

ತಲೆ ಮರೆಸಿಕೊಂಡಿದ್ದ ಅಜೀತ್ ನಾಯಕ ಟೀಂನ ಪ್ರಭಾವಿ ನಾಯಕನ ಬಂಧನ

ಅಂಕೋಲಾ: ತಾಲೂಕಿನ ಕೇಣಿಯಲ್ಲಿ ನಿರ್ಮಾಣ ಮಾಡಲು ಉದ್ದೇಶಿಸಿರುವ ಜೆಎಸ್‌ಡಬ್ಲ್ಯು ಕಂಪನಿಗೆ ಜಮೀನು ಕೊಡಿಸುವುದಾಗಿ ಕಂಪನಿಯಿಂದ ಕಂಡ ಕಂಡವರ ಖಾತೆಗೆ ಹಣ ವರ್ಗಾಯಿಸಿಕೊಂಡು ಜಮೀನು ನೀಡದೆ ಪಂಗನಾಮ ಹಾಕಿ ತಲೆ ಮರೆಸಿಕೊಂಡಿದ್ದ ಅಜೀತ್ ನಾಯಕ ಟೀಂ ನ ಓರ್ವ ಪ್ರಭಾವಿ ರಾಜಕೀಯ ನಾಯಕನನ್ನು ಪೊಲೀಸರು ಬಂಧಿಸಿದ್ದಾರೆ.

ಜೆಎಸ್‌ಡಬ್ಲ್ಯು ಕಂಪನಿಗೆ ಭೂಮಿ ಕೊಡಿಸುವ ನೆಪದಲ್ಲಿ 10 ಕೋಟಿ ರೂಪಾಯಿ ಪಡೆದು ವಂಚನೆ ಮಾಡಿದ ಆರೋಪದ ಮೇಲೆ ತುಮಕೂರು ಕಾಂಗ್ರೆಸ್ ನಾಯಕ ಎಸ್.ಟಿ. ಶ್ರೀನಿವಾಸ್ ಎಂಬುವವರನ್ನು ಬಂಧಿಸಲಾಗಿದೆ. ರಿಯಲ್ ಎಸ್ಟೇಟ್ ಉದ್ಯಮಿ ಮತ್ತು ಪ್ರಭಾವಿ ರಾಜಕೀಯ ನಾಯಕ ಎಸ್.ಟಿ. ಶ್ರೀನಿವಾಸ್ ಅವರು 10 ಕೋಟಿ ರೂಪಾಯಿ ವಂಚಿಸಿದ್ದರು. ಡಿಸೆಂಬರ್‌ನಲ್ಲಿ ಧಾರವಾಡ ಹೈಕೋರ್ಟ್ ಪೀಠ ಅವರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ. ಈಗ ಕಾರವಾರ ಪೊಲೀಸರು ಎಸ್.ಟಿ. ಶ್ರೀನಿವಾಸ್ ಅವರನ್ನು ಬಂಧಿಸಿದ್ದಾರೆ.

ಪ್ರಕರಣ ಏನು?

ಭರಮಪ್ಪ ಕಾರವಾರದ ಹಬ್ಬುವಾಡದಲ್ಲಿರುವ ಕಂಪನಿಯ ಕಚೇರಿಯಲ್ಲಿ ಯೋಜನಾ ಉಸ್ತುವಾರಿಯಾಗಿ ಕೆಲಸ ಮಾಡುತ್ತಿದ್ದರುವ. ಸಮುದ್ರ ಬಂದರು ಅಭಿವೃದ್ಧಿಪಡಿಸಲು ಮತ್ತು ಬಂದರನ್ನು ಹೆದ್ದಾರಿ ಮತ್ತು ರೈಲು ಮಾರ್ಗಕ್ಕೆ ಸಂಪರ್ಕಿಸಲು ಭರಮಪ್ಪ ಅವರ ಕಂಪನಿಗೆ 2022 ರಲ್ಲಿ ಭೂಮಿ ಬೇಕಾಗಿತ್ತು. ಆ ಸಮಯದಲ್ಲಿ, ಅಂಕೋಲಾದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದ ಆರೋಪಿ ನಂ. 1 ಅಜಿತ ಗಣಪತಿ ನಾಯಕ್ ಅವರನ್ನು ಸಂಪರ್ಕಿಸಲಾಯಿತು. ಆಗಸ್ಟ್ 2022 ರಲ್ಲಿ, ಆರೋಪಿ 1 ಅಜಿತ ಗಣಪತಿ ನಾಯಕ್ ಮತ್ತು ಆರೋಪಿ 3 ತಿರುಪತಿಸ್ವಾಮಿ ಎಸ್. ಶ್ರೀನಿವಾಸ ಅಂಕೋಲಾದ ಕಾಮತ್ ಹೋಟೆಲ್‌ನಲ್ಲಿ ಭೂಮಿ ಖರೀದಿಸುವ ಬಗ್ಗೆ ಮಾತುಕತೆ ನಡೆಸಿದರು.

ಬಳಿಕ 13-09-2024 ಮತ್ತು 14-09-2024 ರಂದು, ಆರೋಪಿಗಳಿಬ್ಬರೂ ಬೆಂಗಳೂರಿನ ವಸಂತನಗರದ ಶಾಂಗ್ರಿಲಾ ಹೋಟೆಲ್‌ನಲ್ಲಿ ಎಂ.ಎಸ್. ಪಾತ್ರುಡು ಮತ್ತು ಕಂಪನಿಯ ಇತರ ಅಧಿಕಾರಿಗಳನ್ನು ಭೇಟಿಯಾದರು. ಆರೋಪಿಗಳು 2 ನೇ ಆರೋಪಿತ ಗುರುಪ್ರಸಾದ್ ಸುಧಾಕರ್ ರೇವಣಕರ್ ಮೂಲಕ ಅಂಕೋಲಾದಲಿಯಲ್ಲಿ ಭೂಮಿ ನೀಡುವುದಾಗಿ ಭರವಸೆ ನೀಡಿದರು. 29-09-2022 ರಂದು, ಆರೋಪಿಗಳು 1 ಮತ್ತು 2 ನೇ ಆರೋಪಿಗಳು ಮುಂಬೈನ ಹೋಟೆಲ್ ರೀಜೆನ್ಸಿಯಲ್ಲಿ ಭರಮಪ್ಪ ಕಂಪನಿಗಾಗಿ ಕೇಣಿಯಲ್ಲಿ 35 ಎಕರೆ ಭೂಮಿಯನ್ನು ಖರೀದಿಸಲು ಒಪ್ಪಿಕೊಂಡರು ಮತ್ತು ಆರೋಪಿಗಳು 2 ನೇ ಆರೋಪಿಗಳೊಂದಿಗೆ ತಿಳಿವಳಿಕೆ ಒಪ್ಪಂದ ಮಾಡಿಕೊಂಡಿದ್ದರು.

ಆರೋಪಿಗಳು 1, 2 ನೇ ಆರೋಪಿಗಳು ದಿನಾಂಕ: 19-10-2022 ರಂದು 2,91,06,000/- ರೂ.ಗಳನ್ನು ಠೇವಣಿ ಮಾಡುವ ಮೂಲಕ ಭರಮಪ್ಪ ಕಂಪನಿಗೆ ಬ್ಯಾಂಕ್ ಖಾತೆಗಳಲ್ಲಿ ಹಣವನ್ನು ಠೇವಣಿ ಮಾಡುವಂತೆ ತಿಳಿಸಿದ್ದರು ಮತ್ತು ನಂತರ ಹಂತ ಹಂತವಾಗಿ ಹಣವನ್ನು ಠೇವಣಿ ಮಾಡಿದ್ದರು. ಆರೋಪಿಗಳು ವಕೀಲ ವಿನೋದ್ ವಿಠಲ್ ಶಾನಭಾಗ್ ಮೂಲಕ ಭರಮಪ್ಪ ಕಂಪನಿಯ ಹೆಸರಿಗೆ ಸುಮಾರು 10 ಎಕರೆ ಭೂಮಿಯನ್ನು ವರ್ಗಾಯಿಸಿದ್ದರು.ಆರೋಪಿಗಳು 2 ಜನರು ಭರಮಪ್ಪ ಕಂಪನಿಯ ಖಾತೆಗೆ ಒಟ್ಟು 14,71,06,035/- ರೂ.ಗಳನ್ನು ಜಮಾ ಮಾಡಿದ್ದರು, ಆದರೆ ಉಳಿದ ಭೂಮಿಯನ್ನು ಖರೀದಿಸಲು ಮತ್ತು ಮಾರಾಟ ಪತ್ರ ಮಾಡಲು ಆರೋಪಿಗಳು ವಿಳಂಬ ಮಾಡಿದಾಗ, ಉಳಿದ ಭೂಮಿಯನ್ನು ತಮಗೆ ನೀಡಲು ಸಾಧ್ಯವಿಲ್ಲ ಎಂದು ಆರೋಪಿಗಳು ಹೇಳಿದರು.

ನಂತರ, ಭರಮಪ್ಪ ಕಂಪನಿಯು ಆರೋಪಿಗಳು 1 ಮತ್ತು 2 ಜನರಿಗೆ ಕಂಪನಿಯು ಪಾವತಿಸಿದ ಹೆಚ್ಚುವರಿ ಮೊತ್ತವಾದ 8,02,35,694/- ರೂ.ಗಳನ್ನು ಕಾರವಾರ ಕಚೇರಿಯಲ್ಲಿ 10-09-2024 ರಂದು ಕಾರವಾರ ಕಚೇರಿಯಲ್ಲಿ ಕಂಪನಿಗೆ ಮಾರಾಟ ಮಾಡಿದ 10ಎಕರೆ ಭೂಮಿಯ ಮೊತ್ತವನ್ನು ಹೊರತುಪಡಿಸಿ, ಕಂಪನಿಗೆ ಪಾವತಿಸಿದ ಹೆಚ್ಚುವರಿ ಮೊತ್ತವಾದ 8,02,35,694/- ರೂ.ಗಳನ್ನು ಹಿಂದಿರುಗಿಸುವಂತೆ ತಿಳಿಸಿದಾಗ, ಆರೋಪಿಗಳು ಹಂತ ಹಂತವಾಗಿ ಹಣವನ್ನು ಠೇವಣಿ ಮಾಡುವುದಾಗಿ ಹೇಳಿದರು. ಆರೋಪಿಗಳು 2 ಜನರು 22-10-2024 ರಂದು ಬ್ಯಾಂಕ್ ಖಾತೆಯಿಂದ 8ಕೋಟಿ ರೂ.ಗಳ ಚೆಕ್ ಅನ್ನು ನೀಡಿದರು. ನಂತರ, ಆರೋಪಿ 2ಉಳಿದ ಹಣದ ಬಗ್ಗೆ ವಿಚಾರಿಸಿದಾಗ, ಆರೋಪಿ 1 ಮತ್ತು ಆರೋಪಿ 2 ಖಾತೆಯಲ್ಲಿರುವ ಹಣವನ್ನು ಚೆಕ್‌ಗಳ ಮೂಲಕ ಬೇರೆ ಬೇರೆ ಜನರ ಮೂಲಕ ಹಿಂಪಡೆದು ದುರುಪಯೋಗಪಡಿಸಿಕೊಂಡಿರುವುದಾಗಿ ಹೇಳಿದ್ದಾರೆ. ಆದಾಗ್ಯೂ, ಇಬ್ಬರೂ ಆರೋಪಿಗಳು ಕಂಪನಿಗೆ ಪಾವತಿಸಬೇಕಾದ ಹಣವನ್ನು ಠೇವಣಿ ಮಾಡದಿದ್ದಾಗ, ಭರಮಪ್ಪ ಕಂಪನಿಯು ಆರೋಪಿ ನೀಡಿದ ಚೆಕ್ ಅನ್ನು ಬ್ಯಾಂಕಿನಲ್ಲಿ ಠೇವಣಿ ಮಾಡಿದಾಗ, ಆರೋಪಿಯ ಖಾತೆಯಲ್ಲಿ ಯಾವುದೇ ಹಣವಿಲ್ಲದೆ ಚೆಕ್ ಬೌನ್ಸ್ ಆಗಿತ್ತು.

ಭರಮಪ್ಪ ಕಂಪನಿಯು ಕೆನಿಯಾಲಿ ಸಮುದ್ರ ಬಂದರನ್ನು ಅಭಿವೃದ್ಧಿಪಡಿಸಲು ಮತ್ತು ಬಂದರನ್ನು ಹೆದ್ದಾರಿ ಮತ್ತು ರೈಲು ಮಾರ್ಗಕ್ಕೆ ಸಂಪರ್ಕಿಸಲು ಭೂಮಿಯನ್ನು ಹುಡುಕುತ್ತಿರುವಾಗ, ಈ ಮೂವರು ಆರೋಪಿಗಳು ಭರಮಪ್ಪ ಕಂಪನಿಯನ್ನು ಸಂಪರ್ಕಿಸಿ ಭರಮಪ್ಪ ಕಂಪನಿಗೆ ಮಾರಾಟ ಪತ್ರದ ಮೂಲಕ ಕಂಪನಿಗೆ ಅಗತ್ಯವಿರುವ 35 ಎಕರೆ ಭೂಮಿಯನ್ನು ಖರೀದಿಸುವುದಾಗಿ ಭರವಸೆ ನೀಡಿ ಕಂಪನಿಯೊಂದಿಗೆ. ರೂ. 2 14,71,06,035/- . ಖಾತೆಯಲ್ಲಿ ಠೇವಣಿ ಇಟ್ಟರು ಮತ್ತು ಭರಮಪ್ಪ ಕಂಪನಿಗೆ ಮಾರಾಟ ಪತ್ರದ ಮೂಲಕ ಕೇವಲ 10 ಎಕರೆ ಭೂಮಿಯನ್ನು ಮಾತ್ರ ಖರೀದಿಸಿದರು. ಉಳಿದ ಭೂಮಿಯನ್ನು ಖರೀದಿಸಿಲ್ಲ ಮತ್ತು ಆರೋಪಿಯು ವಾದಿಯ ಕಂಪನಿಯಿಂದ ಠೇವಣಿ ಇಡಲಾದ ಹೆಚ್ಚುವರಿ ರೂ.8,02,35,694/- ಅನ್ನು ಆರೋಪಿಯ ಖಾತೆಗೆ ಜಮಾ ಮಾಡಿಲ್ಲ ಮತ್ತು ಅದನ್ನು ಮತ್ತೆ ಕಂಪನಿಯ ಖಾತೆಗೆ ಜಮಾ ಮಾಡಿಲ್ಲ. ಮೂವರು ಆರೋಪಿಗಳು ಭರಮಪ್ಪ ಕಂಪನಿಯ ವಿರುದ್ಧ ವಂಚನೆ ಮತ್ತು ನಂಬಿಕೆ ದ್ರೋಹ ಎಸಗಿದ್ದಾರೆ. ಇನ್ನೂ ಶೀಘ್ರದಲ್ಲೇ ಉಳಿದ ಇಬ್ಬರೂ ಆರೋಪಿಗಳನ್ನು ಪೊಲೀಸರು ಬಂಧನ ಮಾಡುವ ಸಾಧ್ಯತೆ ಇದೆ.

ಒಳಿತಿನೆಡೆಗೆ ಸಮಾಜವನ್ನು ಸಾಗಿಸುವ ಸ್ಮರಣೋತ್ಸವ

ಶಿರಸಿ ಬಣ್ಣದಮಠದಲ್ಲಿ ಭಾನುವಾರ ಜರುಗಿದ ಲಿಂ. . ಶ್ರೀ ಗುರುಸಿದ್ಧರಾಜ ಯೋಗೀಂದ್ರ ಸ್ವಾಮೀಜಿ ಅವರ 31ನೇ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಶ್ರೀ ಶಿವಲಿಂಗ ಸ್ವಾಮೀಜಿ, ಬೆಳ್ಳಾವಿ ಕಾರದೇಶ್ವರ ಮಠದ ಶ್ರೀ ಕಾರದ ವೀರಬಸವ ಸ್ವಾಮೀಜಿ, 'ಶ್ರೀ ಅಟವಿ ಚನ್ನಬಸವ ಸ್ವಾಮೀಜಿ ಇದ್ದರು.

ಶಿರಸಿ: ಪೂಜ್ಯ ಲಿಂಗೈಕ್ಯರ ಸ್ಮರಣೋತ್ಸವಗಳು ಜನರಲ್ಲಿ ಜಾಗೃತಿಗೊಳಿಸಿ ಸಮಾಜವನ್ನು ಒಳತಿನೆಡೆಗೆ ಕೊಂಡೊಯ್ಯುವ ಕೆಲಸಮಾಡುತ್ತದೆ ಎಂದು ಬಣ್ಣದಮಠದ ಪೀಠಾಧೀಶ ಮ.ನಿ.ಪ್ರ. ಶ್ರೀ ಶಿವಲಿಂಗ ಸ್ವಾಮೀಜಿ ನುಡಿದರು.

ಅವರು ಭಾನುವಾರ ಬಣ್ಣದ ಮಠದ ಪರಮಪೂಜ್ಯ ಲಿಂ. ಶ್ರೀ ಮ.ನಿ.ಪ್ರ. ಶ್ರೀ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ ಅವರ 31ನೇ ಸ್ಮರಣೋತ್ಸವ ಕಾರ್ಯಕ್ರಮದ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡಿದರು.

ಗುರುಸಿದ್ಧರಾಜಯೋಗೀಂದ್ರರು ತಪೋ ಶಕ್ತಿವಂತರು. ಅವರ ಶಕ್ತಿಯಿಂದಲೇ ಅಂದಿನ ಮಠ ಇಂದು ಬಣ್ಣದ ಮಠವಾಗಿ ಬೆಳೆದು ತಮ್ಮತ್ತ ಬರುವ ಶಿಷ್ಯರಿಗೆ ಬಣ್ಣಬಣ್ಣದ ಬೆಳಕನ್ನು ತೋರುತ್ತಿದೆ ಎಂದರು. ಗುರುಸಿದ್ದರ ಮೊದಲಿದ್ದ ಹೆಸರು ಬಂಗಾರಯ್ಯ. ನಂತರ ಅವರು ಹಾನಗಲ್ ಕುಮಾರಸ್ವಾಮಿಗಳ ಆಶೀರ್ವಾದದಿಂದ ಗುರುಸಿದ್ಧರಾದರು. ಹಾನಗಲ್ ಕುಮಾರ ಸ್ವಾಮಿಗಳು ತಮ್ಮ ಸಂಪೂರ್ಣವಾದ ತಪೋಶಕ್ತಿಯನ್ನು ಗುರುಸಿದ್ದರಿಗೆ ಎರದಿದ್ದರಿಂದಲೇ ಇಂದು ಬಣ್ಣದಮಠ ದೊಡ್ಡ ಶಕ್ತಿಯಾಗಿ ತನ್ನ ಕಾರ್ಯಕ್ಷೇತ್ರವನ್ನು ವ್ಯಾಪಿಸಿಕೊಂಡಿದೆ ಎಂದು ತಿಳಿಸಿದರು. ನುಡಿದಂತೆ ನಡೆದ ಗುರುಸಿದ್ದರು ಎಲ್ಲರನ್ನೂ ಒಪ್ಪಿ ಅಪ್ಪಿಕೊಂಡು ಆಶೀರ್ವದಿಸಿದರು. ಅವರ ನೆರಳಲ್ಲಿ ನಡೆಯುತ್ತಿ ರುವ ಈ ಮಠವು ಶಿಷ್ಯರ ಪಾಲಿನ ವಚನ ಮಠವಾಗಿ ಶ್ರದ್ಧಾಕೇಂದ್ರವಾಗಿ ಬೆಳೆಯುತ್ತಿದೆ. ಗುರುಸಿದ್ದರು ಜ್ಞಾನವಂತರು ಮತ್ತು ಸಿದ್ದ ಪುರುಷರು. ಇಂತಹ ಮಹಾನ್ ಚೇತನರನ್ನು ಹೀಗೆ ಒಟ್ಟಾಗಿ ಸ್ಮರಿಸುವುದು ನಮ್ಮನ್ನು ನಾವು ಜಾಗೃತಿಗೊಳಿಸಿಕೊಂಡಂತೆ ಎಂದು ಹೇಳಿದರು. ಬೆಳ್ಳಾವಿ ಕಾರದೇಶ್ವರ ಮಠದ ಶ್ರೀ ಮ.ನಿ.ಪ್ರ. ಶ್ರೀ ಕಾರದ ವೀರಬಸವ ಸ್ವಾಮೀಜಿ ಆಶೀರ್ವಚನ ನೀಡಿ, ಗುರುಸಿದ್ದರು ಮಹಾ ಮಹೀಮರು. ಅವರ ಆಶೀರ್ವಾದವೇ ಬಣ್ಣದ ಮಠ ಇಡೀ ಸಮಾಜದ ಕಣ್ಣಾಗಿ ಬೆಳೆಯಲು ಕಾರಣವಾಗಿದೆ. ಅವರ ಸ್ವರೂಪದಲ್ಲಿಯೇ ಶಿವಲಿಂಗ ಸ್ವಾಮೀಜಿಗಳು ಮುನ್ನಡೆಯುತ್ತಿರುವುದು. ಅವರ ಶಿಷ್ಯರಾಗಿರುವುದು ನಮ್ಮೆಲ್ಲರ ಸೌಭಾಗ್ಯ ಎಂದರು.

ಮಠಗಳು ಸಮಾಜ ಕಟ್ಟುವ ಕೆಲಸಮಾಡಬೇಕು. ಆದರೆ ಮಠಗಳೇ ದಾರಿ ತಪ್ಪಿದರೇ ಸಮಾಜವನ್ನು ಶಿಕ್ಷಿಸುವುದರಲ್ಲಿ ಯಾವುದೇ ಪ್ರಯೋಜನವಿಲ್ಲ. ಪಾಶ್ಚಿಮಾತ್ಯ ಸಂಸ್ಕೃತಿಯಿಂದ ಹಾಳಾಗುತ್ತಿರುವ ಇಂದಿನ ಸಮಾಜವನ್ನು ತಿದ್ದಲು ಮಠ ಮಂದಿರಗಳು ಮುಂದೆ ನಿಂತು ಯುವ ಸಮುದಾಯದಲ್ಲಿ ಸಂಸ್ಕಾರದ ಬೀಜ ಬಿತ್ತುವ ಕೆಲಸಮಾಡಬೇಕಿದೆ.

■ ಮ.ನಿ.ಪ್ರ. ಶ್ರೀ ಶಿವಲಿಂಗ ಸ್ವಾಮೀಜಿ ಬಣ್ಣದಮಠ, ಶಿರಸಿ

ಸಮಾಚಾರ ಸಣ್ಣದಲ್ಲ

ಹೊಂಡದಲ್ಲಿ ಮುಳುಗಿ ತಂದೆ ಮಗ ಸಾವು

ಬೆಳಗಾವಿ: ಕೃಷಿ ಹೊಂಡದಲ್ಲಿ ಮುಳುಗಿ ತಂದೆ ಮಗ ಮೃತಪಟ್ಟ ಘಟನೆ ಭಾನುವಾರ ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಮಳಗಲಿ ಗ್ರಾಮದಲ್ಲಿ ನಡೆದಿದೆ. ಸವದತ್ತಿ ತಾಲೂಕಿನ ಮುರಗೋಡ ಗ್ರಾಮದ ನಿವಾಸಿಗಳಾದ ಬಸವರಾಜ್ ಕೆಂಗೇರಿ (40), ಧರೆಪ್ಪ ಕೆಂಗೇರಿ (14) ಮೃತ ದುರ್ದೈವಿಗಳು. ಬಸವರಾಜ ಹೆಂಡತಿ ತವರುಮನೆ ಮಳಗಲಿ ಗ್ರಾಮದ ಜಮೀನಿನಲ್ಲಿ ಬೆಳೆಗೆ ಕೀಟನಾಶಕ ಹೊಡೆಯಲು ಕೃಷಿ ಹೊಂಡದಲ್ಲಿನ ನೀರು ಎತ್ತುವ ವೇಳೆ ದುರ್ಘಟನೆ ಸಂಭವಿಸಿದೆ. ಬಸವರಾಜ ಮೊದಲು ಕಾಲುಜಾರಿ ಕೃಷಿ ಹೊಂಡಕ್ಕೆ ಬಿದ್ದಿದ್ದಾರೆ. ತಂದೆಯ ರಕ್ಷಣೆಗೆ ಬಂದ ಇಬ್ಬರು ಮಕ್ಕಳಾದ ಧರೆಪ್ಪ ಹಾಗೂ ಬಾಗಪ್ಪ ನೀರಿಗೆ ಇಳಿದಿದ್ದಾರೆ. ಈ ವೇಳೆ ಧರೆಪ್ಪ ಕೂಡ ಮೃತಪಟ್ಟಿದ್ದು ಪಕ್ಕದ ಜಮೀನಿನಲ್ಲಿದ್ದವರು ಬಾಗಪ್ಪನ್ನು ರಕ್ಷಣೆ ಮಾಡಿದ್ದಾರೆ. ಗಂಭೀರ ಸ್ಥಿತಿಯಲ್ಲಿರುವ ಬಾಲಕ ಬಾಗಪ್ಪಗೆ ಬೈಲಹೊಂಗಲ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ. ಸ್ಥಳಕ್ಕೆ ಮುರಗೋಡ ಪೊಲೀಸರ ಭೇಟಿ ಪರಿಶೀಲನೆ. ಮುರಗೋಡ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರಕಾರ ಶೀಘ್ರ ಪತನ: ಜಗದೀಶ್ ಶೆಟ್ಟರ್

ಹುಬ್ಬಳ್ಳಿ: ಮುಖ್ಯಮಂತ್ರಿ ಸ್ಥಾನ ಉಳಿಸಿಕೊಳ್ಳಲು ಸಿದ್ದರಾಮಯ್ಯ, ಮುಖ್ಯಮಂತ್ರಿಯಾಗಬೇಕು ಎಂದು ಡಿ.ಕೆ. ಶಿವಕುಮಾರ್ ಹರಸಾಹಪಡುತ್ತಿದ್ದು, ಇಬ್ಬರ ಮಧ್ಯೆ ತೀವ್ರ ಗುದ್ದಾಟ ಏರ್ಪಟ್ಟಿದೆ. ಯಾವುದೇ ಸಂದರ್ಭದಲ್ಲಿ ಸರಕಾರ ಪತನವಾಗಬಹುದು ಎಂದು ಸಂಸದ ಜಗದೀಶ ಶೆಟ್ಟರ್ ಅಭಿಪ್ರಾಯಪಟ್ಟರು. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿಎಂ ಸ್ಥಾನಕ್ಕಾಗಿ ಡಿಸಿಎಂ ಡಿ.ಕೆ. ಶಿವಕುಮಾರ್ ದೊಡ್ಡಮಟ್ಟದಲ್ಲಿ ಪ್ರಯತ್ನ ಮಾಡುತ್ತಿದ್ದಾರೆ. ಇದನ್ನು ತಿಳಿದ ಸಿದ್ದರಾಮಯ್ಯ ಮೈಸೂರಿನಲ್ಲಿ ಸರಕಾರದ ಸಾಧನ ಸಮಾವೇಶದ ಹೆಸರಲ್ಲಿ, ತಮ್ಮ ಶಕ್ತಿ ಪ್ರದರ್ಶನ ಮಾಡಿದ್ದಾರೆ. ಇದರಿಂದ ಅಸಮಾಧಾನಗೊಂಡ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಭಾಷಣ ಮಾಡುವ ಮೊದಲೇ ವೇದಿಕೆಯಿಂದ ನಿರ್ಗಮಿಸಿದರು. ಇಬ್ಬರ ಗುದ್ದಾಟದಿಂದ ಸರಕಾರ ಐದು ವರ್ಷ ಪೂರ್ಣಗೊಳಿಸುವುದು ಅನುಮಾನವಾಗಿದೆ ಎಂದರು. ಮನೆಯಲ್ಲಿ ಕುಳಿತಿರುವವರಿಗೆ ಸ್ವಾಗತ ಮಾಡಲು ಆಗುವುದಿಲ್ಲ ಎನ್ನುವ ಮೂಲಕ ಸಿದ್ದರಾಮಯ್ಯ ಮನಸ್ಸಿನಲ್ಲಿ ಇದ್ದದ್ದನ್ನು ಹೇಳಿ, ಬಹಿರಂಗವಾಗಿಯೇ ಡಿ.ಕೆ. ಶಿವಕುಮಾರ್ ಅವರಿಗೆ ಸವಾಲ್ ಹಾಕಿದ್ದಾರೆ. ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನದಿಂದ ವಂಚಿತರಾಗುವ ಅನುಮಾನ ಶುರುವಾಗಿದೆ. ಹೈಕಮಾಂಡ್ ಕೊಟ್ಟ ಮಾತಿನಂತೆ ನಡೆದುಕೊಳ್ಳುವುದೋ, ಇಲ್ಲವೋ ಎನ್ನುವ ಸಂಶಯ ಅವರನ್ನು ಕಾಡುತ್ತಿದೆ ಎಂದು ಹೇಳಿದರು.

ವೈದ್ಯಕೀಯ ಅಧ್ಯಯನಕ್ಕೆ ಮೃತದೇಹಗಳ ಬರ!

ಅಂಗರಚನೆ ಸಂಶೋಧನೆಗೆ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ತೊಂದರೆ

ಬೆಂಗಳೂರು: ವೈದ್ಯಕೀಯ ವಿದ್ಯಾರ್ಥಿಗಳು ಮಾನವ ಅಂಗರಚನಾಶಾಸ್ತ್ರ ಮತ್ತು ಶಸ್ತ್ರಚಿಕಿತ್ಸಾ ತಂತ್ರಗಳನ್ನು ಕಲಿಯಲು ರಾಜ್ಯದ ವಿವಿಧ ವೈದ್ಯಕೀಯ ಕಾಲೇಜುಗಳಲ್ಲಿ ಮೃತ ದೇಹಗಳ ಕೊರತೆ ಕಾಡುತ್ತಿದೆ.

ವಿಶ್ವವಾಣಿ ವಿಶೇಷ

- ರಾಜ್ಯದ 75 ಮೆಡಿಕಲ್ ಕಾಲೇಜುಗಳಲ್ಲಿ ಸಂಶೋಧನೆಗೆ ಮೃತದೇಹಗಳ ಕೊರತೆ
- 10 ವಿದ್ಯಾರ್ಥಿಗಳಿಗೆ ಕನಿಷ್ಠ ಒಂದು ಮೃತದೇಹ ಅಧ್ಯಯನಕ್ಕೆ ಬೇಕು
- 25 ರಿಂದ 30 ವಿದ್ಯಾರ್ಥಿಗಳು ಒಂದು ಮೃತ ದೇಹದಲ್ಲಿ ಅಧ್ಯಯನ

ರಾಜ್ಯದ ಪ್ರತಿ ಜಿಲ್ಲೆಗೊಂದು ಸರಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಮಾಡಲಾಗುತ್ತಿದೆ. ಈ ಹಿಂದೆ ರಾಜ್ಯದಲ್ಲಿ 25ಕ್ಕಿಂತ ಹೆಚ್ಚು ವೈದ್ಯಕೀಯ ಕಾಲೇಜುಗಳಿದ್ದವು. ಇದೀಗ ಇವುಗಳ ಸಂಖ್ಯೆ 75ಕ್ಕಿಂತ ಹೆಚ್ಚು ವೈದ್ಯಕೀಯ ಕಾಲೇಜುಗಳಿವೆ. ಪ್ರತಿ ವೈದ್ಯಕೀಯ ಕಾಲೇಜಿಗೆ 100 ರಿಂದ 150 ವಿದ್ಯಾರ್ಥಿಗಳ ದಾಖಲಾಗುತ್ತಾರೆ. ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಅಂಗರಚನಾಶಾಸ್ತ್ರದ ಅಧ್ಯಯನ ಬಹಳ ಮಹತ್ವದ್ದಾಗಿದೆ. ಭಾರತೀಯ ವೈದ್ಯಕೀಯ ಮಂಡಳಿಯ ನಿಯಮಗಳ ಪ್ರಕಾರ, 1.4ರ ಪ್ರಮಾಣದಲ್ಲಿ ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಮೃತ ದೇಹಗಳ ಅಗತ್ಯ ಇದೆ. 10 ವಿದ್ಯಾರ್ಥಿಗಳಿಗೆ ಅಧ್ಯಯನ, ಸಂಶೋಧನೆ ಉದ್ದೇಶಕ್ಕೆ ಕನಿಷ್ಠ ಒಂದು ಮೃತದೇಹ ಬೇಕು. ಆದರೆ, ಹಲವು ವೈದ್ಯಕೀಯ ಕಾಲೇಜುಗಳಲ್ಲಿ ಈ ಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ. 25 ರಿಂದ 30 ವಿದ್ಯಾರ್ಥಿಗಳು ಒಂದು ಮೃತದೇಹದಲ್ಲಿ ಅಧ್ಯಯನ ನಡೆಸಲಾಗುತ್ತಿದೆ. ಇದರಿಂದ ಆಳ ಅಧ್ಯಯನ, ಸಂಶೋಧನೆಗೆ ತೊಡಕಾಗುತ್ತಿದೆ.

ಪ್ರತಿವರ್ಷ ವೈದ್ಯಕೀಯ ಕ್ಷೇತ್ರಕ್ಕೆ ಪ್ರವೇಶ ಪಡೆಯುವವರ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ನೀಟ್ ಪ್ರವೇಶ ಪರೀಕ್ಷೆ ಪ್ರಾರಂಭವಾದಾಗಿನಿಂದ ದೇಶದ ವಿವಿಧ ರಾಜ್ಯಗಳ ವಿದ್ಯಾರ್ಥಿಗಳು ಸಹ ರಾಜ್ಯದ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶಾತಿ ಪಡೆದುಕೊಳ್ಳುತ್ತಿದ್ದಾರೆ. ಜಿಲ್ಲೆಗೊಂದು ವೈದ್ಯಕೀಯ ಕಾಲೇಜು ಪ್ರಾರಂಭಿಸಬೇಕು ಎಂಬ ಉದ್ದೇಶದಿಂದ ರಾಜ್ಯ ಸರಕಾರವು ರಾಜ್ಯದ ಹಲವು ಜಿಲ್ಲೆಗಳಲ್ಲಿ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುತ್ತಿದೆ. ಇಂತಹ ಕಾಲೇಜುಗಳಲ್ಲಿಯೇ ಮೃತ ದೇಹಗಳ ಕೊರತೆ ಕಾಣಿಸುತ್ತಿದೆ. ಗದಗ, ಹಾವೇರಿ, ಕೊಡಗು, ವಿಜಯನಗರ ಸೇರಿದಂತೆ ಇತರೆ ಕಾಲೇಜುಗಳು ಇತ್ತೀಚೆಗಿನ ವರ್ಷದಲ್ಲಿ ಆರಂಭಗೊಂಡ ವೈದ್ಯಕೀಯ ಕಾಲೇಜುಗಳಾಗಿವೆ. ಇಂತಹ ಕಾಲೇಜುಗಳಲ್ಲಿಯೇ ಅತಿ ಹೆಚ್ಚು ಮೃತದೇಹಗಳ ಕೊರತೆ ಇದ್ದು, ವಿದ್ಯಾರ್ಥಿಗಳ ಅಧ್ಯಯನಕ್ಕೆ ಸಮಸ್ಯೆಯಾಗಿದೆ.

ಕಾಯಿದೆ ಏನಿದೆ?

ಕರ್ನಾಟಕ ಅಂಗರಚನಾ ಶಾಸ್ತ್ರ ಕಾಯಿದೆ 1957 ಮತ್ತು ತಿದ್ದುಪಡಿ 1999ರ ನಿಯಮದಲ್ಲಿ ವೈದ್ಯಕೀಯ ಶಿಕ್ಷಣ ಮತ್ತು ಶಂಶೋಧನೆಯ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯಗಳು ಮೃತದೇಹವನ್ನು ದಾನವಾಗಿ ಪಡೆಯಬಹುದಾಗಿದೆ. ಮೃತ ದೇಹವು 6 ಗಂಟೆಗಳ ಬಳಿಕ ಕೊಳೆಯಲು ಪ್ರಾರಂಭವಾಗುತ್ತದೆ. ಆದ್ದರಿಂದ ವ್ಯಕ್ತಿ ಮೃತಪಟ್ಟ 6 ಗಂಟೆಯೊಳಗೆ ದೇಹವನ್ನು ದಾನವಾಗಿ ಪಡೆಯಬೇಕಾಗುತ್ತದೆ. ವ್ಯಕ್ತಿ ಬದುಕಿರುವಾಗಲೇ ತಮ್ಮ ದೇಹ ದಾನದ ಬಗ್ಗೆ ಸಮ್ಮತಿಯ ಉಯಿಲನ್ನು ಅಧಿಕೃತ ವೈದ್ಯಕೀಯ ಸಂಸ್ಥೆಗಳಲ್ಲಿ ನೋಂದಾಯಿಸಬಹುದು. ಅರ್ಜಿ ಸಲ್ಲಿಸದಿದ್ದಲ್ಲಿ ಮೃತ ವ್ಯಕ್ತಿಯ ದೇಹ ದಾನಕ್ಕೆ ಕುಟುಂಬಸ್ಥರು ಇಚ್ಚಿಸಿದರೆ ಅಫಿಡವಿಟ್ ಮೂಲಕ ಅರ್ಜಿ ಸಲ್ಲಿಸಬೇಕಾಗುತ್ತದೆ. ಮರಣದ ಕಾರಣವನ್ನು ದೃಢೀಕರಿಸಿದ ಪ್ರಮಾಣಪತ್ರದೊಂದಿಗೆ ಮೃತದೇಹವನ್ನು ಹಸ್ತಾಂತರಿಸಬೇಕಾಗುತ್ತದೆ. ವ್ಯಕ್ತಿಗಳು ಜೀವಿತಾವಧಿಯಲ್ಲಿ ದಾನಕ್ಕೆ ಪ್ರತಿಜ್ಞೆ ಕೈಗೊಂಡಿದ್ದರೂ ಮರಣ ಹೊಂದಿದ ಸಂದರ್ಭದಲ್ಲಿ ಕುಟುಂಬಸ್ಥರು ವೈದ್ಯಕೀಯ ಸಂಸ್ಥೆಗಳಿಗೆ ಮಾಹಿತಿ ನೀಡದ ಪರಿಣಾಮ ದೇಹ ದಾನಕ್ಕೆ ಹಿನ್ನಡೆಯಾಗುತ್ತಿದೆ.

ಸಾಂದರ್ಭಿಕ ಚಿತ್ರ.

ಖಾಸಗಿ ಕಾಲೇಜುಗಳ ಲಾಬಿ?

ಸರಕಾರಿ ವೈದ್ಯಕೀಯ ಕಾಲೇಜುಗಳು ಖಾಸಗಿ ವೈದ್ಯಕೀಯ ಕಾಲೇಜುಗಳೊಂದಿಗೆ ಸ್ಪರ್ಧೆವೊಡ್ಡುವ ಪರಿಸ್ಥಿತಿ ಎದುರಾಗಿದೆ. ಖಾಸಗಿ ವೈದ್ಯಕೀಯ ಕಾಲೇಜುಗಳು ಬಲಿಷ್ಠರ ಕಪಿಮುಷ್ಠಿಯಲ್ಲಿರುವ ಕಾರಣ ಸುಲಭವಾಗಿ ಎಲ್ಲಾ ಸೌಕರ್ಯಗಳನ್ನು ಪಡೆದುಕೊಳ್ಳುತ್ತಿವೆ. ಮೃತದೇಹಗಳನ್ನು ಸಹ ಲಾಬಿ ಮಾಡಿ ಪಡೆದುಕೊಳ್ಳುತ್ತಿವೆ. ನಾನಾ ರೀತಿಯ ಆಮಿಷ ಇರಬಹುದು ಅಥವಾ ಪ್ರಭಾವ ಬೀರಿ ಮೃತದೇಹಗಳನ್ನು ಪಡೆದುಕೊಳ್ಳುತ್ತಿವೆ. ತಮ್ಮ ಕಾಲೇಜಿನ ಫಲಿತಾಂಶವನ್ನು ಉತ್ತಮವಾಗಿ ಬರುವಂತೆ ಮಾಡಿಕೊಳ್ಳಲು ಖಾಸಗಿ ವೈದ್ಯಕೀಯ ಕಾಲೇಜುಗಳು ಭಾರೀ ಪ್ರಮಾಣದಲ್ಲಿ ಲಾಬಿ ನಡೆಸುತ್ತಿವೆ.

ಹೊಸ ವೈದ್ಯ ಕಾಲೇಜಿಗೆ ತೊಂದರೆ

ವೈದ್ಯಕೀಯ ಶಿಕ್ಷಣ ಇಲಾಖೆ ಮೂಲಗಳ ಪ್ರಕಾರ, ಕೊಡಗಿನ ವೈದ್ಯಕೀಯ ಕಾಲೇಜು ಶವಗಳ ಕೊರತೆಯಲ್ಲಿ ಮೊದಲ ಸ್ಥಾನ ಇದ್ದರೆ, ವಿಮ್ಸ್ ಎರಡನೇ ಸ್ಥಾನದಲ್ಲಿದೆ. ಇತ್ತೀಚೆಗಿನ ದಿನದಲ್ಲಿ ಶವಗಳ ಕೊರತೆ ಹೆಚ್ಚಾಗಿ ಕಾಡುತ್ತಿವೆ. ಕೊಡಗು, ವಿಜಯನಗರ, ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆಯು 10ಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಮೃತದೇಹಗಳ ಕೊರತೆ ಎದುರಿಸುತ್ತಿವೆ. ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಬಿಎಂಸಿಆರ್ಐ) ಸೇರಿ ಕೆಲ ವೈದ್ಯಕೀಯ ಕಾಲೇಜುಗಳಿಗೆ ಎಂಸಿಐ ಗೊತ್ತುಪಡಿಸಿದ ಸಂಖ್ಯೆಗಿಂತ ಹೆಚ್ಚಿನ ಸಂಸ್ಥೆಯಲ್ಲಿ ಮೃತದೇಹಗಳು ಲಭ್ಯವಾಗುತ್ತಿವೆ. ಆದರೆ, ಬೆಂಗಳೂರು ಹೊರತುಪಡಿಸಿ ಜಿಲ್ಲೆಗಳಲ್ಲಿರುವ ವೈದ್ಯಕೀಯ ಕಾಲೇಜುಗಳ ಮೃತದೇಹಗಳ ಕೊರತೆ ಇದೆ.

ಚಂಡಮಾರುತ ಪ್ರಸರಣ ರಾಜ್ಯಾದ್ಯಂತ ಮಳೆ

ಬೆಂಗಳೂರಿನಲ್ಲಿ ಇನ್ನು 2 ದಿನ ಮಳೆ, ಯೆಲ್ಲೋ ಅಲರ್ಟ್

ಬೆಂಗಳೂರು: ಸಮುದ್ರ ಹಾಗೂ ಭೂಮಿಯ ಮೇಲ್ಮೈ ಬದಲಾವಣೆಯಿಂದಾಗಿ ನಗರದಲ್ಲಿ ಕಳೆದೊಂದು ವಾರದಿಂದ ಭಾರಿ ಮಳೆಯಾಗುತ್ತಿದ್ದು, ಮುಂದಿನ 2 ದಿನಗಳ ಕಾಲ ಬೆಂಗಳೂರಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

ಭಾರತೀಯ ಹವಾಮಾನ ಇಲಾಖೆ ಪ್ರಕಾರ, ಜಾರ್ಖಂಡ್, ಮಧ್ಯ ಪ್ರದೇಶ ಭಾಗದಿಂದ ಪಶ್ಚಿಮ ಬಂಗಾಳವರೆಗೆ ಹಾದು ಹೋದ ಚಂಡಮಾರುತ ಪ್ರಸರಣವು ತೀವ್ರಗೊಂಡಿದ್ದು, ಕರ್ನಾಟಕದಲ್ಲಿ ಮುಂಗಾರು ಮಳೆ ತೀವ್ರವಾಗಿದೆ. ಪರಿಣಾಮ ಬೆಂಗಳೂರಿನಲ್ಲಿಯೂ ಮಳೆ ವಾತಾವರಣ, ತಂಪು ಗಾಳಿ ಸೃಷ್ಟಿಯಾಗಿದೆ. ಈ ಹವಾಮಾನ ವೈಪರೀತ್ಯವು ಮತ್ತಷ್ಟು ತೀವ್ರಗೊಳ್ಳುವ ಮುನ್ಸೂಚನೆ ಇದೆ. ಈ ಹಿನ್ನೆಲೆ ಬೆಂಗಳೂರು ನಗರಕ್ಕೆ ಜುಲೈ 22 ಮತ್ತು 23 ರಂದು ಯೆಲ್ಲೋ ಅಲರ್ಟ್ ನೀಡಲಾಗಿದೆ. ನಗರದಲ್ಲಿ ಹಲವೆಡೆ ಬರೋಬ್ಬರಿ 115 ಮಿ.ಮೀ ಗಿಂತಲೂ ಅಧಿಕ ಮಳೆ ನಿರೀಕ್ಷೆ ಇದೆ. ಉಳಿದೆಡೆ ಆಗಾಗ ಹಗುರದಿಂದ ಸಾಧಾರಣವಾಗಿ ಮತ್ತು ತುಂತುರು ಮಳೆ ಬೀಳುವ ಸಂಭವವಿದ್ದು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲೂ ವಿಪರೀತ ಮಳೆ ಸುರಿಯಲಿದೆ ಎಂದು ಹವಾಮಾನ ತಜ್ಞರು ಅಂದಾಜಿಸಿದ್ದಾರೆ.

ಜುಲೈ 25ರವರೆಗೆ ಅಂದರೆ ಮುಂದಿನ ಐದು ದಿನಗಳ ಕಾಲ ಬೆಂಗಳೂರಿನಲ್ಲಿ ವ್ಯಾಪಕ ಮಳೆ ನಿರೀಕ್ಷೆಯಿದ್ದು, ಗರಿಷ್ಠ ತಾಪಮಾನ 29 ಹಾಗೂ ಕನಿಷ್ಠ ತಾಪಮಾನ 20 ಡಿಗ್ರಿ ಸೆಲ್ಸಿಯಸ್ ನಷ್ಟು ದಾಖಲಾಗುತ್ತದೆ. ಸೋಮವಾರ ಹವಾಮಾಣದ ವೈಪರೀತ್ಯಗಳು ತೀವ್ರಗೊಳ್ಳುವ ಸಾಧ್ಯತೆ ಇದೆ. ಹೀಗಾಗಿ ಮುಂದಿನ ಎರಡು ದಿನ ಸಾಧಾರಣದಿಂದ ಭಾರೀ ಮಳೆ ಆಗಲಿದೆ. ಭಾನುವಾರ ಬೆಳಗ್ಗೆಯಿಂದಲೂ ಮೋಡ ಕವಿದ ವಾತಾವರಣವಿದ್ದು, ಮಧ್ಯಾಹ್ನದ ವೇಳೆಗೆ ಹಲವೆಡ ಜೋರು ಮಳೆ ಸುರಿದಿದೆ.

ಉತ್ತರಕನ್ನಡ ಜಿಲ್ಲೆಗೆ ರೆಡ್ ಅಲರ್ಟ್: ಧಾರವಾಡ, ಗದಗ ಜಿಲ್ಲೆಯ ಕೆಲವೆಡೆ ಮಳೆಯಾಯಿತು. ಗದಗ ನಗರ ಸೇರಿದಂತೆ ಜಿಲ್ಲೆಯ ಲಕ್ಷ್ಮೇಶ್ವರ, ಗಜೇಂದ್ರಗಡ ಹಾಗೂ ನರೇಗಲ್ ಹೋಬಳಿಯಲ್ಲಿಯೂ ಜೋರು ಮಳೆಯಾಗಿದೆ.

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಎಡಬಿಡದೆ ಮಳೆ ಸುರಿದಿದ್ದು, ಭಟ್ಕಳ ತಾಲ್ಲೂಕಿನ ಬೇಂಗ್ರೆ ಮತ್ತು ಕಾಯ್ಕಿಣಿ ಗ್ರಾಮಗಳಲ್ಲಿ 13 ಸೆಂ.ಮೀ.,ನಷ್ಟು ಮಳೆ ದಾಖಲಾಗಿದೆ. ಮುಂದಿನ ಎರಡು ದಿನ ರೆಡ್ ಅಲರ್ಟ್ ಘೋಷಿಸಲಾ ಗಿದೆ. ಭಾರಿ ಮಳೆಯಿಂದಾಗಿ ದಿಢೀರ್ ಪ್ರವಾಹ ಸ್ಥಿತಿ ಎದುರಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ತಗ್ಗು ಪ್ರದೇಶದಲ್ಲಿನ ಜನರು ಸುರಕ್ಷಿತ ಜಾಗಕ್ಕೆ ಸ್ಥಳಾಂತರಗೊಳ್ಳಲು ಜಿಲ್ಲಾಡಳಿತ ಸೂಚಿಸಿದೆ. ಇನ್ನು ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಉಳ್ಳಾಲ, ಬಂಟ್ವಾಳ ತಾಲೂಕುಗಳ ವ್ಯಾಪ್ತಿಯಲ್ಲಿ ಶನಿವಾರ ಉತ್ತಮ ಮಳೆ ಸುರಿಯಿತು. ಉಡುಪಿ ಜಿಲ್ಲೆಯಾದ್ಯಂತ ದಿನವಿಡೀ ಮೋಡ ಮುಸುಕಿದ ವಾತಾವರಣವಿತ್ತು.

ವಿಧಾನಸೌಧದ ಮುಂಭಾಗದಲ್ಲಿ ಮಳೆಯಲ್ಲೇ ಸಂಚರಿಸುತ್ತಿರುವ ಸಾರ್ವಜನಿಕರು .
ಫೋಟೋ : ಸುಧಾಕರ್ ದೇವರಾಜ್

ನಿತೀಶ್‌ರನ್ನು ಪೂರ್ತಿ ಮುಗಿಸಲು ಚಿರಾಗ್, ಪಾಸ್ವಾನ್ ವ್ಯೂಹ

← ಮೊದಲಪುಟದಿಂದ

ಏಕೆಂದರೆ, ನಿತೀಶ್ ಪ್ರಭಾವಳಿ ತಗ್ಗಬೇಕು ಮತ್ತು ಅಂತಿಮವಾಗಿ ಬಿಜೆಪಿ ಮುಂದೆ ಅವರು ಬಗ್ಗಬೇಕು ಎನ್ನುವುದೇ ಮೋದಿ-ಶಾ ಆಶಯವಾಗಿತ್ತು. ಹಾಗಾಗಿ, ಅವಕಾಶ ಸಿಕ್ಕಾಗಲೆಲ್ಲಾ ಮಾಜಿ ಕೇಂದ್ರ ಸಚಿವ, ದಿವಂಗತ ರಾಮ್ ವಿಲಾಸ್ ಪಾಸ್ವಾನ್‌ರನ್ನು ಹೊಗಳುತ್ತಾ, ಜೆಡಿಯು ವಿರುದ್ಧದ ವ್ಯೂಹ ರಚನೆಯಲ್ಲಿ ಎಲ್ಜೆಪಿ ಜತೆ ಕೈಜೋಡಿಸಿದ್ದರು.

ಈ ಸಲವೂ ಚಿರಾಗ್ 5 ವರ್ಷದ ಹಿಂದಿನ ಚುನಾವಣಾ ರಣನೀತಿಯನ್ನೇ ನಿತೀಶ್ ವಿರುದ್ಧ ಪ್ರಯೋಗಿಸಲು ಮುಂದಾಗಿ ದ್ದಾರೆ. ಇದನ್ನು ಬಿಜೆಪಿ ಆಣತಿಯಂತೆಯೇ ಮಾಡುತ್ತಿದ್ದಾರೆಂಬ ಅನುಮಾನವೆದ್ದಿದೆ. ರಾಷ್ಟ್ರಮಟ್ಟದಲ್ಲಿ ಎನ್‌ಡಿಎ ಮಿತ್ರನಾಗಿ ಮತ್ತು ಕೇಂದ್ರದಲ್ಲಿ ಸಚಿವರೂ ಆಗಿರುವುದರಿಂದ ಈಗಿನ ಲೆಕ್ಕಾಚಾರಗಳ ಪ್ರಕಾರ ಚಿರಾಗ್ ಎನ್‌ಡಿಎ ಮೈತ್ರಿಕೂಟದಲ್ಲಿದ್ದುಕೊಂಡೇ ರಾಜ್ಯ ಚುನಾವಣೆ ಎದುರಿಸಲಿದ್ದಾರೆ.

ಜೆಡಿಯು ಕೂಡ ಎನ್‌ಡಿಎ ಮಿತ್ರಪಕ್ಷ. ಆದರೆ, ರಾಜ್ಯದಲ್ಲಿ ಕಾನೂನು-ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ ಎಂದು ಇತ್ತೀಚಿನ ಹತ್ಯೆ ಪ್ರಕರಣಗಳನ್ನು ಉಲ್ಲೇಖಿಸಿ, ಪರೋಕ್ಷವಾಗಿ ನಿತೀಶ್ ನಾಯಕತ್ವವನ್ನು ಪ್ರಶ್ನಿಸುತ್ತಿರುವ ಚಿರಾಗ್ ಪಾಸ್ವಾನ್, ಕಳೆದ ಬಾರಿ ಅರ್ಧ ಮುಗಿಸಿದ್ದ ನಿತೀಶರನ್ನು ಈ ಬಾರಿ ಪೂರ್ಣ ಮುಗಿಸುತ್ತೇನೆ ಎಂದು ಶಪಥ ಮಾಡಿದಂತಿದೆ. ಬಿಜೆಪಿ ಒಳಗೊಂಡ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟವನ್ನೇ ಪ್ರಶ್ನಿಸುತ್ತಿದ್ದೇನೆ ಎನ್ನುವುದು ಚಿರಾಗ್‌ಗೆ ಗೊತ್ತಿದ್ದರೂ, ವ್ಯವಸ್ಥಿತ ವ್ಯೂಹತಂತ್ರದೊಂದಿಗೆ ಚುನಾವಣಾ ಕಣಕ್ಕೆ ಅವರು ಧುಮುಕಿದಂತಿದೆ. ರಾಷ್ಟ್ರ ರಾಜಕಾರಣದ ಬದಲಿಗೆ, ರಾಜ್ಯಕ್ಕೆ ಮರಳಬೇಕೆಂಬ ತವಕದಲ್ಲಿರುವ ಚಿರಾಗ್, ಈಗ ಸಿಎಂ ಸೀಟಿನ ಮೇಲೆ ಕಣ್ಣಿಲ್ಲ ಎನ್ನುತ್ತಿದ್ದಾರೆ. ಆದರೆ, ರಾಜಕೀಯದಲ್ಲಿ ಯಾರೂ ಸನ್ಯಾಸಿಗಳಲ್ಲ ಎನ್ನುವುದು ವಾಸ್ತವ.

ರಾಜ್ಯದ ಎಲ್ಲಾ 243 ಕ್ಷೇತ್ರಗಳಲ್ಲಿ ಸ್ಪರ್ಧಿಸಿ, ಎನ್‌ಡಿಎ ಗೆಲುವನ್ನು ಖಚಿತಪಡಿಸಿಕೊಳ್ಳುವುದು ನನ್ನ ಗುರಿ ಎಂದು ಕೆಲ ದಿನಗಳ ಹಿಂದೆ ಚಿರಾಗ್ ಪ್ರಕಟಿಸಿದ್ದರು. ವಿಧಾನಸಭೆಯಲ್ಲಿ ಸದ್ಯ ಎಲ್‌ಜೆಪಿ (ಆರ್‌ವಿ)ಗೆ ಶಾಸಕ ಸ್ಥಾನವಿಲ್ಲ. ಈ ಬಾರಿ ಮತ್ತೆ ಖಾತೆ ತೆರೆದು ಸಂಖ್ಯೆ ಏರಿಸಿಕೊಳ್ಳಲು ಚಿರಾಗ್ ವೇದಿಕೆ ಸಿದ್ಧಪಡಿಸಿಕೊಳ್ಳುತ್ತಿದ್ದಾರೆ. ಹಾಗಂತ, ಕಳೆದ ಬಾರಿಯಂತೆ ಈ ಸಲವೂ ಅಂದಾಜು 115 ಸೀಟುಗಳ ಪಾಲನ್ನು ಕೇಳಿರುವ ಜೆಡಿಯು, ಎಲ್'ಜೆಪಿ ಸ್ಪರ್ಧಿಸುವ ಸೀಟುಗಳನ್ನು ಹೆಚ್ಚಿಸುವ ವಾದ ಒಪ್ಪಲಿಕ್ಕಿಲ್ಲ. 2020ರ ಕಳಪೆ ನಿರ್ವಹಣೆ ಹೊರತಾಗಿಯೂ ತನ್ನ ಸ್ಥಾನಗಳನ್ನು ಜೆಡಿಯು ಎಲ್ಜೆಪಿಗೆ ಬಿಟ್ಟುಕೊಡಲು ಸುತಾರಾಂ ಒಪ್ಪಲಿಕ್ಕಿಲ್ಲ. ಇಂಥಾ ಜಟಿಲ ಸನ್ನಿವೇಶದಲ್ಲಿ, ಚಿರಾಗ್ ತೆಗೆದುಕೊಳ್ಳುವ ನಿಲುವು ನಿರ್ಣಾಯಕ ಎನಿಸಿಕೊಳ್ಳಲಿದೆ. ಸೀಟು ಹಂಚಿಕೆ ಬಗ್ಗೆ ಅಸಮಾಧಾನಗೊಂಡು ನಂತರ ಪ್ರತ್ಯೇಕ ಸ್ಪರ್ಧೆಗೆ ಚಿರಾಗ್ ಮನಸ್ಸು ಮಾಡಬಹುದು. ಇದಕ್ಕೆ ಬಿಜೆಪಿ ಮೌನ ಸಮ್ಮತಿ ನೀಡುವ ಸಾಧ್ಯತೆಯೂ ಹೆಚ್ಚು. ಇಂಥಾ ರಾಜಕೀಯ ಸನ್ನಿವೇಶ ನಿರ್ಮಾಣವಾದರೆ ಅದು ಮತ್ತೆ ನಿತೀಶ್‌ಗೆ ಹಾನಿ ಮಾಡಬಹುದು.

2005ರ ಫೆಬ್ರವರಿಯಲ್ಲಿ ನಡೆದ ವಿಧಾನಸಭೆ ಚುನಾವಣೆ ಮತ್ತು ಅಕ್ಟೋಬರ್‌ನಲ್ಲಿ ನಡೆದಿದ್ದ ಮಧ್ಯಂತರ ಚುನಾವಣೆಯಲ್ಲಿ ಎಲ್‌ಜೆಪಿ ಎರಡಂಕಿಗಿಂತ ಹೆಚ್ಚು ಮತಪಾಲು ಪಡೆದಿದ್ದು ಬಿಟ್ಟರೆ, ಉಳಿದ ಯಾವ ಚುನಾವಣೆಯಲ್ಲೂ ಎಲ್‌ಜೆಪಿ ವೋಟ್‌ಷೇರು ಎರಡಂಕಿ ದಾಟಿಲ್ಲ. ಪಾಸ್ವಾನ್ ಸಮುದಾಯ ಬಿಟ್ಟರೆ ದಲಿತ ಸಮುದಾಯದೊಳಗಿನ ಇತರೆ ಜಾತಿಗಳನ್ನು ಆಕರ್ಷಿಸಲು ರಾಮ್ ವಿಲಾಸ್ ಪಾಸ್ವಾನ್‌ಗೆ ಸಾಧ್ಯವಾಗಲೇ ಇಲ್ಲ. ರಾಜ್ಯದ ಒಟ್ಟಾರೆ ಜನಸಂಖ್ಯೆಯಲ್ಲಿ ದಲಿತರ ಪ್ರಮಾಣ 19.65ರಷ್ಟಿದೆ. ಈ ಹಿನ್ನೆಲೆಯಲ್ಲಿ ತಮ್ಮನ್ನು ಪಾಸ್ವಾನ್ ಸಮುದಾಯಕ್ಕಷ್ಟೇ ಸೀಮಿತಗೊಳಿಸದೆ, ರಾಜ್ಯವ್ಯಾಪಿ ಒಪ್ಪುವ ನಾಯಕನಾಗಲು ಚಿರಾಗ್ ಹೊರಟಿದ್ದಾರೆ. ಹೀಗಾಗಿ, ಈ ಸಲದ ಬಿಹಾರ ಚುನಾವಣೆ ಚಿರಾಗ್ ಪಾಲಿಗೆ ಭದ್ರ ಭವಿಷ್ಯ ರೂಪಿಸುವ ಮಹತ್ವದ ಚುನಾವಣೆ. ಮತ್ತೊಂದೆಡೆ, ಪಲ್ಟು ರಾಮ್ ಕುಖ್ಯಾತಿಯ ನಿತೀಶ್ ಕುಮಾರ್‌ಗೆ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳುವ ನಿರ್ಣಾಯಕ ಚುನಾವಣೆಯೂ ಹೌದು.

'ಬಹುಜನ' ನಾಯಕನಾಗುವ ಪ್ರಯತ್ನ: ಚಿರಾಗ್ ಅವರು ದಲಿತ ಸಮುದಾಯದ ಪಾಸ್ವಾನ್ ಎಂದೂ ಕರೆಯಲ್ಪಡುವ ದುಸಾಧ್ ಜಾತಿಗೆ ಸೇರಿದವರು. ಪರಿಶಿಷ್ಟ ಜಾತಿಗೆ ಒಳಪಟ್ಟ ಈ ಮಂದಿ ವಿಶೇಷವಾಗಿ ಬಿಹಾರ, ಉತ್ತರ ಪ್ರದೇಶ ಮತ್ತು ಜಾರ್ಖಂಡ್‌ನಲ್ಲಿ ಕಂಡುಬರುತ್ತಾರೆ. ರಾಮ್ ವಿಲಾಸ್‌ರಂತೆ ತನ್ನನ್ನು ಕೇವಲ ದಲಿತ ನಾಯಕ ಎಂದು ಬಿಂಬಿಸಿಕೊಳ್ಳುವ ಬದಲು, ಹಿಂದುಳಿದ ವರ್ಗ, ಒಬಿಸಿ, ಬುಡಕಟ್ಟು ಜನಾಂಗ ಮತ್ತು ಅಲ್ಪಸಂಖ್ಯಾತರನ್ನೊಳಗೊಂಡ ಬಹುಜನ ನಾಯಕನನ್ನಾಗಿ ರೂಪಿಸಿಕೊಳ್ಳಬೇಕು ಎನ್ನುವುದು ಚಿರಾಗ್ ಆಶಯ. ಇದೇ ಕಾರಣಕ್ಕಾಗಿ, ಕಳೆದ ಜೂನ್ 29ರಂದು ನಿತೀಶ್ ಕುಮಾರ್ ಅವರ ಮಾತೃ ಜಿಲ್ಲೆ ನಳಂದಾದಲ್ಲಿ ಬಹುಜನ್ ಭೀಮ್ ಸಂಕಲ್ಪ ಸಮಾಗಮ ಎಂಬ ಸಮಾವೇಶ ಹಮ್ಮಿಕೊಂಡಿದ್ದರು. ಎಲ್‌ಜೆಪಿ (ರಾಮ್ ವಿಲಾಸ್) ಸ್ಥಾಪನೆಯಾದ ಮೂರು ವರ್ಷಗಳ ಬಳಿಕ ಚಿರಾಗ್, ಬಹುಜನರ ಹೆಸರಲ್ಲಿ ಇಂಥದ್ದೊಂದು ಕಾರ್ಯಕ್ರಮ ಏರ್ಪಡಿಸಿದ್ದರು. ಮೀಸಲು ಅಲ್ಲದ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸುವುದಾಗಿಯೂ ಅವರು ಘೋಷಿಸಿದ್ದಾರೆ.

(ಲೇಖಕರು ಹಿರಿಯ ಪತ್ರಕರ್ತರು)

ಲೈಂಗಿಕ ದೌರ್ಜನ್ಯ ಆರೋಪ ಸಾಬೀತು 20 ವರ್ಷ ಜೈಲು ಶಿಕ್ಷೆ

ಉಡುಪಿ: ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಆರೋಪಿಯನ್ನು ದೋಷಿ ಎಂದು ಪೋಕ್ಸೊ ನ್ಯಾಯಾಲಯದ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಧೀಶ ಶ್ರೀನಿವಾಸ್ ಸುವರ್ಣ ಅವರು ಆದೇಶಿಸಿದ್ದಾರೆ. ನ್ಯಾಯಾಲಯವು ಆರೋಪಿಗೆ 20 ವರ್ಷಗಳ ಕಠಿಣ ಕಾರಗೃಹ ಶಿಕ್ಷೆ ಹಾಗೂ 25 ಸಾವಿರ ದಂಡ ವಿಧಿಸಿದ್ದು, ಸಂತ್ರಸ್ತ ಬಾಲಕಿಗೆ ಸರಕಾರದಿಂದ 1.50 ಲಕ್ಷ ಪರಿಹಾರ ನೀಡುವಂತೆ ಆದೇಶಿಸಿದೆ.

ಶಿಕ್ಷೆಗೆ ಗುರಿಯಾದ ಆರೋಪಿಯನ್ನು ಬಾಗಲಕೋಟೆ ಜಿಲ್ಲೆಯ ಮಂಜುನಾಥ್ ಎಂದು ಗುರುತಿಸಲಾಗಿದೆ. ಸಂತ್ರಸ್ತ ಬಾಲಕಿಯು ಕಾಪು ತಾಲೂಕಿನವಳಾಗಿದ್ದಾಳೆ. ಆರೋಪಿಯು ಬಾಲಕಿಯ ಅಣ್ಣನ ಸ್ನೇಹಿತ. ಬಾಲಕಿಯನ್ನು ಫೋನ್‌ನಲ್ಲಿ ಸಂಪರ್ಕಿಸಿದ ಆರೋಪಿಸಿ ಪ್ರೀತಿಸುತ್ತೇನೆ ಎಂದು ನಂಬಿಸಿದ್ದನು. ನಂತರ ತಮ್ಮ ಪ್ರೀತಿಯ ಬಗ್ಗೆ ಅಣ್ಣನಿಗೆ ತಿಳಿಸುವುದಾಗಿ ಬೆದರಿಸುತ್ತಿದ್ದನಂತೆ. ಸಂತ್ರಸ್ತೆ ತನ್ನ ಅಜ್ಜಿ ಮನೆಯಾದ ಗದಗ ಜಿಲ್ಲೆಯ ರೋಣ ತಾಲೂಕಿಗೆ ತೆರಳಿದ್ದಾಗ, ಆರೋಪಿ ಬಲವಂತದಿಂದ ನಿರ್ಜನ ಪ್ರದೇಶಕ್ಕೆ ಬಾಲಕಿಯನ್ನು ಕರೆದುಕೊಂಡು ಹೋಗಿ, ದೈಹಿಕ ಸಂಪರ್ಕ ಬೆಳೆಸಿ ವಿಡಿಯೊ ಮಾಡಿದ್ದನು. ಈ ವಿಚಾರ ಯಾರಿಗಾದರೂ ಹೇಳಿದ್ದಲ್ಲಿ, ತಾನು ಮಾಡಿರುವ ವಿಡಿಯೊವನ್ನು ಅಣ್ಣ ಹಾಗೂ ಮನೆಯವರಿಗೆ ಕಳುಹಿ ಸುವುದಾಗಿ ಬೆದರಿಸಿದ್ದನು. ಈ ಕುರಿತು ಠಾಣೆಯಲ್ಲಿ ದಾಖಲಾಗಿತ್ತು. ಅರವಿಂದ್ ಕಲ್ಲಗುಜ್ಜಿ ತನಿಖೆ ನಡೆಸಿ ಚಾರ್ಜ್‌ಶೀಟ್ ಸಲ್ಲಿಸಿದ್ದರು.

ಮಾಂಸಾಹಾರ ಡೆಲಿವರಿ ಡೋಮಿನೋಸ್‌ಗೆ 60 ಸಾವಿರ ರುಪಾಯಿ ದಂಡ

ಧಾರವಾಡ: ಸಸ್ಯಹಾರಿ ಪದಾರ್ಥಗಳನ್ನು ಆರ್ಡರ್ ಮಾಡಿದ್ದ ಗ್ರಾಹಕನಿಗೆ ಮಾಂಸಾಹಾರ ಪದಾರ್ಥ ನೀಡಿದ ಪ್ರಕರಣದಲ್ಲಿ ಡೋಮಿನೋಸ್ ಪಿಜ್ಜಾ ಡೆಲಿವರಿ ಕಂಪನಿಗೆ ಜಿಲ್ಲಾ ಗ್ರಾಹಕರ ಆಯೋಗವು 60 ಸಾವಿರ ರು. ದಂಡ ವಿಧಿಸಿದೆ.

ಧಾರವಾಡದ ವಿದ್ಯಾಗಿರಿಯ ನಿವಾಸಿ ಹಾಗೂ ವಿದ್ಯಾರ್ಥಿ ಪ್ರದ್ಯುಮ್ನ ಇನಾಮದಾರ ಎಂಬವರು ಕಂಪನಿಯ ಜಾಹೀರಾತನ್ನು ನೋಡಿ, ಸಸ್ಯಾಹಾರಿ ಪದಾರ್ಥಗಳಾದ ಇಂಡಿ ತಂದೂರಿ, ಪನ್ನೀರ್ ಪಿಜ್ಜಾ, ಪನ್ನೀರ್ ಟಿಕ್ಕಾ, ಸ್ಟಫ್ಡ್ ಗಾರ್ಲಿಕ್ ಬ್ರೆಡ್, ವೆಜ್‌ಜಿಂಗಿ ಪಾರ್ಸೆಲ್ ಹಾಗೂ ಚೀಪ್ಸ್ ಡಿಪನ್ನು 555 ರು. ಪಾವತಿಸಿ ಆರ್ಡರ್ ಮಾಡಿದ್ದರು. ಅದರಂತೆ, ಡೋಮಿನೋಸ್ ಸಿಬ್ಬಂದಿ ಆಹಾರವನ್ನು ಮನೆಗೆ ತಲುಪಿಸಿದ್ದು, ಅದನ್ನು ಸೇವನೆ ಮಾಡುವಾಗ ಅದು ಸಸ್ಯಾಹಾರವಲ್ಲ ಮಾಂಸಾಹಾರಿ ಪದಾರ್ಥ ಎನ್ನುವುದು ತಮಗೆ ಗೊತ್ತಾಗಿದೆ ಎಂದು ದೂರುದಾರರು ಆರೋಪಿಸಿದ್ದಾರೆ.

ಪಾರ್ಸೆಲ್ ಬಾಕ್ಸ್‌ನ ಮೇಲೆ ಹಸಿರು ಸ್ಟಿಕ್ಕರ್ ಅಂಟಿಸಿದ್ದು, ಆದರೆ ಅದರಲ್ಲಿ ಮಾಂಸಹಾರಿ ಪದಾರ್ಥ ಕಳುಹಿಸಿದ್ದಾರೆ. ಅದನ್ನು ಸೇವಿಸಿದ್ದರಿಂದ ತನಗೆ ಧರ್ಮ ಭ್ರಷ್ಟ ಮಾಡಿದಂತಾಗಿದೆ. ಅಲ್ಲದೆ, ತಪ್ಪು ಪಾರ್ಸೆಲ್ ಕಳುಹಿಸಿ, ಡೋಮಿನೋಸ್ ಕಂಪನಿಯವರು ಸೇವಾ ನ್ಯೂನತೆ ಎಸಗಿದ್ದಾರೆ. ಹೀಗಾಗಿ, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಪ್ರದ್ಯುಮ್ನ ಇನಾಮದಾರ, ಜಿಲ್ಲಾ ಗ್ರಾಹಕರ ಆಯೋಗಕ್ಕೆ ಜನವರಿ 1ರಂದು ದೂರು ಸಲ್ಲಿಸಿದ್ದರು. ಈ ಬಗ್ಗೆ ಕೂಲಂಕಷ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷ ಈಶಪ್ಪ ಭೂತೆ ಹಾಗೂ ವಿಶಾಲಾಕ್ಷಿ ಅ. ಬೋಳಶೆಟ್ಟಿ ಅವರು ಡೋಮಿನೋಸ್ ದಂಡ ಹಾಕಿದ್ದಾರೆ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಐಬಿಸಿ ವಿಭಾಗ ಸಂಖ್ಯೆ-2
ಆಲಮೇಲ-586202.ದೂರವಾಣಿ ಸಂ:08488-232298. ಇ-ಮೇಲ್:kbjnleealmel@gmail.com
ಸಂ:ಕೃಭಾಜನಿನಿ/ಐಬಿಸಿವಿ-2/ಪಿಬಿ/2025-26/181 ದಿನಾಂಕ:16.07.2025

ಅಲ್ಪಾವಧಿ ಇ- ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರ, ಕೃಭಾಜನಿನಿ ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ ಐಬಿಸಿ ವಿಭಾಗ ಸಂಖ್ಯೆ : 2, ಆಲಮೇಲ ಇವರ ಕಚೇರಿಯಿಂದ ಈ ಕೆಳಗೆ ಪಟ್ಟಿಕಟಿಸಿರುವ ಕಾಮಗಾರಿಗಳಿಗೆ ಶೇಕಡಾವಾರು ಟೆಂಡರ್ ಆಹ್ವಾಹಿಸಲಾಗಿದೆ.

ಕಾಮಗಾರಿಗಳ ಹೆಸರು: 1) AME of Canal for 2025-26

ಟೆಂಡರ್ ಪದ್ಧತಿ: ಏಕ-ಲಕೋಟೆ. **ಅಂದಾಜು ಮೊತ್ತ ಲಕ್ಷಗಳಲ್ಲಿ :** ರೂ. 135.09 ಲಕ್ಷಗಳು (22 AME of Canal Works) ಕಾಮಗಾರಿಗಳ ಮೊತ್ತದ ವಿವರ: * ಗರಿಷ್ಠ ಮೊತ್ತ ರೂ. 10.80 ಲಕ್ಷ – ಕನಿಷ್ಠ ಮೊತ್ತ ರೂ. 2.70 ಲಕ್ಷ. * ಗರಿಷ್ಠ ಇ.ಎಂ.ಡಿ ಮೊತ್ತ ರೂ. **22,500/-**, ಕನಿಷ್ಠ ಇ.ಎಂ.ಡಿ ಮೊತ್ತ ರೂ. **5,700/-**.
ಗುತ್ತಿಗೆದಾರರ ಅರ್ಹತೆ: ಕೆ.ಪಿ.ಡಬ್ಲ್ಯೂಡಿಯಲ್ಲಿ ನೊಂದಾಯಿತಿ 4ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರ ಹಾಗೂ ಅಸಿಸ್ಟಂಟ್ ಲೇಬರ್ ಕಮೀಶನರ್ ಡಿವ್ಹಿಜನ್ ಬೆಳಗಾಂವ/ಕಲಬುರಗಿ ಕಛೇರಿಯಲ್ಲಿ ನೊಂದಣಿ ಮಾಡಲಾದ ಅರ್ಹ ಗುತ್ತಿಗೆದಾರರಿಂದ (ಎಸ್.ಸಿ/ಎಸ್.ಟಿ/CAT-1/CAT-II(A)) ಮೀಸಲಿಟ್ಟ ಕಾಮಗಾರಿಗಳಿಗೆ ಮೇಲಿನ ದಾಖಲೆಗಳ ಜೊತೆಗೆ 10 ವರ್ಷ ಮೇಲ್ಪಟ್ಟ ಡೋಮಿಶಿಯಲ್ & ಜಾತಿ ಪ್ರಮಾಣ ಪತ್ರ ಲಗತ್ತಿಸುವುದು ಕಡ್ಡಾಯವಾಗಿರುತ್ತದೆ.) **ಇ-ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೇ: DTS, ನೋಡುವ / ಸಲ್ಲಿಸುವ ದಿನಾಂಕ: 2.07.2025 ರಿಂದ 30.07.2025 ರ ಸಂಜೆ 4.30 ರ ವರೆಗೆ ಹಾಗೂ ಬಿಡ್ಡನ್ನು ದಿನಾಂಕ : 01.08.2025 ರಂದು 11.00 ಗಂಟೆಗೆ ತೆರೆಯಲಾಗುವುದು.**

ಗುತ್ತಿಗೆದಾರರು ದಾಖಲೆಗಳನ್ನು ಇ-ಟೆಂಡರಿಂಗ್ ಮೂಲಕ 'http:www.kppp.kar.gov.in ಅಂತರ್ಜಾದಲ್ಲಿ ತಾಂತ್ರಿಕ ವಿವರಗಳನ್ನು ಪಡೆಯಬಹುದಾಗಿದೆ. ಬಿಡ್ಡನ್ನು ತೆರೆಯುವ ಸ್ಥಳ :ಕಾರ್ಯನಿರ್ವಾಹಕ ಇಂಜಿನೀಯರರು, ಕೃಭಾಜನಿನಿ ಐಬಿಸಿ ವಿಭಾಗ ಸಂಖ್ಯೆ : 2, ಆಲಮೇಲ ಇವರ ಕಚೇರಿಯಲ್ಲಿ ಮತ್ತು ಹೆಚ್ಚಿನ ಮಾಹಿತಿಗಾಗಿ ಈ ಕೆಳ ಸಹಿದಾರರ ಕಾರ್ಯಾಲಯಕ್ಕೆ ಸಂಪರ್ಕಿಸಬಹುದಾಗಿದೆ. ಮತ್ತು ಷರತ್ತು ಬದ್ಧ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು, ಯಾವುದೇ ಕಾಮಗಾರಿ/ಗಳ ಒಪ್ಪಿಗೆ/ ತಿರಸ್ಕರಿಸುವ, ಅಥವಾ ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಅಧಿಕಾರ ಸಕ್ಷಮ ಪ್ರಾಧಿಕಾರಕ್ಕೆ ಇರುತ್ತದೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,ಕೃಭಾಜನಿನಿ, ಐಬಿಸಿ ವಿಭಾಗ-2, ಆಲಮೇಲ.
ವಾಸಾಸಂಇ/ವಿಜಯಪುರ/193/ಕೆಎಸ್‌ಎಂಸಿಎ/2025-26

ಪಂಚಮಸಾಲಿ ಶ್ರೀ ಆಸ್ಪತ್ರೆಯಿಂದ ಬಿಡುಗಡೆ

ವಿಜಯಾನಂದ ಕಾಶಪ್ಪನವರ ಹೇಳಿಕೆಗೆ ಅರವಿಂದ ಬೆಲ್ಲದ, ಸಿ.ಸಿ.ಪಾಟೀಲ್ ಖಂಡನೆ

ಬಾಗಲಕೋಟೆ: ಸಂಗಮನಾಥನ ಹಾಗೂ ಬಸವಣ್ಣನ ಕೃಪೆ ಮತ್ತು ಸಮಾಜದ ಬಾಂಧವರ ಪ್ರಾರ್ಥನೆಯಿಂದ ಹುಷಾರಾಗಿದ್ದೇನೆ. ಕೂಡಲಸಂಗಮದ ಪೀಠಕ್ಕೆ ತೆರಳಿ ವಿಶ್ರಾಂತಿ ಪಡೆಯುವೆ ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.



ಅನಾರೋಗ್ಯದ ಹಿನ್ನೆಲೆ ಆಸ್ಪತ್ರೆಗೆ ದಾಖಲಾಗಿದ್ದ ಶ್ರೀಗಳು ಕೂಡಲಸಂಗಮಕ್ಕೆ ತೆರಳಿದ್ದಾರೆ.

ನಗರದ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಎದೆ ನೋವು ಕಾಣಿಸಿಕೊಂಡಿತ್ತು. ಬಾಗಲಕೋಟೆ ನಗರದ ವೈದ್ಯರನ್ನು ಸಂಪರ್ಕ ಮಾಡಿದ್ದೇವು. ಅವರ ಸೂಚನೆ ಮೇರೆಗೆ ಆಸ್ಪತ್ರೆಗೆ ದಾಖಲಾಗಿದ್ದೆ. ಈಗ ಹುಷಾರಾಗಿದ್ದೇನೆ ಎಂದರು.

ಕಾಶಪ್ಪನವರ ಹೇಳಿಕೆ ತಪ್ಪು: ಪಂಚಮಸಾಲಿ ಪೀಠಕ್ಕೆ ಪರ್ಯಾಯ ಪೀಠಾಧಿಪತಿಗಳ ನೇಮಕ ಮಾಡಲಾಗುವುದು ಎಂದಿರುವ ವಿಜಯಾನಂದ ಕಾಶಪ್ಪನವರ ಹೇಳಿಕೆಗೆ ಖಂಡನೆ ವ್ಯಕ್ತವಾಗುತ್ತಿದೆ. ಶಾಸಕ ಅರವಿಂದ ಬೆಲ್ಲದ ಹಾಗೂ ಶಾಸಕ ಸಿ.ಸಿ.ಪಾಟೀಲ ಅವರು ವಿಜಯಾನಂದ ಕಾಶಪ್ಪನವರ ಹೇಳಿಕೆಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರ ಆರೋಗ್ಯವನ್ನು ಶಾಸಕ ಅರವಿಂದ ಬೆಲ್ಲದ ವಿಚಾರಿಸಿದರು, ಇದೇ ವೇಳೆ ಸುದ್ದಿಗಾರರ ಜತೆ ಮಾತನಾಡಿದ ಅವರು, ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಸ್ಥಾವರಕ್ಕೆ ಬೆಲೆ ಕೊಡುವುದಿಲ್ಲ. ಜಂಗಮರಾಗಿ ಓಡಾಡುವ ಅವರಿಗೆ ಮಠದ ಬಗ್ಗೆ ಪ್ರೀತಿ ವ್ಯಾಮೋಹವಿಲ್ಲ. ಪೀಠದಲ್ಲಿ ಅನೈತಿಕ ಚಟುವಟಿಕೆ ಅಂತ ಹೇಳುವುದು ತಪ್ಪು. ಈ ಹೇಳಿಕೆ ಅವರಿಗೆ ಶೋಭೆ ತರುವುದಿಲ್ಲ. ಪೀಠಕ್ಕೆ ಕೀಲಿ ಹಾಕುವ ಕೆಲಸ ಮಾಡುವುದು ಸರಿಯಲ್ಲ. ಸ್ಥಾವರಕ್ಕೆ ಅಳಿವುಂಟು ಜಂಗಮಕ್ಕೆ ಅಳಿವಿಲ್ಲ ಅಂತ ಬಸವಣ್ಣ ಹೇಳಿದ್ದಾರೆ ಎನ್ನುವ ಮೂಲಕ ಶಾಸಕ ವಿಜಯಾನಂದ ಕಾಶಪ್ಪನವರ ವಿರುದ್ಧ ಶಾಸಕ ಅರವಿಂದ ಬೆಲ್ಲದ ಅಸಮಾಧಾನ ವ್ಯಕ್ತ ಪಡಿಸಿದರು.

ದೀಪ ಆರಬೇಕಾದರೆ ಹೆಚ್ಚು ಉರಿಯುತ್ತದೆ

ಬಸವಜಯಮೃತ್ಯುಂಜಯ ಶ್ರೀಗಳ ಆರೋಗ್ಯ ವಿಚಾರಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಸಿ.ಸಿ.ಪಾಟೀಲ ಅವರು, ಶಾಸಕ ವಿಜಯಾನಂದ ಕಾಶಪ್ಪನವರ ಹೇಳಿಕೆಗೆ ವಿರೋಧ ವ್ಯಕ್ತಪಡಿಸಿದರು. ಕೂಡಲಸಂಗಮದ ಮಠದಲ್ಲಿ ಬೇರೆ ಸಮಾಜದವರನ್ನು ನೇಮಿಸಿ, ಫೋಟೊ ತೆಗೆಯೋದು ಕಳಿಸೋದು ಇದು ಯಾವ ಜಗತ್ತಿನಲ್ಲಿದೆ? ಒಂದು ಪೀಠದಿಂದ ಸ್ವಾಮೀಜಿಯವನ್ನು ಹೊರ ಹಾಕುತ್ತೇನೆ ಎಂದು ಹೇಳುತ್ತಾರೆ. ಶ್ರೀಗಳ ಕುರಿತು ಇಂತಹ ಹೇಳಿಕೆಗಳನ್ನು ಕೊಡುವುದು ಅವರಿಗೆ ಶೋಭೆ ತರುವುದಿಲ್ಲ. ಶ್ರೀಗಳು ನೆಮ್ಮದಿಯಾಗಿ ಉತ್ಸುಕತೆಯಿಂದ ಸಮಾಜ ಸೇವೆ ಮಾಡುವಂತಹ ವಾತಾವರಣವನ್ನು ಸಮಾಜದವರು ನಿರ್ಮಾಣ ಮಾಡುತ್ತೇವೆ. ಅದಕ್ಕೆ ಬೇಕಾಗುವ ಎಲ್ಲಾ ಸಹಾಯ ಮಾಡಲು ಪಂಚಮಸಾಲಿ ಸಮಾಜ ಸಿದ್ಧವಾಗಿದೆ ಎಂದು ಹೇಳಿದ ಅವರು, ಒಂದು ದೀಪ ಆರಬೇಕಾದರೆ ಹೆಚ್ಚಿಗೆ ಉರಿದು ಆರುತ್ತದೆ ಎನ್ನುವ ಮೂಲಕ ಶಾಸಕ ವಿಜಯಾನಂದ ಕಾಶಪ್ಪನವರಿಗೆ ಟಕ್ಕರ್ ನೀಡಿದರು.

ಸ್ವಾಮೀಜಿ ಜನರ ಮನಸ್ಸಿನಲ್ಲಿದ್ದಾರೆ. ಸಮಾಜದ ಮುಖಂಡರ ಚರ್ಚೆ ಮಾಡಿ ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇವೆ. ಪಂಚಮ ಸಾಲಿ 2ಎ ಮೀಸಲಾತಿ ಹೋರಾಟವನ್ನು ಮಾತ್ರ ನಿಲ್ಲಿಸುವುದಿಲ್ಲ. ಹೋರಾಟದ ಫಲವಾಗಿ 2ಸಿ, 2 ಡಿ ನೀಡಲಾಗಿದೆ. ನಂತರ ಬಂದ ಕಾಂಗ್ರೆಸ್ ಅದನ್ನು ಜಾರಿಗೆ ತರಲಿಲ್ಲ. ಮತ್ತೆ ಹೋರಾಟ ಶುರು ಮಾಡಿದೆವು. ಬೆಳಗಾವಿಯಲ್ಲಿ ಹೋರಾಟ ಮಾಡುವಾಗ ಕಾಂಗ್ರೆಸ್ ಲಾಠಿ ಚಾರ್ಜ್ ಮಾಡಿಸಿತು.

-ಅರವಿಂದ ಬೆಲ್ಲದ ಶಾಸಕ

ಧರ್ಮಸಂಕಟ ರಹಸ್ಯ ಭೇದಿಸಲು ಎಸ್‌ಐಟಿ

← ಮೊದಲಪುಟದಿಂದ

ಹಾಗಾಗಿ ಧರ್ಮಸ್ಥಳದ ವ್ಯಾಪ್ತಿಯಲ್ಲಿ ಕಳೆದ 20 ವರ್ಷಗಳಿಂದ ನಾಪತ್ತೆಯಾಗಿರುವ ಮಹಿಳೆಯರ ಮತ್ತು ವಿದ್ಯಾರ್ಥಿನಿಯರ ಪ್ರಕರಣಗಳು, ಅಸ್ವಾಭಾವಿಕವಾದ ಸಾವು/ಕೊಲೆ ಪ್ರಕರಣಗಳು ಮತ್ತು ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆಗಾಗಿ ಹಿರಿಯ ಪೊಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸುವಂತೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಅವರು ಇತ್ತೀಚೆಗೆ ಸಿಎಂ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು.

ಎಸ್‌ಐಟಿ ಅವರು ಕೆಲಸ ಪ್ರಾರಂಭ ಮಾಡುತ್ತಾರೆ. ಒತ್ತಡದ ಪ್ರಶ್ನೆ ಇಲ್ಲ. ಒತ್ತಡಕ್ಕೆ ಮಣಿದು ಮಾಡುವ ಕೆಲಸ ಅಲ್ಲ. ಅಲ್ಲಿನ ಸಾಧಕ ಬಾಧಕ, ವಸ್ತು ಸ್ಥಿತಿ ನೋಡಿ ತೀರ್ಮಾನ ಮಾಡಬೇಕಾಗುತ್ತದೆ. ಪೊಲೀಸ್ ಠಾಣಾ ಮಟ್ಟದಲ್ಲಿ ಪ್ರಾಥಮಿಕವಾಗಿ ತನಿಖೆ ಮಾಡಿ ಅಂತ ನಾವು ಅವರಿಗೆ ಹೇಳಿದ್ದೆವು. ಜತೆಗೆ ಇನ್ನೂ ಹೆಚ್ಚಿನ ರೀತಿಯ ತನಿಖೆ ಆಗಬೇಕು ಎಂಬುದು ಹೆಚ್ಚಿನ ರೀತಿಯ ಅಭಿಪ್ರಾಯಗಳು ಬಂದಿದ್ದವು. ಸರಕಾರ ಇದರಲ್ಲಿ ಮುಚ್ಚಿಡುವಂತದ್ದು ಏನೂ ಇಲ್ಲ.

-ಡಾ.ಜಿ.ಪರಮೇಶ್ವರ್ ಗೃಹ ಸಚಿವ

ಸಮಾಚಾರ ಸಣ್ಣದಲ್ಲ

ಬೈಕ್‌ನಲ್ಲಿ ಬಿಯರ್ ಕುಡಿದು ಹುಚ್ಚಾಟ: ಸೆರೆ

ಬಳ್ಳಾರಿ: ಚಲಿಸುತ್ತಿರುವ ಬೈಕ್ ಹಿಂಬದಿ ಕುಳಿತು ಯುವಕನೊಬ್ಬ ಬಿಯರ್ ಕುಡಿದ ವಿಡಿಯೊ ವೈರಲ್ ಆಗಿದೆ. ವಿಡಿಯೊ ವೈರಲ್ ಆದ ಬೆನ್ನಲ್ಲೇ ಬಳ್ಳಾರಿ ಸಂಚಾರಿ ಠಾಣೆ ಪೊಲೀಸರು ಬೈಕ್ ಸಮೇತ ಆರೋಪಿಯನ್ನ ಬಂಧಿಸಿದ್ದಾರೆ.

ಬಳ್ಳಾರಿಯ ಕರ್ಚೇಡು ಗ್ರಾಮದ ಕೇಶವ ಬಂಧಿತ ಆರೋಪಿ. ನಗರದ ರೈಲ್ವೇ ಫಸ್ಟ್ ಗೇಟ್ ಬಳಿ ಬೈಕಿನ ಹಿಂಬದಿಯಲ್ಲಿ ಕುಳಿತು ಕೇಶವ ಬಿಯರ್ ಕುಡಿದಿದ್ದ. ಬಿಯರ್ ಕುಡಿಯುತ್ತಿದ್ದ ದೃಶ್ಯವನ್ನ ಸಾರ್ವಜನಿಕರು ಸೆರೆ ಹಿಡಿದಿದ್ದರು. ವಿಷಯ ಗಮನಕ್ಕೆ ಬರುತ್ತಲೇ ಕಾರ್ಯಪ್ರವೃತ್ತರಾಗಿ ಪೊಲೀಸರು ಆರೋಪಿಯನ್ನ ಬಂಧಿಸಿದ್ದಾರೆ.

ಕಾವೇರಿ ಹಿನ್ನೀರಿನಲ್ಲಿ ಮುಳುಗಿ ಮೂವರ ಸಾವು

ಮಂಡ್ಯ: ಕೆಆರ್‌ಎಸ್ ವೀಕ್ಷಣೆಗೆ ಬಂದಿದ್ದ ಮೂವರು ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳು ಹಿನ್ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಪ್ರಶಾಂತ್(22), ಕೃಷ್ಣ(21) ಹಾಗೂ ಸಿದ್ದೇಶ್ (32) ಮೃತ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳಾಗಿದ್ದು, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಏಮ್ಸ್ ಕಾಲೇಜಿನ ದ್ವಿತೀಯ ಬಿಎಸ್ಸಿ ನರ್ಸಿಂಗ್ ವ್ಯಾಸಾಂಗ ಮಾಡುತ್ತಿರುವ ವಿದ್ಯಾರ್ಥಿಗಳು ಎಂದು ತಿಳಿದು ಬಂದಿದೆ. ಭಾನುವಾರ ಕಾಲೇಜಿಗೆ ರಜೆ ಇದ್ದ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಮೈಸೂರು ತಾಲೂಕಿಗೆ ಸೇರಿದ ಮೀನಾಕ್ಷಿಪುರದ ಬಳಿಯ ಕೆಆರ್‌ಎಸ್ ಹಿನ್ನೀರಿನಲ್ಲಿ ಈಜಾಡುವ ವೇಳೆ ನೀರಿನಲ್ಲಿ ಮುಳುಗಿ ಸಾವನ್ನಪ್ಪಿ ದ್ದಾರೆ. ಘಟನಾ ಸ್ಥಳಕ್ಕೆ ಇಲವಾಲ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದು, ಶವಗಳನ್ನು ಹೊರ ತೆಗೆಯಲಾಗಿದೆ. ಈಸಂಬಂಧ ಇಲವಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳ ಲಾಗಿದ್ದು, ಮೇಲಿಂದ ಮೇಲೆ ಇಂತಹ ಘಟನೆಗಳು ನಡೆಯುತ್ತಿದ್ದರೂ ಸೂಕ್ತ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ ಎಂದು ಸ್ಥಳೀಯರು ಆಕ್ರೋಷ ವ್ಯಕ್ತಪಡಿಸಿದ್ದಾರೆ.

ಅಬ್ಬೆ ಜಲಪಾತದಲ್ಲಿ ಕೊಚ್ಚಿ ಹೋದ ಯುವಕ

ಶಿವಮೊಗ್ಗ: ಹೊಸನಗರ ತಾಲೂಕಿನ ಮಾಸ್ತಿಕಟ್ಟೆ ಸಮೀಪದ ಯಡೂರು ಅಬ್ಬೆ ಜಲಪಾತದಲ್ಲಿ ಈಜಲು ಹೋಗಿದ್ದ ಯುವಕನೊಬ್ಬ ನೀರು ಪಾಲಾಗಿರುವ ದುರ್ಘಟನೆ ನಡೆದಿದೆ. ಬೆಂಗಳೂರಿನ ನಾಗರಭಾವಿಯಿಂದ ಬಂದಿದ್ದ ಖಾಸಗಿ ಕಂಪನಿಯ ಮ್ಯಾನೇಜರ್ ರಮೇಶ್ ಅವರು ಪ್ರವಾಸಕ್ಕಾಗಿ ಗೆಳೆಯರೊಂದಿಗೆ ಅಬ್ಬಿ ಫಾಲ್ಸ್‌ಗೆ ಬಂದಿದ್ದರು. ಈ ವೇಳೆ ಜಲಪಾತದಲ್ಲಿ ಈಜಲು ಇಳಿದಿದ್ದ ಅವರು ಅಚಾನಕ್ ಕಾಲುಜಾರಿ ನೀರಿನಲ್ಲಿ ಮುಳುಗಿದ್ದಾರೆ. ಪೊಲೀಸರು ಶವಕ್ಕಾಗಿ ಹುಡುಕಾಟ ನಡೆಸಿದ್ದಾರೆ.

ಬೈಕ್‌ಗೆ ಕಾರು ಗುದ್ದಿ ಯುವಕ ಸಾವು

ದಾವಣಗೆರೆ: ತಾಲೂಕಿನ ಆರನೇ ಕಲ್ಲು ಅಪಘಾತ ಸಂಭವಿಸಿದ್ದು, ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟ ಘಟನೆ ಶನಿವಾರ ತಡರಾತ್ರಿ ನಡೆದಿದೆ. ಹದಡಿ ಗ್ರಾಮದ ಲಿಂಗರಾಜ್ ಮೃತ ಯುವಕ. ಲ್ಯಾಬ್ ಕೆಲಸ ಮುಗಿಸಿಕೊಂಡು ದಾವಣಗೆರೆಯಿಂದ ಹದಡಿ ಗ್ರಾಮಕ್ಕೆ ಹೋಗುವಾಗ ದಾವಣಗೆರೆಯಿಂದ ಹೋಗುತ್ತಿದ್ದ ಕಾರ್ ಹಿಂಬದಿಯಿಂದ ಡಿಕ್ಕಿ ಹೊಡೆದಿದ್ದು, ಬೈಕ್ ಹಿಂದೆ ಕೂತಿದ್ದ ಲಿಂಗರಾಜ್ ಮೃತಪಟ್ಟಿದ್ದಾರೆ. ಬೈಕ್ ಚಲಾಯಿಸುತ್ತಿದ್ದ ಅದೇ ಗ್ರಾಮದ ಮನು ತೀವ್ರವಾಗಿ ಗಾಯಗೊಂಡಿದ್ದು, ಮಣಿಪಾಲ್ ಆಸ್ಪತ್ರೆಗೆ ಸಾಗಿಸಲಾಗಿದೆ. ಬೈಕ್ ಗೆ ಹಿಂಬದಿಯಿಂದ ಡಿಕ್ಕಿ ಹೊಡೆದ ರಭಸಕ್ಕೆ ಕಾರ್ ಸಂಪೂರ್ಣ ನಜ್ಜು ಗುಜ್ಜಾಗಿದ್ದು, ಚಾಲಕ ಮದ್ಯ ಪಾನ ಮಾಡಿ ಅಪಘಾತ ಮಾಡಿದ್ದಾನೆ ಎಂದು ಘಟನೆ ನಡೆದಾಗ ಸ್ಥಳದಲ್ಲಿದ್ದವರು ತಿಳಿಸಿದ್ದಾರೆ. ಕಾರನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದು, ಹದಡಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ ಕ್ಲಬ್ ಹೌಸ್
21.07.2025
ಸೋಮವಾರದ ಅತಿಥಿ

ಡಾ.ಸಿ.ಆರ್ ಚಂದ್ರಶೇಖರ್
ವಿಷಯ
ಎಲ್ಲಾ ಇದ್ದು ಕಾಡುವ ಖಿನ್ನತೆ
vishwavani.news

ಮೈಸೂರಿನ ಬೀಚನಹಳ್ಳಿ ಬಳಿ ಇರುವ ಜಲಾಶಯ | ರಾಜ್ಯದ ಎಲ್ಲಾ ಡ್ಯಾಮ್‌ಗಳ ಸುರಕ್ಷತೆ ಅಧ್ಯಯನಕ್ಕೆ ತಾಂತ್ರಿಕ ಸಮಿತಿ ರಚನೆ

ಕಬಿನಿ ಡ್ಯಾಮ್‌ಗೆ ಸಿಎಂ, ಡಿಸಿಎಂ ಬಾಗಿನ

ಮೈಸೂರು: ಜಿಲ್ಲೆಯ ಎಚ್.ಡಿ.ಕೋಟೆ ತಾಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯ ಭರ್ತಿಯಾದ ಹಿನ್ನೆಲೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಭಾನುವಾರ ಬಾಗಿನ ಸಲ್ಲಿಸಿದರು.

ಸಿಎಂ ಸೇರಿದಂತೆ ಇನ್ನಿತರ ಸಚಿವರು, ಶಾಸಕರು, ಅಧಿಕಾರಿ ವರ್ಗದವರು ಐರಾವತ ಬಸ್ಸಿನಲ್ಲಿ ಒಟ್ಟಾಗಿ ಬಂದು ಕನ್ಯಾ ಲಗ್ನ, ಅಭಿಜಿನ್ ಮುಹೂರ್ತದಲ್ಲಿ ಕಾವೇರಿ ಮಾತೆಗೆ ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್ ಹಾಗೂ ಎಚ್.ಡಿ.ಕೋಟೆ ತಾಲೂಕಿನ ಕಿತ್ತೂರು ಗ್ರಾಮದ ರವಿರಾಮೇಶ್ವರ ದೇವಸ್ಥಾನದ ಅರ್ಚಕ ಭಾಸ್ಕರ್ ಅವರ ನೇತೃತ್ವದಲ್ಲಿ ಶಾಸ್ತೋಕ್ತವಾಗಿ ಪೂಜಾ ವಿಧಿವಿಧಾನ ನೆರವೇರಿತು. ಇದೇ ವೇಳೆ 32.25 ಕೋಟಿ ರು.ವೆಚ್ಚದ ಅಣೆಕಟ್ಟೆ ಪುನಃಶ್ಚೇತನ ಕಾಮಗಾರಿಗೆ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಶಿಲಾನ್ಯಾಸ ನೆರವೇರಿಸಿದರು.

> **ತುಂಗಭದ್ರಾ ಅಣೆಕಟ್ಟೆ ಗೇಟ್ ದುರಸ್ತಿಯಾದ ಬಳಿಕ ರಾಜ್ಯದ ಎಲ್ಲಾ ಅಣೆಕಟ್ಟುಗಳ ಸುರಕ್ಷತೆ ವಿಚಾರದಲ್ಲಿ ತಾಂತ್ರಿಕ ಸಮಿತಿ ರಚಿಸಲಾಗಿದೆ. ಈ ವರದಿ ಬಂದ ಬಳಿಕ ಮುಂದಿನ ಕ್ರಮ ಕೈಗೊಳ್ಳುತ್ತೇವೆ.**
>
> **-ಡಿ.ಕೆ.ಶಿವಕುಮಾರ,** ಡಿಸಿಎಂ

- ಐರಾವತ ಬಸ್‌ನಲ್ಲಿ ಸಿಎಂ, ಡಿಸಿಎಂ, ಮಹದೇವಪ್ಪ ಡ್ಯಾಮ್‌ಗೆ ಪ್ರಯಾಣ
- ಕನ್ಯಾ ಲಗ್ನ, ಅಭಿಜಿನ್ ಮುಹೂರ್ತದಲ್ಲಿ ಕಬಿನಿ ಜಲಾಶಯಕ್ಕೆ ಬಾಗಿನ
- 32.25 ಕೋಟಿ ರು.ವೆಚ್ಚದಲ್ಲಿ ಕಬಿನಿ ಡ್ಯಾಮ್ ಪುನಶ್ಚೇತನ ಕಾಮಗಾರಿಗೆ ಶಿಲಾನ್ಯಾಸ

ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಅವರು ಮೈಸೂರಿನ ಬೀಚನಹಳ್ಳಿ ಬಳಿ ಇರುವ ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸಲು ಆಗಮಿಸುತ್ತಿರುವುದು.

ಕಬಿನಿ ಉತ್ಸವದ ಬಗ್ಗೆ ಪ್ರಸ್ತಾವನೆ ಸಲ್ಲಿಕೆ

ಕಬಿನಿ ಉತ್ಸವ ಮಾಡುವ ಬಗ್ಗೆ ಒತ್ತಾಯ ಇದೆಯೇ ಎಂಬ ವಿಚಾರ ಕುರಿತು ಪ್ರತಿಕ್ರಿಯಿಸಿದ ಅವರು, ಈ ಬಗ್ಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ. ಜಿಲ್ಲಾ ಸಚಿವರು ಹಾಗೂ ಇತರರೊಂದಿಗೆ ಚರ್ಚೆ ಮಾಡುತ್ತೇನೆ. ಕಬಿನಿ ಉತ್ಸವ, ಕಾವೇರಿ ಆರತಿ ಮಾಡಲು ನಾವು ಚರ್ಚೆ ಮಾಡುತ್ತಿದ್ದೇವೆ. ಈ ಕಾರ್ಯಕ್ರಮಗಳ ಮೂಲಕ ಪ್ರವಾಸೋದ್ಯಮ ಆಕರ್ಷಣೆ ಹಾಗೂ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಲು ನಮ್ಮ ಸರಕಾರ ಸಂಕಲ್ಪ ಮಾಡಿದೆ. ಬಟಾನಿಕಲ್ ಗಾರ್ಡನ್‌ಗೆ ಬಂಡವಾಳ ಹೂಡಿಕೆ ಮಾಡುವವರು ಮುಂದೆ ಬರಬೇಕು. ನಮ್ಮ ಆದ್ಯತೆ ಇರುವುದು ನೀರಿನ ಸಮರ್ಪಕ ಬಳಕೆ ಹಾಗೂ ಅಣೆಕಟ್ಟು ಸುರಕ್ಷತೆ ಬಗ್ಗೆ ಎಂದು ಡಿಸಿಎಂ ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ, ಶಾಸಕರಾದ ಅನಿಲ್ ಚಿಕ್ಕಮಾದು, ಕೆ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ, ಎ.ಆರ್. ಕೃಷ್ಣಮೂರ್ತಿ ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ಮಾಜಿ ಸಚಿವ ಕೋಟೆ ಎಂ. ಶಿವಣ್ಣ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ ಮತ್ತಿತರರು ಇದ್ದರು.

ಹನಿ ನೀರಾವರಿ ಯೋಜನೆಗೆ ಡಿಪಿಆರ್: ಕೆಆರ್‌ಎಸ್ ಅಣೆಕಟ್ಟಿನ ನಂತರ ಕಬಿನಿಯಲ್ಲಿ ಬಾಗಿನ ಅರ್ಪಣೆ ಮಾಡಿದ್ದೇವೆ. ಈ ಮಧ್ಯೆ ಎರಡು ವರ್ಷ ಅಣೆಕಟ್ಟು ಭರ್ತಿ ಆಗಿರಲಿಲ್ಲ, ಈ ವರ್ಷ ತುಂಬಿದೆ. ಕಬಿನಿಯಿಂದ ನಮಗೆ ಕಷ್ಟ ಕಾಲದಲ್ಲೂ ಸಹಾಯವಾಗುತ್ತಿದೆ. ಈ ಪ್ರದೇಶ ವಿಸ್ತರಣೆ ಮಾಡಬೇಕು ಎಂದು ನಮ್ಮ ಶಾಸಕರು ಪ್ರಸ್ತಾವನೆ ನೀಡಿದ್ದಾರೆ. ಮಹದೇಶ್ವರ ಬೆಟ್ಟದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಸುಮಾರು 35 ಕೋಟಿ ಮೊತ್ತದ ಅಭಿವೃದ್ಧಿ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದೇವೆ.

ಈ ಭಾಗದಲ್ಲಿ 88 ಕೋಟಿ ಮೊತ್ತದ ಹನಿ ನೀರಾವರಿ ಯೋಜನೆಗೆ ಡಿಪಿಆರ್ ಸಿದ್ಧಗೊಳಿಸಿ ಪ್ರಸ್ತಾವನೆ ಸಲ್ಲಿಸಿದ್ದೇವೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ತಿಳಿಸಿದರು.

ಸುಳ್ಳು ಹೇಳುವ ಬಿಜೆಪಿ ಬಹಿರಂಗ ಚರ್ಚೆಗೆ ಬನ್ನಿ

ಬಿಜೆಪಿಗರಿಗೆ ಮೊಸರಲ್ಲಿ ಕಲ್ಲು ಹುಡುಕುವ ಚಟ

ಇದೇ ವೇಳೆ ಸುದ್ದಿಗಾರರ ಜತೆ ಸಿಎಂ ಸಿದ್ದರಾಮಯ್ಯ ಮಾತನಾಡಿದರು, ಡಿಸಿಎಂ ಡಿಕೆಶಿ ಮೈಸೂರಿನಲ್ಲಿ ನಡೆದ ಸಾಧನಾ ಸಮಾವೇಶದಿಂದ ಅರ್ಧಕ್ಕೆ ಎದ್ದುಹೋದರು. ಇದಕ್ಕೆ ಬಿಜೆಪಿ ನಾಯಕರು ಡಿಸಿಎಂಗೆ ಅವಮಾನ ಎನ್ನುತ್ತಿದ್ದಾರೆ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಿಎಂ ಸಿದ್ದರಾಮಯ್ಯ ಅವರು ಬಿಜೆಪಿ ವಿರುದ್ಧ ಕಿಡಿಕಾರಿದರು.

ಬಿಜೆಪಿಯವರು ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ. ನನ್ನ ಹಾಗೂ ಡಿಸಿಎಂ ನಡುವೆ ಒಡಕುಂಟು ಮಾಡುವ ಉದ್ದೇಶದಿಂದ ಬಿಜೆಪಿಯವರು ಅನಗತ್ಯ ಹೇಳಿಕೆಗಳನ್ನು ನೀಡುತ್ತಾರೆ. ಇದರಿಂದ ರಾಜಕೀಯ ಲಾಭವಾಗಬಹುದೆಂಬ ಭ್ರಮೆ ಬಿಜೆಪಿಯವರಿಗಿದ್ದು, ಇದು ಸದಾ ಭ್ರಮೆಯಾಗಿಯೇ ಇರಲಿದೆ. ಕಾರ್ಯಕ್ರಮದಲ್ಲಿ ಇರುವವರಿಗೆ ಸ್ವಾಗತ ಮಾಡುವುದು ಪರಿಪಾಠ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾರ್ಯಕ್ರಮದಲ್ಲಿ ಆ ವೇಳೆಯಲ್ಲಿ ಇರದಿದ್ದ ಕಾರಣ, ಅವರ ಹೆಸರನ್ನು ತೆಗೆದುಕೊಳ್ಳಲಿಲ್ಲವಾದ್ದರಿಂದ, ಇದರಲ್ಲಿ ಅವಮಾನ ಮಾಡುವ ಪ್ರಶ್ನೆಯಿಲ್ಲ ಎಂದು ಸ್ಪಷ್ಟಪಡಿಸಿದರು. ರಾಜ್ಯದಲ್ಲಿ ಅಭಿವೃದ್ಧಿ ಕುಂಠಿತ ಎನ್ನುವ ಪ್ರಶ್ನೆಗೆ ಉತ್ತರಿಸಿದ ಅವರು, ಸರಕಾರದ ಸಾಧನೆಯ ಬಗ್ಗೆ ಸುಳ್ಳು ಹೇಳುವ ಬಿಜೆಪಿಯವರು ಎಂದಿಗೂ ಬಹಿರಂಗ ಚರ್ಚೆಗೆ ಬರುವುದಿಲ್ಲ. ಆದರೆ ನಾವು ಚರ್ಚೆಗೆ ಸದಾ ಸಿದ್ಧ.

ಬಿಜೆಪಿ ನಾಯಕರಿಗೆ ನನ್ನ ಮೇಲೆ ತುಂಬಾ ಪ್ರೀತಿ ಇದೆ

ಸಿಎಂಗೇ ಮಾಹಿತಿ ನೀಡಿ ಹೋಗಿರುವುದು: ಡಿಕೆಶಿ

ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸಿ ಸುದ್ದಿಗಾರರ ಜತೆ ಮಾತನಾಡಿದ ಡಿಸಿಎಂ ಡಿಕೆ ಶಿವಕುಮಾರ್ ಅವರು, ಮೈಸೂರಿನ ಸಾಧನಾ ಸಮಾವೇಶದಿಂದ ಅರ್ಧಕ್ಕೆ ಎದ್ದುಹೋದ ವಿಚಾರದ ಬಗ್ಗೆ ಸ್ಪಷ್ಟನೆ ನೀಡಿದರು. ಸಿಎಂಗೆ ಮಾಹಿತಿ ನೀಡಿ ನಾನು ಕಾರ್ಯಕ್ರಮದಿಂದ ಹೊರಟೆ. ಮಾರ್ಗ ಮಧ್ಯದಲ್ಲೇ ನನ್ನ ಬೆಂಗಾವಲು ವಾಹನ ಅಪಘಾತಕ್ಕೀಡಾಯಿತು. ತಾಯಿ ಚಾಮುಂಡೇಶ್ವರಿ ಕೃಪೆ ಯಾರಿಗೂ ಅಪಾಯವಾಗಿಲ್ಲ. ವಕೀಲರ ಜತೆ ಸಭೆ ನಿಗದಿಯಾದ ಕಾರಣ, ನಾನು 7.30ಕ್ಕೆ ತೆರಳಿ, 9.30ಕ್ಕೆ ವಾಪಸ್ ಬಂದಿದ್ದೇನೆ. ನಂತರ ಕಬಿನಿ ಕಾರ್ಯಕ್ರಮದಲ್ಲಿ ಭಾಗಿ ಆಗಿದ್ದೇನೆ. ನನ್ನ ಖಾಸಗಿ ಕಾರ್ಯಕ್ರಮ ಹಿನ್ನೆಲೆಯಲ್ಲಿ ಹೋಗಿದ್ದು, ಅದನ್ನು ಮುಗಿಸಿಕೊಂಡು ಬಂದಿದ್ದೇನೆ. ಇದರ ಹೊರತಾಗಿ ರಾಜಕಾರಣ ವಿಲ್ಲ ಎಂದು ಹೇಳಿದರು. ಡಿಕೆಶಿ ಅವರಿಗೆ ಅಪಮಾನ ಮಾಡಲಾಗಿದೆ ಎಂಬ ಬಿಜೆಪಿ ನಾಯಕರ ಹೇಳಿಕೆ ಬಗ್ಗೆ ಕೇಳಿದಾಗ, ಅವರಿಗೆ ನನ್ನ ಮೇಲೆ ಪ್ರೀತಿ ಜಾಸ್ತಿ. ನಾನು ಹೆಚ್ಚು ಬಲಿಷ್ಠವಾಗಿರುವುದಕ್ಕೆ ನನ್ನ ಮೇಲೆ ಪ್ರೀತಿ ಜಾಸ್ತಿ ಎಂದು ಲೇವಡಿ ಮಾಡಿದರು.

> **ವಕೀಲರ ಜತೆ ಸಭೆ ನಿಗದಿಯಾದ ಕಾರಣ, ನಾನು 7.30ಕ್ಕೆ ತೆರಳಿ, 9.30ಕ್ಕೆ ವಾಪಸ್ ಬಂದಿದ್ದೇನೆ.**
>
> **-ಡಿ.ಕೆ.ಶಿವಕುಮಾರ,** ಡಿಸಿಎಂ

ವಾಣಿಜ್ಯ ತೆರಿಗೆ ಇಲಾಖೆಯೊಂದಿಗೆ ಚರ್ಚಿಸಿ ತೀರ್ಮಾನ

ರಾಜ್ಯದ ಸಣ್ಣ ವ್ಯಾಪಾರಿಗಳಿಗೆ ಡಿಜಿಟಲ್ ಪೇಮೆಂಟ್‌ನಿಂದ ತೆರಿಗೆ ನೋಟಿಸ್ ನೀಡಲಾಗುತ್ತಿದೆ ಎನ್ನುವ ಪ್ರಶ್ನೆಗೆ ಉತ್ತರಿಸಿದ ಸಿಎಂ ಸಿದ್ದರಾಮಯ್ಯ ಅವರು, ಜಿಎಸ್‌ಟಿಯನ್ನು ಕೇಂದ್ರ ಸರಕಾರ ಮಾಡಿದ್ದು, ಜಿಎಸ್ ಟಿ ಕೌನ್ಸಿಲ್ ಕೇಂದ್ರ ಸರಕಾರದ ಅಧೀನದಲ್ಲಿ ಬರುತ್ತದೆ. ಇದಕ್ಕೆ ರಾಜ್ಯ ಸರಕಾರಗಳು ಜವಾಬ್ದಾರಿಯಿಲ್ಲ. ಆದಾಗ್ಯೂ ಈ ಬಗ್ಗೆ ಕೇಂದ್ರ ಸರಕಾರದೊಂದಿಗೆ ಸಮಾಲೋಚನೆ ನಡೆಸಿ, ರಾಜ್ಯ ಸರಕಾರದ ವಾಣಿಜ್ಯ ತೆರಿಗೆ ಇಲಾಖೆಯೊಂದಿಗೆ ಚರ್ಚಿಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದರು.

ಮೈಸೂರಿನಲ್ಲಿರುವ ಶ್ರೀ ಸುತ್ತೂರು ಮಠಕ್ಕೆ ಈಶಾ ಫೌಂಡೇಶನ್ ಸಂಸ್ಥಾಪಕರಾದ ಸದ್ಗುರು ಜಗ್ಗಿ ವಾಸುದೇವ ಅವರು ಭಾನುವಾರ ಭೇಟಿ ನೀಡಿದರು. ಈ ವೇಳೆ ಸುತ್ತೂರಿನ ಶಿವರಾತ್ರಿದೇಶಿಕೇಂದ್ರ ಸ್ವಾಮೀಜಿ ಸದ್ಗುರು ಅವರನ್ನು ಸತ್ಕರಿಸಿದರು.

ಯಕ್ಷಗಾನ ಕಲಾವಿದ ಸಿದ್ದಕಟ್ಟೆ ಸದಾಶಿವ ಶೆಟ್ಟಿಗಾರ್ ನಿಧನ

ಮಂಗಳೂರು: ಬಂಟ್ವಾಳ ತಾಲೂಕಿನ ಸಂಗಬೆಟ್ಟು ಗ್ರಾಮದ ಮಂಚಕಲ್ಲು ನಿವಾಸಿ, ಯಕ್ಷಗಾನದ ಹಿರಿಯ ಕಲಾವಿದ, ಬಣ್ಣದ ವೇಷಧಾರಿ ಸಿದ್ದಕಟ್ಟೆ ಸದಾಶಿವ ಶೆಟ್ಟಿಗಾರ್ (60) ಅವರು ಭಾನುವಾರ ಮಧ್ಯಾಹ್ನ ಅನಾರೋಗ್ಯದಿಂದ ಮಂಗಳೂರು ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿಯನ್ನು ಅಗಲಿದ್ದಾರೆ. ಇತ್ತೀಚಿನವರೆಗೆ ಹನುಮಗಿರಿ ಮೇಳದಲ್ಲಿ ಬಣ್ಣದ ವೇಷಧಾರಿಯಾಗಿದ್ದ ಸದಾಶಿವ ಶೆಟ್ಟಿಗಾರ್ ಅವರು ತನ್ನ ಮೂರು ದಶಕಗಳಿಗೂ ಹೆಚ್ಚಿನ ಕಾಲ ತಿರುಗಾಟ ಮಾಡಿದವರು. ಯಕ್ಷಗಾನ ಗುರುಗಳಾದ ರೆಂಜಾಳ ರಾಮಕೃಷ್ಣ ರಾವ್, ಬಣ್ಣದ ಮಹಾಲಿಂಗ ಅವರಿಂದ ನಾಟ್ಯಾಭ್ಯಾಸ ಕಲಿತು ಸುಮಾರು 36 ವರ್ಷಗಳ ಕಟೀಲು, ಧರ್ಮಸ್ಥಳ, ಹೊಸನಗರ, ಎಡನೀರು, ಹನುಮಗಿರಿ ಮೊದಲಾದ ಮೇಳಗಳಲ್ಲಿ ತಿರುಗಾಟ ನಡೆಸಿದ್ದರು. ಕಳೆದ ಕೆಲವು ತಿಂಗಳ ಹಿಂದಷ್ಟೇ ಹನುಮಗಿರಿ ಮೇಳದಲ್ಲಿ ತಿರುಗಾಟ ಮುಗಿಸಿದ ಅವರು ನಿವೃತ್ತಿಯನ್ನೂ ಘೋಷಣೆ ಮಾಡಿದ್ದರು.



2132 ಕೋಟಿ ರು. ಮೊತ್ತದ ಕುಡಿಯುವ ನೀರಿನ ಯೋಜನೆ | ಪಾವಗಡದಲ್ಲಿ ಸಿಎಂ ಇಂದು ಚಾಲನೆ

ತುಂಗಭದ್ರಾದಿಂದ ಪಾವಗಡ ಪಟ್ಟಣಕ್ಕೆ ಶುದ್ಧ ನೀರು

ಇಮ್ರಾನ್ ಉಲ್ಲಾ, ಪಾವಗಡ

ನಾನಾ ಕಾಮಗಾರಿಗಳಿಗೆ ಶಂಕುಸ್ಥಾಪನೆ, ಉದ್ಘಾಟನೆ ಹಿನ್ನೆಲೆ ಸೋಮವಾರ (ಜುಲೈ 21) ರಂದು ಸಿಎಂ ಸಿದ್ದರಾಮಯ್ಯ ಅವರು, ತುಮಕೂರು ಜಿಲ್ಲೆಯ ಪಾವಗಡ ಪಟ್ಟಣಕ್ಕೆ ಆಗಮಿಸಲಿ ದ್ದಾರೆ. ಇಲ್ಲಿನ ಗಾಂಧಿ ಕ್ರೀಡಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ಆಯೋಜನೆ ಮಾಡಲಾಗಿದ್ದು, ಸಿಎಂ ಆಗಮನಕ್ಕೆ ಪಾವಗಡ ತಾಲೂಕು ಆಡಳಿತ ಸಕಲ ಸಿದ್ಧತೆ ಮಾಡಿಕೊಂಡಿದೆ. ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒ ಪ್ರಭು ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಸಿದ್ಧತೆ ಪರಿಶೀಲನೆ ಮಾಡಿದ್ದಾರೆ. ಇಡೀ ಪಟ್ಟಣ ಅಲಂಕಾರಗೊಂಡಿದ್ದು, ರಸ್ತೆಗಳ ಉದ್ದಕ್ಕೂ ಸಚಿವರ, ಸ್ಥಳೀಯ ಶಾಸಕ ಎಚ್ ವಿ ವೆಂಕಟೇಶ್ ಹಾಗೂ ಮಾಜಿ ಸಚಿವರ ವೆಂಕಟರವಣಪ್ಪ ಅವರ ಫ್ಲೆಕ್ಸ್ ಗಳು ರಾರಾಜಿಸುತ್ತಿವೆ. 10 ಸಾವಿರಕ್ಕೂ ಅಧಿಕ ಕಾಂಗ್ರೆಸ್ ಕಾರ್ಯಕರ್ತರ ನಿರೀಕ್ಷೆ ಮಾಡಲಾಗಿದೆ.

ಸಿಎಂ ಸಿದ್ದರಾಮಯ್ಯ ಅವರ ಭಾಷಣ ಕೇಳಲು ತಾಲೂಕಿನ ಮೂಲ ಮೂಲೆಗಳಿಂದ ಅಲ್ಲದೇ ಆಂಧ್ರದಿಂದಲೂ ಜನ ಆಗಮಿಸಲಿದ್ದಾರೆ. ತುಂಗಭದ್ರಾ ಜಲಾಶಯದಿಂದ 230 ಕಿ.ಮೀ ದೂರದ ಪಾವಗಡ ಸೇರಿದಂತೆ 2 ಪಟ್ಟಣಗಳು ಮತ್ತು 1138 ಹಳ್ಳಿಗಳ ಜನವಸತಿ ಪ್ರದೇಶಗಳಲ್ಲಿ ಒಟ್ಟು 17.21 ಲಕ್ಷ ಜನರಿಗೆ (2050ರವರೆಗೆ) ಶುದ್ಧ ಕುಡಿಯುವ ನೀರಿನ ಪೂರೈಕೆಗಾಗಿ ವಾರ್ಷಿಕ 2 ಟಿಎಂಸಿ ನೀರನ್ನು ಮೀಸಲಿಟ್ಟಿದೆ. ವಿಜಯನಗರ ಸಮೀಪದ ಪಂಪಸಾಗರದಿಂದ ಪ್ರಾರಂಭವಾಗಿ 230 ಕಿ.ಮೀ. ದೂರದ ಪಾವಗಡದವರೆಗೆ ಸಾಗುತ್ತದೆ. ಈ ನಡುವೆ 6 ಜಿಲ್ಲೆಗಳ ಹಲವಾರು ಹಳ್ಳಿಗಳ ಮೂಲಕ ಹಾದು ಹೋಗುತ್ತದೆ. ಹೊಸಪೇಟೆ, ಕೊಟ್ಟೂರು, ಕೂಡ್ಲಿಗಿ, ಮೊಳಕಾಲ್ಮೂರು, ಚಳ್ಳಕೆರೆ, ತುರುವನೂರು, ಹಾಗೂ ಪಾವಗಡದ 357 ಗ್ರಾಮಗಳವರೆಗೆ ಹರಿಯಲಿದೆ.

36 ತಿಂಗಳ ಒಳಗೆ ಕಾಮಗಾರಿ ಪೂರ್ಣ: ಹೈದರಾಬಾದ್ ಮೂಲದ ಮೆಘಾ ಇಂಜಿನಿಯರಿಂಗ್ ಲಿಮಿಟೆಡ್ ಗುತ್ತಿಗೆದಾರ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಯೋಜನೆಯ ಗುತ್ತಿಗೆ ಒಪ್ಪಂದ 2018ರ ಡಿಸೆಂಬರ್ 13 ರಂದು ಮಾಡಲ್ಪಟ್ಟಿದ್ದು, 36 ತಿಂಗಳ ಒಳಗೆ ಕಾಮಗಾರಿ ಪೂರ್ಣಗೊಳ್ಳಬೇಕು. ಯೋಜನೆ ಪೂರ್ಣಗೊಂಡ ನಂತರ 60 ತಿಂಗಳು ನಿರ್ವಹಣೆಯ ಹೊಣೆ ಸಂಸ್ಥೆಯದ್ದಾಗಿದೆ. ಜಲಾಶಯದ ಹಿನ್ನೀರಿನಲ್ಲಿ ಜಾಕ್‌ವೆಲ್ ಮತ್ತು ಪಂಪ್‌ಹೌಸ್ ನಿರ್ಮಿಸಲಾಗಿದ್ದು, 1200 ಕಿಲೋವ್ಯಾಟ್ ಸಾಮರ್ಥ್ಯದ 6 ಪಂಪ್‌ಗಳು ಸ್ಥಾಪನೆಗೊಂಡಿವೆ. ಈ ಯೋಜನೆಯು ಗ್ರಾಮೀಣ ಜನತೆ ಪಾಲಿಗೆ ಬಹು ಮಹತ್ವದ್ದಾಗಿದೆ.

ಪಾವಗಡ ಪಟ್ಟಣದಲ್ಲಿ ರಾರಾಜಿಸುತ್ತಿರುವ ಸಿಎಂ ಸಿದ್ದರಾಮಯ್ಯ, ಸಚಿವ ಪರಮೇಶ್ವರ್ ಹಾಗೂ ಪ್ರಿಯಾಂಕ್ ಖರ್ಗೆ ಅವರ ಬೃಹತ್ತಾದ ಕಟೌಟ್‌ಗಳು.

230 ಕಿಮೀ ಉದ್ದದ ಯೋಜನೆ

ತುಂಗಭದ್ರಾ ನದಿಯಿಂದ ಪಾವಗಡ ಪಟ್ಟಣಕ್ಕೆ ಶುದ್ಧ ನೀರಿನ ಹರಿದು ಬರಲಿದೆ. ತುಂಗಭದ್ರಾ ಜಲಾಶಯದಿಂದ 230 ಕಿ.ಮೀ ದೂರದ ಪಾವಗಡದ ಮನೆ ಬಾಗಿಲಿಗೆ ನೀರು ತರಲು ರೂಪುಗೊಂಡಿರುವ 2132 ಕೋಟಿ ರು.ಮೌಲ್ಯದ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಇದು. ಹಲವು ವರ್ಷಗಳಿಂದ ಕುಡಿಯುವ ನೀರಿಗಾಗಿ ಪರಿತಪಿಸುತ್ತಿರುವ ಪಾವಗಡ ತಾಲೂಕಿನ ಜನತೆಗೆ ಶುದ್ಧ ನೀರು ಒದಗಿಸುವ ಯೋಜನೆ ರೂಪುಗೊಂಡಿದೆ. ತುಂಗಭದ್ರಾ ನದಿಯ ನೀರನ್ನು ಪಂಪಸಾಗರದಿಂದ ಎಳೆದು ಪಾವಗಡದ ಮನೆ ಬಾಗಿಲಿಗೆ ತಲುಪಿಸುವ ಈ ಬಹು ಕೋಟಿ ಯೋಜನೆ ರಾಜ್ಯದ ಪ್ರಮುಖ ನೀರಿನ ಯೋಜನೆಗಳಲ್ಲಿ ಒಂದಾಗಿ ಗುರುತಿಸಿದೆ.

ಆಮೇಲೆ ವಿರೋಧ ಪಕ್ಷಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಲಿ: ಬಿವೈವಿ

ಸ್ವಪಕ್ಷೀಯ ಶಾಸಕರಿಗೆ ಸಿಎಂ ಮೊದಲು ಉತ್ತರಿಸಲಿ

ಕೊಪ್ಪಳ: ರಾಜ್ಯದಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಚರ್ಚೆಗೆ ಬರುವಂತೆ ವಿರೋಧ ಪಕ್ಷಗಳಿಗೆ ಸಿಎಂ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ. ಸಿಎಂ ಮೊದಲು ಕಾಂಗ್ರೆಸ್ ಪಕ್ಷದ ಶಾಸಕರನ್ನು ಕರೆದು ಅವರು ಎತ್ತಿರುವ ಪ್ರಶ್ನೆಗೆ ಉತ್ತರ ಕೊಡಲಿ. ನಂತರ ವಿರೋಧ ಪಕ್ಷಗಳಿಗೆ ಸವಾಲು ಹಾಕಲಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ತಿರುಗೇಟು ನೀಡಿದರು.

> **ಮಲ್ಲಿಕಾರ್ಜುನ ಖರ್ಗೆ ಹಿರಿಯ ರಾಜಕಾರಣಿ. ಮೈಸೂರು ಸಮಾವೇಶದಲ್ಲಿ ಪ್ರಧಾನಿ ಮೋದಿ ಟಿವಿಯಲ್ಲಿ ಬೊಗಳುತ್ತಾರೆ ಎಂದಿದ್ದಾರೆ. ಹಿರಿಯರಾಗಿ ಇಂಥ ಮಾತು ನಿರೀಕ್ಷೆ ಮಾಡಿರಲಿಲ್ಲ. ಪ್ರಧಾನಿ ಬಗ್ಗೆ ಯಾವ ಭಾಷೆ ಬಳಸಬೇಕು ಎಂಬ ವಿವೇಚನೆ ಇಲ್ಲದಿರುವುದು ನೋವಿನ ವಿಚಾರ.**
>
> **-ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

ಗಂಗಾವತಿ ತಾಲೂಕು ಮರಳಿ ಗ್ರಾಮದಲ್ಲಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಕೊಪ್ಪಳ, ರಾಯಚೂರು, ಬಳ್ಳಾರಿ, ವಿಜಯನಗರ ಜಿಲ್ಲೆಗಳ ಬಿಜೆಪಿ ಸಂಘಟನಾತ್ಮಕ ಸಭೆ ಉದ್ಘಾಟಿಸಿಯನ್ನು ಭಾನುವಾರ ಮಾತನಾಡಿದರು.

ಅಭಿವೃದ್ಧಿ ಬಗ್ಗೆ ವಿರೋಧ ಪಕ್ಷದ ಜತೆಗೆ ಚರ್ಚೆ ಮಾಡುವ ಯಾವುದೇ ಯೋಗ್ಯತೆ ಸಿಎಂ ಸಿದ್ದರಾಮಯ್ಯ ಅವರಿಗೆ ಇಲ್ಲ. ಆಡಳಿತ ಪಕ್ಷದ ಶಾಸಕರಿಗೆನೇ ಸರಕಾರ ಮತ್ತು ಸಿಎಂ ಮೇಲೆ ವಿಶ್ವಾಸ ಇಲ್ಲದಂತಾಗಿದೆ. ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ಶಾಸಕ ಬಿ.ಆರ್.ಪಾಟೀಲ್ ಅವರೇ ಸಿದ್ದರಾಮಯ್ಯ ಸರಕಾರದ ವಿರುದ್ಧ ಮಾತನಾಡುತ್ತಿದ್ದಾರೆ. ಅದಕ್ಕಾಗಿಯೇ ರಾಜ್ಯದ ಉಸ್ತುವಾರಿ ಸುರ್ಜೆವಾಲ ಅವರು ಮೇಲಿಂದ ಮೇಲೆ ಕರ್ನಾಟಕಕ್ಕೆ ಬಂದು ಶಾಸಕರನ್ನು ಸಮಾಧಾನ ಮಾಡುವ ಕೆಲಸ ಮಾಡುತ್ತಿದ್ದಾರೆ. ಮತ್ತೊಂದು ಕಡೆ ಮುಂದೆ ಯಾರನ್ನು ಮುಖ್ಯಮಂತ್ರಿ ಮಾಡಬೇಕು ಎಂಬ ಚರ್ಚೆಯೂ ಕಾಂಗ್ರೆಸ್‌ನಲ್ಲಿ ಜೋರಾಗಿ ನಡೆದಿದ್ದು, ಶಾಸಕರ ಕುದುರೆ ವ್ಯಾಪಾರಕ್ಕೆ ತಯಾರಿ ನಡೆದಿರುವುದು ಗುಟ್ಟಾಗಿ ಉಳಿದಿಲ್ಲ ಎಂದರು.

ಗಂಗಾವತಿಯ ಮರಳಿ ಗ್ರಾಮದಲ್ಲಿ ನಡೆದ ಬಿಜೆಪಿ ಸಂಘಟನಾತ್ಮಕ ಸಭೆಯನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಿದರು.

ಖರ್ಗೆ ಗಪ್‌ಚುಪ್

ಮಲ್ಲಿಕಾರ್ಜುನ ಖರ್ಗೆ ಹೆಸರಿಗೆ ಮಾತ್ರ ಎಐಸಿಸಿ ಅಧ್ಯಕ್ಷರು. ಆದರೆ, ಅಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸರ್ವಾಧಿಕಾರಿ ಆಗಿದ್ದಾರೆ. ಆದರೆ, ಬಿಜೆಪಿಯಲ್ಲಿ ಹಾಗಿಲ್ಲ. ಬಿಜೆಪಿಯಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆ. ರಾಜ್ಯ ಸರಕಾರ ಭ್ರಷ್ಟಾಚಾರದಲ್ಲಿ ತೊಡಗಿದ್ದರೂ ಸಿದ್ದರಾಮಯ್ಯ ಬಂಡತನದಿಂದ ಮಾತನಾಡುತ್ತಿದ್ದಾರೆ. ದೇಶದಲ್ಲಿ ನಮ್ಮದು ಆಡಳಿತ ಪಕ್ಷ. ಕರ್ನಾಟಕದಲ್ಲಿ ಮಾತ್ರ ಪ್ರತಿಪಕ್ಷವಾಗಿ ಇದ್ದೇವೆ ಎಂಬುದು ಅವರಿಗೆ ಮನವರಿಕೆ ಮಾಡಿಕೊಡುತ್ತೇನೆ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು.

ಶಾಸಕ ಜನಾರ್ದನ ರೆಡ್ಡಿ, ಶ್ರೀರಾಮುಲು, ಪಿ.ರಾಜೀವ್, ಕರ್ನಾಟಕ ಸಹ ಉಸ್ತುವಾರಿ ಸುಧಾಕರ ರೆಡ್ಡಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಶರಣು ತಳ್ಳಿಕೇರಿ, ಸುಧಾಕರ ರೆಡ್ಡಿ, ವಿರೋಧ ಪಕ್ಷದ ಮುಖ್ಯ ಸಚೇತ ದೊಡ್ಡನಗೌಡ ಪಾಟೀಲ್, ಕೊಪ್ಪಳ ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ದಡೇಸುಗೂರ ಸೇರಿ ಹಲವರಿದ್ದರು.

ನನ್ನ ಮಗನ ವಿರುದ್ಧದ ಆರೋಪ ಸತ್ಯಕ್ಕೆ ದೂರ

ಬೀದರ್: ನನ್ನ ರಾಜಕೀಯವಾಗಿ ಮುಗಿಸುವ ಉದ್ದೇಶದಿಂದ ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ನನ್ನ ವಿರುದ್ಧ ಹುನ್ನಾರ ನಡೆಸುತ್ತಿದ್ದಾರೆ. ಅವರ ಕುತಂತ್ರದಿಂದಲೇ ನನ್ನ ಹಾಗೂ ನನ್ನ ಕುಟುಂಬದ ಸದಸ್ಯರ ವಿರುದ್ಧ ಮಹಿಳಾ ಆಯೋಗಕ್ಕೆ ದೂರು ಕೊಡಲಾಗಿದೆ ಎಂದು ಔರಾದ ಶಾಸಕ ಪ್ರಭು ಚವ್ಹಾಣ ಗಂಭೀರ ಆರೋಪ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2014 ರಿಂದ ನನ್ನ ವಿರುದ್ಧ ವಿರೋಧಿ ಬಣ ಕಟ್ಟಿದ್ದಾರೆ. ಅದರ ಕ್ಯಾಪ್ಟನ್ ಖೂಬಾ ಆಗಿದ್ದಾರೆ. ಚುನಾವಣೆ ಸೇರಿದಂತೆ ಯಾವುದೇ ಕಾರ್ಯಕ್ರಮಕ್ಕೆ ಅಡ್ಡಿ ಬರುತ್ತಿವೆ. ಅವರು ಸುಳ್ಳಿನ ಸರದಾರ. ಎರಡು ಸಲ ಚುನಾವಣೆಯಲ್ಲಿ ಸೋಲಿಸಲು ಪ್ರಯತ್ನ ನಡೆಸಿದ್ದಾರೆ ಎಂದು ಆರೋಪಿಸಿದರು. ಈ ಕುರಿತು ಪಕ್ಷದ ವರಿಷ್ಠರ ಗಮನಕ್ಕೆ ತರಲಾಗಿದೆ. ಆದರೆ ಅವರ ಹೆಸರು ಬಹಿರಂಗ ಪಡಿಸಲಿಲ್ಲ. ಅವರ ಕಿರಿ ಕಿರಿಗೆ ಮಾನಸಿಕವಾಗಿ ಬಹಳ ನೊಂದಿದ್ದೇನೆ ಎಂದರು. ಮನೆಯಿಂದ ನೇರವಾಗಿ ಬಿಜೆಪಿ ಪಕ್ಷಕ್ಕೆ ಬಂದಿದ್ದೇನೆ ಹೊರತು ಯಾವುದೇ ಪಕ್ಷದಿಂದ ಬಂದಿಲ್ಲ. ಪಕ್ಷ ನನಗೆ ತಾಯಿ. ಕ್ಷೇತ್ರದ ಜನತೆ ನನಗೆ ದೇವರು ಇದ್ದಂತೆ. ನನ್ನ ಏಳಿಗೆಯು ಸಹಿಸದೇ ಈ ರೀತಿಯ ಕುತಂತ್ರ ನಡೆಸಿದ್ದಾರೆ. ನಾನು ಎಲ್ಲದಕ್ಕೂ ಎದುರಿಸುವೆ ಎಂದರು.

> **ಎರಡು ಕುಟುಂಬದವರ ಒಪ್ಪಿಗೆಯಿಂದ ಮದುವೆ ಕೈಬಿಡಲು ನಿರ್ಧರಿಸಲಾಗಿದೆ. ಆದರೆ ವಿರೋಧಿ ಬಣ ಎತ್ತಿಕಟ್ಟಿ ಮಹಿಳಾ ಆಯೋಗಕ್ಕೆ ದೂರು ನೀಡಿದ್ದಾರೆ. ಸಾಕ್ಷಿ ಸಮೇತ ಆರೋಪ ಎದುರಿಸಲು ನಾನು ಸಿದ್ದನಿದ್ದೇನೆ.**
>
> **-ಪ್ರಭು ಚವ್ಹಾಣ,** ಶಾಸಕ

ವಿಶ್ವವಾಣಿ

ಸಂಪಾದಕೀಯ

ರ‍್ಯಾಗಿಂಗ್ ಎಂಬ ಪೆಡಂಭೂತ

ಪಶ್ಚಿಮ ಬಂಗಾಳದ ಐಐಟಿ ಖರಗ್‌ಪುರ ವಿದ್ಯಾರ್ಥಿ ನಿಲಯದ ಕೊಠಡಿಯೊಂದರಲ್ಲಿ 21ರ ಹರೆಯದ ವಿದ್ಯಾರ್ಥಿಯೊಬ್ಬ ರ‍್ಯಾಗಿಂಗ್ ಕಿರಿಕಿರಿಗೆ ಭಯಪಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಸುದ್ದಿಯನ್ನು ನೀವು ಈಗಾಗಲೇ ಓದಿದ್ದೀರಿ. ಕಳೆದ ಮೂರು ವರ್ಷಗಳಲ್ಲಿ ಐಐಟಿ ಖರಗ್‌ಪುರದಲ್ಲಿ ಇದು ಏಳನೇ ಆತ್ಮಹತ್ಯೆ ಪ್ರಕರಣವಾಗಿದೆ ಎಂಬ ಮಾಹಿತಿಯ ಹಿನ್ನೆಲೆಯಲ್ಲಿ ರ‍್ಯಾಗಿಂಗ್ ಪಿಡುಗನ್ನು ಗಂಭೀರವಾಗಿ ಪರಿಗಣಿಸಿ, ಸಂಬಂಧಪಟ್ಟವರನ್ನು ಶಿಕ್ಷೆಗೆ ಗುರಿಪಡಿಸಬೇಕಾದ ಅಗತ್ಯವಿದೆ. ವಿದ್ಯಾರ್ಥಿ ನಿಲಯದಲ್ಲಿದ್ದುಕೊಂಡು ವಿದ್ಯಾಭ್ಯಾಸದಲ್ಲಿ ತೊಡಗಿರುವವರು, ಅದರಲ್ಲೂ ನಿರ್ದಿಷ್ಟವಾಗಿ ವೈದ್ಯಕೀಯ, ಎಂಜಿನಿಯರಿಂಗ್‌ನಂಥ ಉನ್ನತ ವ್ಯಾಸಂಗಕ್ಕೆ ಒಡ್ಡಿಕೊಂಡಿರುವವರು ಒಂದಿಷ್ಟು ಹೆಚ್ಚುವರಿ ಒತ್ತಡಗಳನ್ನು ಅನುಭವಿಸಬೇಕಾಗಿ ಬರುತ್ತದೆ. ಮನೆಯಿಂದ ಮತ್ತು ಮನೆಯವರ ಒಡನಾಟದಿಂದ ದೂರವಿದ್ದು ಹೀಗೆ ವಿದ್ಯಾರ್ಥಿ ನಿಲಯದಲ್ಲಿ ಆಶ್ರಯ ಪಡೆಯಬೇಕಾಗಿ ಬರುವಾಗಲೇ ಅಂಥ ವಿದ್ಯಾರ್ಥಿಗಳಲ್ಲಿ ಭಾವನಾತ್ಮಕ ನೆಲೆಯಲ್ಲಿ ಒಂದಷ್ಟು ಒತ್ತಡಗಳು ಅಥವಾ ತಲ್ಲಣಗಳು ಇರುತ್ತವೆ. ಜತೆಗೆ, ಹೆಚ್ಚು ಹಣ ಖರ್ಚುಮಾಡಿ ಇಂಥ ಉನ್ನತ ಶಿಕ್ಷಣಕ್ಕೆ ಸೇರಿಕೊಂಡವರಲ್ಲಿ, ಅದಕ್ಕೆ ತಕ್ಕಂತೆ ಫಲಿತಾಂಶವನ್ನು ತಂದುಕೊಟ್ಟು, ತರುವಾಯದಲ್ಲಿ ಉದ್ಯೋಗಕ್ಕೆ ಸೇರಿ, ಹೆತ್ತವರ ಆರ್ಥಿಕ ಹೊರೆಯನ್ನು ತಗ್ಗಿಸಬೇಕಾದ ಅನಿವಾರ್ಯತೆಯೂ ಇರುತ್ತದೆ. ವೈದ್ಯಕೀಯ ಮತ್ತು ಎಂಜಿನಿಯರಿಂಗ್‌ನಂಥ ಉನ್ನತ ಶಿಕ್ಷಣದ ಪಠ್ಯಕ್ರಮವು ನಿರೀಕ್ಷಿಸುವ ಅಧ್ಯಯನ-ಬದ್ಧತೆಯನ್ನು ಯಥೋಚಿತವಾಗಿ ನೆರವೇರಿಸಬೇಕಾದ ಒತ್ತಡವೂ ಅಲ್ಲಿ ಸೇರಿಕೊಂಡಿರುತ್ತದೆ. ಇಂಥ ಭಾರಗಳನ್ನು ತಡೆದುಕೊಳ್ಳಲಾಗದವರು, ಖಿನ್ನತೆಗೆ ಒಳಗಾಗುತ್ತಿರುವ ಪ್ರಕರಣಗಳು ದೇಶದ ವಿವಿಧೆಡೆ ವರದಿಯಾಗುತ್ತಿವೆ. ಪರಿಸ್ಥಿತಿ ಹೀಗಿರುವಾಗ, ಇಂಥ ಸಂಕಷ್ಟಗಳ ಪಟ್ಟಿಗೆ ರ‍್ಯಾಗಿಂಗ್ ಎಂಬ ಕಿರಿಕಿರಿಯೂ ಸೇರಿಕೊಂಡುಬಿಟ್ಟರೆ, ಆಶ್ರಿತ ವಿದ್ಯಾರ್ಥಿಗಳು ರಕ್ಷಣೆಗಾಗಿ ಯಾರ ಮೊರೆಹೋಗಬೇಕು? ಎಂಬುದು ಪ್ರಶ್ನೆ. ಹದಿಹರೆಯದ ಸಹಜ ಸ್ವಭಾವಕ್ಕೆ ತಕ್ಕಂತೆ ಚುರುಕಾಗಿ ಓಡಾಡಿಕೊಂಡು, ನಳನಳಿಸುತ್ತಾ, ಭವ್ಯ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದ ಇಂಥ ಹೂವುಗಳು, ವಿವಿಧ ಒತ್ತಡಗಳಿಂದಾಗಿ ಚಿಕ್ಕ ವಯಸ್ಸಿನಲ್ಲೇ ಹೀಗೆ ಮುರುಟಿಹೋಗುವುದು ನಿಜಕ್ಕೂ ನೋವಿನ ಸಂಗತಿ. ಆದ್ದರಿಂದ, ರ‍್ಯಾಗಿಂಗ್ ಪಿಡುಗಿಗೆ ಆಳುಗರು ಮದ್ದು ಅರೆಯಲೇಬೇಕಿದೆ.

ಸೊಂಪಾದಕೀಯ

ಅರಿವಿಲ್ಲದಿದ್ದರೆ ಅಪಾಯ ಖಾತ್ರಿ!

ಮಧ್ಯಪ್ರದೇಶದ ಆಧ್ಯಾತ್ಮಿಕ ಸಂಸ್ಥೆಯೊಂದರ ಕಾರ್ಯದರ್ಶಿಯನ್ನು 'ಡಿಜಿಟಲ್ ಅರೆಸ್ಟ್' ಮೂಲಕ ಬೆದರಿಸಿದ ದುರುಳರು ಅವರ ಬ್ಯಾಂಕ್ ಖಾತೆಯಿಂದ ಹಣ ಕೊಳ್ಳೆ ಹೊಡೆದಿದ್ದು ಕೆಲ ತಿಂಗಳ ಹಿಂದೆ ವರದಿಯಾಗಿತ್ತು. ಈ ಸಂತ್ರಸ್ತರ ಖಾತೆಯಿಂದ ಒಟ್ಟು 26 ದಿನಗಳ ಅವಧಿಯಲ್ಲಿ ಎರಡೂವರೆ ಕೋಟಿ ರುಪಾಯಿ ಹಣ ದೋಚಲ್ಪಟ್ಟಿದ್ದು ಈ ಸಂಬಂಧವಾಗಿ ನಾಲ್ವರು ಸೈಬರ್ ವಂಚಕರನ್ನು ಮಾತ್ರವಲ್ಲದೆ ಖಾಸಗಿ ಬ್ಯಾಂಕ್‌ನ ಇಬ್ಬರು ಸಿಬ್ಬಂದಿಯನ್ನೂ ಬಂಧಿಸಲಾಯಿತಂತೆ. ಅಮಾಯಕರನ್ನು ವಂಚಿಸಲು ದುರುಳರು ಕಂಡುಕೊಂಡಿರುವ 'ಡಿಜಿಟಲ್ ಅರೆಸ್ಟ್' ಎಂಬ ವಾಮಮಾರ್ಗದ ಕುರಿತು ಎಚ್ಚರದಿಂದಿರುವಂತೆ ಆಳುಗರು, ಪೊಲೀಸ್ ಇಲಾಖೆಯವರು ಎಚ್ಚರಿಸುತ್ತಿದ್ದರೂ ಇಂಥ ಪ್ರಕರಣಗಳ ಸಂಖ್ಯೆ ತಗ್ಗುತ್ತಿಲ್ಲ. 'ವ್ಯಕ್ತಿಯೊಬ್ಬನು ಅಹಿತಕರ ಸನ್ನಿವೇಶದ ಬಗ್ಗೆ ತಿಳಿದಿಲ್ಲದಿದ್ದರೆ, ಅದರಿಂದ ತೊಂದರೆಗೊಳಗಾಗಲು ಸಾಧ್ಯವಿಲ್ಲ' ಎಂಬರ್ಥದ ಮಾತು ಪಾರಮಾರ್ಥಿಕ ನೆಲೆಯಲ್ಲಿ ಸ್ವೀಕಾರಾರ್ಹವೇನೋ? ಆದರೆ ಲೌಕಿಕ ಬದುಕಿನಲ್ಲಿ ಇದನ್ನು ನೆಚ್ಚಲಾಗದು. ಏಕೆಂದರೆ, ಅಹಿತಕರ ಮತ್ತು ಕೆಟ್ಟ ಪರಿಸ್ಥಿತಿಗಳ ಕುರಿತು ಮಾಹಿತಿವಂತರಾಗಿದ್ದು, ಒಂದೊಮ್ಮೆ ಅವು ಎರಗಿದರೆ ತಪ್ಪಿಸಿಕೊಳ್ಳುವುದಕ್ಕಿರುವ ಮಾರ್ಗೋಪಾಯವನ್ನೂ ಅರಿತಿರಬೇಕಾದ್ದು ವರ್ತಮಾನದ ಅನಿವಾರ್ಯತೆಯಾಗಿದೆ. ಏಕೆಂದರೆ, ಸ್ಮಾರ್ಟ್‌ಫೋನ್ ತಂತ್ರಜ್ಞಾನವು ಕಾಲಕ್ರಮೇಣ ಸುಧಾರಣೆಗೊಳ್ಳುತ್ತ, ದಿನಕ್ಕೊಂದರಂತೆ ಹೊಸ ವೈಶಿಷ್ಟ್ಯಗಳ ರೆಕ್ಕೆ-ಪುಕ್ಕಗಳನ್ನು ಜೋಡಿಸಿಕೊಂಡು ಬರುತ್ತಿರುವಂತೆಯೇ, ಇಂಥ ಫೋನುಗಳ ಬಳಕೆದಾರರನ್ನು ಮೋಸದ ಬಲೆಗೆ ಕೆಡವಬಲ್ಲ ಹೊಸ ಕುತಂತ್ರ ಮಾರ್ಗಗಳನ್ನೂ ಸೈಬರ್ ವಂಚಕರು ಕಂಡುಕೊಳ್ಳುತ್ತಿದ್ದಾರೆ. ಆದ್ದರಿಂದ, 'ಮೋಸ ಹೋಗುವವರು ಇರುವವರೆಗೂ ಮೋಸ ಮಾಡುವವರು ಇದ್ದೇ ಇರುತ್ತಾರೆ' ಎಂಬ ಆಧುನಿಕ ನೀತಿಪಾಠವನ್ನು ಮನನ ಮಾಡಿ ಕೊಂಡು ಇಂಥ ವಂಚಕರ ಬಲೆಗೆ ಬೀಳದಂತೆ ಜನರು ಜಾಗೃತರಾಗಬೇಕಿದೆ.

ಸಂಪಾದಕರ ಸದ್ಯಶೋಧನೆ

ವಿಮಾನದ ಸಂಚಾರ ದೀಪಗಳು

ವಿಮಾನ ಪ್ರಯಾಣಿಕರು ಸಾಮಾನ್ಯವಾಗಿ ವಿಮಾನ ಸಂಚಾರದ (ನ್ಯಾವಿಗೇಷನ್) ದೀಪಗಳ ಬಗ್ಗೆ ಹೆಚ್ಚು ಯೋಚಿಸಿರುವುದಿಲ್ಲ. ಇವು ವಿಮಾನದ ಸುರಕ್ಷಿತ ಹಾರಾಟಕ್ಕೆ ಅತ್ಯಂತ ಅವಶ್ಯಕ. ವಿಶೇಷವಾಗಿ ರಾತ್ರಿ ಸಮಯದಲ್ಲಿ ಅಥವಾ ಮಂದಬೆಳಕಿನಲ್ಲಿ (ಉದಾಹರಣೆಗೆ ಮಂಜು, ಮೋಡ, ಕತ್ತಲು) ಈ ದೀಪಗಳು ಭೂಮಿಯಲ್ಲಿರುವವರಿಗೆ, ಇತರ ವಿಮಾನಗಳಿಗೆ ಮತ್ತು ವಿಮಾನ ನಿಲ್ದಾಣದ ನಿಯಂತ್ರಕರಿಗೆ ವಿಮಾನದ ಪ್ರಸ್ತುತ ಸ್ಥಾನ, ದಿಕ್ಕು ಮತ್ತು ಚಲನೆಯನ್ನು ಗುರುತಿಸಲು ಸಹಾಯ ಮಾಡುತ್ತವೆ. ಅವು ರಸ್ತೆಯಲ್ಲಿ ಓಡಾಡುವ ವಾಹನಗಳಲ್ಲಿರುವ ಹೆಡ್‌ಲೈಟ್‌ಗಳಂತೆಯೇ ಕಾರ್ಯನಿರ್ವಹಿಸುತ್ತವೆ. ಆದರೆ ಇವು ಮೂರು ಆಯಾಮಗಳಲ್ಲಿ ವಿಮಾನದ ಸ್ಥಾನವನ್ನು ಸೂಚಿಸುತ್ತವೆ. ಅದಕ್ಕೆ ಪೂರಕವಾಗಿ ವಿಮಾನಗಳಲ್ಲಿ ಪ್ರಮುಖವಾಗಿ ಮೂರು ವಿಧಗಳ ಸಂಚಾರಿ ದೀಪಗಳು ಇರುತ್ತವೆ. ಮೊದಲನೆಯದಾಗಿ, ಸ್ಥಾನ ದೀಪಗಳು (Position Lights / Navigation Lights). ಇವು ವಿಮಾನದ ಪ್ರಮುಖ ಸ್ಥಾನವನ್ನು ಸೂಚಿಸುತ್ತವೆ ಮತ್ತು ವಿಮಾನವು ಯಾವ ದಿಕ್ಕಿನಲ್ಲಿ ಚಲಿಸುತ್ತಿದೆ ಎಂಬುದನ್ನು ತಿಳಿಸುತ್ತವೆ. ಇವುಗಳನ್ನು ರಾತ್ರಿ ಸಮಯದಲ್ಲಿ ಅಥವಾ ಮಂದ ಬೆಳಕಿನಲ್ಲಿ ಕಡ್ಡಾಯವಾಗಿ ಆನ್ ಮಾಡಿರಬೇಕು. ವಿಮಾನದ ಬಲರೆಕ್ಕೆಯ ತುದಿಯಲ್ಲಿ ಹಸಿರು ದೀಪವನ್ನು ಅಳವಡಿಸಿರುತ್ತಾರೆ. ಇದು ಬಲದಿಂದ 110 ಡಿಗ್ರಿ ಕೋನದಲ್ಲಿ ಬೆಳಕನ್ನು ಹೊರಸೂಸುತ್ತದೆ. ಎಡರೆಕ್ಕೆಯ ತುದಿಯಲ್ಲಿ ಕೆಂಪು ದೀಪವಿರುತ್ತದೆ. ಇದು ಕೂಡ ಎಡದಿಂದ 110 ಡಿಗ್ರಿ ಕೋನದಲ್ಲಿ ಬೆಳಕನ್ನು ಹೊರಸೂಸುತ್ತದೆ. ಹಿಂಭಾಗ (Tail)ದಲ್ಲಿ ಬಿಳಿದೀಪ ಮಿನುಗುತ್ತದೆ. ಈ ದೀಪವು ವಿಮಾನದ ಹಿಂಭಾಗದಲ್ಲಿ, ಅಂದರೆ ಬಾಲದ ಭಾಗದಲ್ಲಿ ಇರುತ್ತದೆ. ಇದು ಹಿಂಭಾಗದಿಂದ 140 ಡಿಗ್ರಿ ಕೋನದಲ್ಲಿ (ಪ್ರತಿ ಬದಿಗೆ 70 ಡಿಗ್ರಿ) ಬೆಳಕನ್ನು ಹೊರಸೂಸುತ್ತದೆ. ಹಾಗಾದರೆ ಈ ದೀಪಗಳ ಅರ್ಥವೇನು? ಒಬ್ಬ ವೀಕ್ಷಕನು ಆಕಾಶದಲ್ಲಿ ವಿಮಾನವನ್ನು ನೋಡಿದಾಗ, ಈ ದೀಪಗಳ ಸಂಯೋಜನೆಯು ವಿಮಾನದ ದಿಕ್ಕನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಹಸಿರು ಮತ್ತು ಬಿಳಿ ದೀಪಗಳು ಮಾತ್ರ ಕಾಣಿಸಿದರೆ ವಿಮಾನವು ನಿಮ್ಮಿಂದ ದೂರ ಸರಿಯುತ್ತಿದೆ (Away from you) ಮತ್ತು ಅದರ ಎಡಭಾಗವು ನಿಮ್ಮ ಕಡೆಗಿದೆ ಎಂದರ್ಥ. ಕೆಂಪು ಮತ್ತು ಬಿಳಿ ದೀಪಗಳು ಮಾತ್ರ ಕಾಣಿಸಿದರೆ ವಿಮಾನವು ನಿಮ್ಮಿಂದ ದೂರ ಸರಿಯುತ್ತಿದೆ ಮತ್ತು ಅದರ ಬಲಭಾಗವು ನಿಮ್ಮ ಕಡೆಗಿದೆ ಎಂದರ್ಥ. ಕೆಂಪು ಮತ್ತು ಹಸಿರು ದೀಪಗಳು ಕಾಣಿಸಿದರೆ (ಬಿಳಿ ಕಾಣಿಸದಿದ್ದರೆ) ವಿಮಾನವು ನಿಮ್ಮ ಕಡೆಗೆ ನೇರವಾಗಿ ಬರುತ್ತಿದೆ (Coming towards you) ಎಂದರ್ಥ. (ಉದಾಹರಣೆಗೆ, ಅದು ಹೆಡ್-ಆನ್ ಘರ್ಷಣೆಯ ಅಪಾಯವಿರಬಹುದು, ಆಗ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದರ್ಥ). ಮೂರು ದೀಪಗಳೂ ಮಿನುಗುವುದನ್ನು ಕಂಡರೆ (ಕೆಂಪು, ಹಸಿರು, ಬಿಳಿ) ಸಾಮಾನ್ಯವಾಗಿ ಇದು ವಿಮಾನವು ಹಾರಾಟದಲ್ಲಿರುವುದನ್ನು ಸೂಚಿಸುತ್ತದೆ, ಆದರೆ ಅವುಗಳ ಸ್ಥಾನವು ವಿಮಾನದ ದಿಕ್ಕನ್ನು ಸೂಚಿಸುತ್ತದೆ. ವಿಮಾನದಲ್ಲಿರುವ Anti-Collision Lights ಕೂಡ ಅತ್ಯಂತ ಮುಖ್ಯ. ಇವು ವಿಮಾನವು ಚಲಿಸುತ್ತಿದೆ ಅಥವಾ ಎಂಜಿನ್ ಚಾಲನೆಯಲ್ಲಿದೆ ಎಂದು ಇತರ ವಿಮಾನಗಳಿಗೆ ಮತ್ತು ನೆಲದಲ್ಲಿರುವವರಿಗೆ ಎಚ್ಚರಿಕೆ ನೀಡಲು ಬಳಸುವ ಪ್ರಕಾಶಮಾನವಾದ, ಮಿನುಗುವ ದೀಪಗಳು. ಇನ್ನು ವಿಮಾನದಲ್ಲಿ ಸ್ಟ್ರೋಬ್ ಎಂಬ (Strobe Lights) ದೀಪಗಳಿರುತ್ತವೆ. ಇವು ವಿಮಾನದ ರೆಕ್ಕೆಗಳ ತುದಿಗಳಲ್ಲಿ (Wingtips) ಮತ್ತು ಕೆಲವೊಮ್ಮೆ ಬಾಲದ ಭಾಗದಲ್ಲಿ ಅಳವಡಿಸಲಾಗಿರುವ ಪ್ರಕಾಶಮಾನವಾದ ಬಿಳಿ ದೀಪಗಳು. ಇವು ಅತ್ಯಂತ ಪ್ರಕಾಶಮಾನವಾಗಿ ಮತ್ತು ಕ್ಷಣಾರ್ಧದಲ್ಲಿ ಮಿನುಗುತ್ತವೆ. ಇವುಗಳನ್ನು ಸಾಮಾನ್ಯವಾಗಿ ಟೇಕಾಫ್‌ಗೆ ಮೊದಲು ಆನ್ ಮಾಡಲಾಗುತ್ತದೆ ಮತ್ತು ಲ್ಯಾಂಡಿಂಗ್ ನಂತರ ಆಫ್ ಮಾಡಲಾಗುತ್ತದೆ. ಇವು ರಾತ್ರಿ ಸಮಯದಲ್ಲಿ ದೂರದಿಂದಲೇ ವಿಮಾನದ ಇರುವಿಕೆಯನ್ನು ಸೂಚಿಸುತ್ತವೆ. ಹಾಗೆಯೇ ಬೀಕನ್ ದೀಪಗಳು (Beacon Lights). ಇವು ಕೆಂಪು ಬಣ್ಣದ, ತಿರುಗುವ ಅಥವಾ ಮಿನುಗುವ ದೀಪಗಳಾಗಿವೆ. ಇವನ್ನು ಸಾಮಾನ್ಯವಾಗಿ ವಿಮಾನದ ಮೇಲ್ಭಾಗ ಮತ್ತು ಕೆಳಭಾಗದಲ್ಲಿ ಅಳವಡಿಸಲಾಗಿರುತ್ತವೆ. ಎಂಜಿನ್ ಚಾಲನೆಗೆ ಮೊದಲೇ ಬೀಕನ್ ಲೈಟ್‌ಗಳನ್ನು ಆನ್ ಮಾಡಲಾಗುತ್ತದೆ ಮತ್ತು ಎಂಜಿನ್ ಸಂಪೂರ್ಣವಾಗಿ ನಿಲ್ಲುವವರೆಗೂ ಆನ್ ಆಗಿರುತ್ತವೆ. ಇದು ವಿಮಾನವು ಚಲಿಸುತ್ತಿಲ್ಲದಿದ್ದರೂ, ಅದರ ಎಂಜಿನ್ ಅಪಾಯಕಾರಿಯಾಗಿ ಚಾಲನೆಯಲ್ಲಿದೆ ಎಂದು ನೆಲದಲ್ಲಿರುವ ಸಿಬ್ಬಂದಿಗೆ ಎಚ್ಚರಿಕೆ ನೀಡುತ್ತದೆ.

ಕುಮಾರಣ್ಣಂಗೂ ಈಗ ವಿಜಯೇಂದ್ರ ಬೇಕಿಲ್ಲ

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಕಳೆದ ವಾರ ದಿಲ್ಲಿಯಿಂದ ಬಂದ ವರ್ತಮಾನ ಯಡಿಯೂರಪ್ಪ ಅವರಿಗೆ ಕಸಿವಿಸಿ ಉಂಟು ಮಾಡಿದೆಯಂತೆ. ಅದರ ಪ್ರಕಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಒಂದು ಪ್ರಪೋಸಲ್ಲನ್ನು ಯಡಿಯೂರಪ್ಪನವರ ಮುಂದಿಡಲಿದ್ದಾರೆ. 'ಕರ್ನಾಟಕದಲ್ಲಿ ವಿಜಯೇಂದ್ರ ಅಧ್ಯಕ್ಷರಾಗಿರುವುದನ್ನು ಬಹುತೇಕ ಹಿರಿಯ ನಾಯಕರು ಇಷ್ಟಪಡುತ್ತಿಲ್ಲ. ಹೀಗಾಗಿ ವಿಜಯೇಂದ್ರ ಅವರನ್ನು ರಾಷ್ಟ್ರ ಮಟ್ಟದಲ್ಲಿ ಪಕ್ಷಕ್ಕೆ ನಿಯೋಜನೆ ಮಾಡಿ, ನಿಮ್ಮ ಹಿರಿಯ ಮಗ ರಾಘವೇಂದ್ರ ಅವರನ್ನು ರಾಜ್ಯಾಧ್ಯಕ್ಷ ಸ್ಥಾನಕ್ಕೆ ತಂದರೆ ಹೇಗೆ?' ಎಂಬುದು ಅಮಿತ್ ಶಾ ಮುಂದಿಡಲಿರುವ ಪ್ರಪೋಸಲ್ಲು.

ಹೀಗೆ ಅಮಿತ್ ಶಾ ಅವರು ಹೊಸ ಪ್ರಪೋಸಲ್ಲಿನೊಂದಿಗೆ ಎಂಟ್ರಿ ಆಗಲಿದ್ದಾರೆ ಎಂಬ ವರ್ತಮಾನ ಕೇಳಿದ ನಂತರ ಯಡಿಯೂರಪ್ಪ ಅವರಿಗೆ ಕಸಿವಿಸಿ ಶುರುವಾಗಿದೆ. ಇವತ್ತು ವಿಜಯೇಂದ್ರ ಅವರ ಜಾಗಕ್ಕೆ ರಾಘವೇಂದ್ರ ಬಂದು ಕುಳಿತರೆ ಯಡಿಯೂರಪ್ಪ ಇಷ್ಟಪಡುವುದಿಲ್ಲ ಅಂತೇನಲ್ಲ. ಆದರೆ ಇಂಥ ಪ್ರಪೋಸಲ್ಲು ಪಕ್ಷದ ಮೇಲೆ ತಮಗಿರುವ ಹಿಡಿತವನ್ನು ಕಡಿಮೆ ಮಾಡುವ ತಂತ್ರ ಎಂಬುದು ಅವರ ಯೋಚನೆ. ಅಂದ ಹಾಗೆ, ಕಳೆದ ತಿಂಗಳು ಕರ್ನಾಟಕಕ್ಕೆ ಬಂದ ಅಮಿತ್ ಶಾ ಅವರು ವಿಜಯೇಂದ್ರ ಅವರ ವಿಷಯದಲ್ಲಿ ಒಂದಷ್ಟು ಪಾಸಿಟಿವ್ ಆಗಿಯೇ ಇದ್ದರು. ಅಷ್ಟೇ ಅಲ್ಲ, 'ಪಕ್ಷದ ನಾಯಕರನ್ನು ನೀವು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ ಎಂಬ ದೂರು ವ್ಯಾಪಕವಾಗಿದೆ. ಮೊದಲು ಅದನ್ನು ಸರಿಪಡಿಸಿಕೊಳ್ಳಿ' ಅಂತ ಹೇಳಿ ಹೋಗಿದ್ದರು. ಇದಾದ ನಂತರ ವಿಜಯೇಂದ್ರ ಅವರು ಪಕ್ಷದಲ್ಲಿರುವ ಅಸಮಾಧಾನಿತರ ಜತೆ ಸಂಧಾನದ ಪ್ರಯತ್ನ ನಡೆಸಿದ್ದು ನಿಜವಾದರೂ ಅದು ಹೇಳಿಕೊಳ್ಳುವಂಥ ಫಲ ನೀಡಿಲ್ಲ. ಹೀಗಾಗಿ ಕೇಂದ್ರ ಸಚಿವ ಪ್ರಲ್ಹಾದ ಜೋಷಿ ಮತ್ತು ಮಾಜಿ ಸಿಎಂ ಡಿ.ವಿ.ಸದಾನಂದಗೌಡರ ಪ್ಯಾಚಪ್ ಪ್ರಯತ್ನಗಳೂ ವರ್ಕ್ ಔಟ್ ಆಗುವ ಲಕ್ಷಣಗಳು ಕಾಣುತ್ತಿಲ್ಲ. ಪರಿಣಾಮ? ವಿಜಯೇಂದ್ರ ಅವರನ್ನು ಪಕ್ಷದ ರಾಜ್ಯಾಧ್ಯಕ್ಷ ಸ್ಥಾನದಿಂದ ಇಳಿಸಲೇಬೇಕು ಎಂಬ ಕೂಗು ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಒಂದು ಅಯೋಮಯ ವಾತಾವರಣ ಸೃಷ್ಟಿಯಾಗಿದೆ.

ಹೀಗಾಗಿ, ಕರ್ನಾಟಕದಲ್ಲಿ ವಿಜಯೇಂದ್ರ ಅವರನ್ನು ಪಕ್ಷಾಧ್ಯಕ್ಷ ಸ್ಥಾನದಿಂದ ಇಳಿಸದೆ ದಾರಿಯಿಲ್ಲ ಅಂತ ಯೋಚಿಸುತ್ತಿರುವ ಮೋದಿ-ಅಮಿತ್ ಶಾ ಜೋಡಿ, ಅದೇ ಕಾಲಕ್ಕೆ ಮತ್ತೊಂದು ಚಿಂತೆಗೂ ಬಿದ್ದಿದೆ. ಅದೆಂದರೆ ವಿಜಯೇಂದ್ರ ಅವರನ್ನು ಕೆಳಗಿಳಿಸಿದರೆ ಯಡಿಯೂರಪ್ಪ ತಿರುಗಿಬೀಳುತ್ತಾರೆ. ಹಾಗಾದಾಗ ಕರ್ನಾಟಕದಲ್ಲಿ ಪಕ್ಷಕ್ಕೆ ಡ್ಯಾಮೇಜ್ ಆಗುತ್ತದೆ ಎಂಬುದು. ಹೀಗಾಗಿ ಪಕ್ಷದ ಕೆಲ ನಾಯಕರ ಸಲಹೆ ಪಡೆದ ಈ ಜೋಡಿ, ಯಡಿಯೂರಪ್ಪ ಅವರ ಮುಂದೆ ಹೊಸ ಪ್ರಪೋಸಲ್ಲು ಇಡಲು ನಿರ್ಧರಿಸಿದೆ. ಅರ್ಥಾತ್, ವಿಜಯೇಂದ್ರ ಅವರನ್ನು ಪಕ್ಷದ ರಾಜ್ಯಾಧ್ಯಕ್ಷ ಸ್ಥಾನದಿಂದ ಇಳಿಸಿ, ಸಂಸದ ಬಿ.ವೈ.ರಾಘವೇಂದ್ರ ಅವರನ್ನು ಈ ಜಾಗಕ್ಕೆ ತಂದರೆ ಹೇಗೆ?ಎಂಬುದು ಅದರ ಪ್ರಪೋಸಲ್ಲು. ಹೀಗೆ ಅದು ರೆಡಿ ಮಾಡಿದ ಪ್ರಪೋಸಲ್ಲು ಅಮಿತ್ ಶಾ ಅವರ ಮೂಲಕ ತಮಗೆ ತಲುಪಲಿದೆ ಎಂಬ ವರ್ತಮಾನ ಯಾವಾಗ ತಮ್ಮ ಕಿವಿಗೆ ಬಿತ್ತೋ ಯಡಿಯೂರಪ್ಪ ವಿಚಲಿತರಾಗಿದ್ದಾರೆ. ಕಾರಣ? ವಿಜಯೇಂದ್ರ ಅವರನ್ನು ಇಳಿಸಿ ರಾಘವೇಂದ್ರ ಅವರನ್ನು ತರುತ್ತೇವೆ ಎಂಬುದೇ ತಮ್ಮ ಸುತ್ತ ಹೆಣೆಯುವ ಜಾಲ. ಮೊದಲನೆಯದಾಗಿ ವಿಜಯೇಂದ್ರ ಅವರ ಜಾಗಕ್ಕೆ ರಾಘವೇಂದ್ರ ಅವರು ಬಂದರೆ ಪಕ್ಷದ ಮೇಲಿನ ಹಿಡಿತ ಕೈ ತಪ್ಪುತ್ತದೆ. ಯಾಕೆಂದರೆ ರಾಘವೇಂದ್ರ ಅವರು ವಿಜಯೇಂದ್ರ ಅವರಂತೆ ಅಗ್ರೆಸಿವ್ ಅಲ್ಲ. ಇವತ್ತು ಅಗ್ರೆಸಿವ್ ಆಗಿರದಿದ್ದರೆ ಪಕ್ಷದ ಮೇಲೆ ಹಿಡಿತ ಹೊಂದಲು ಸಾಧ್ಯವಿಲ್ಲ. ಒಂದು ಸಲ ಹೀಗೆ ಹಿಡಿತ ಕಳೆದುಕೊಂಡರೆ ರಾಘವೇಂದ್ರ ಕೂಡಾ ತುಂಬ ಕಾಲ ಅಧ್ಯಕ್ಷರಾಗಿ ಮುಂದುವರಿಯಲು ಸಾಧ್ಯವಿಲ್ಲ. ಅರ್ಥಾತ್, ಮುಂದಿನ ವಿಧಾನಸಭಾ ಚುನಾವಣೆಯ ವೇಳೆಗೆ ಪಕ್ಷದ ಅಧ್ಯಕ್ಷ ಸ್ಥಾನದಲ್ಲಿ ತಮ್ಮ ವಿರೋಧಿ ಬಣದ ನಾಯಕರೊಬ್ಬರು ಸೆಟ್ಲಾಗಿರುತ್ತಾರೆ ಎಂಬುದು ಯಡಿಯೂರಪ್ಪ ಅವರ ಅನುಮಾನ.

ಸಂಸದರ ಪಡೆ ಎದ್ದು ನಿಂತಿದೆ

ಅಂದ ಹಾಗೆ, ಅಮಿತ್ ಶಾ ಕರ್ನಾಟಕಕ್ಕೆ ಬಂದು ಹೋದ ನಂತರ ವಿಜಯೇಂದ್ರ ಸೇಫ್ ಎಂಬ ಭಾವನೆ ಇತ್ತಲ್ಲ? ಈ ಭಾವನೆ ದಿನ ಕಳೆದಂತೆ ಕಡಿಮೆಯಾಗಲು ಏನು ಕಾರಣ? ಹಾಗಂತ ಹುಡುಕುತ್ತಾ ಹೋದರೆ ಕಣ್ಣಿಗೆ ಕಾಣುವುದು ಸಂಸದರ ಪಡೆ. ಇವತ್ತು ಕರ್ನಾಟಕದಿಂದ ಸಂಸತ್ತಿಗೆ ಆಯ್ಕೆಯಾದ ಬಿಜೆಪಿಯ ಹದಿನೇಳು ಸಂಸದರ ಪೈಕಿ ಬಹುತೇಕ ಮಂದಿ ವಿಜಯೇಂದ್ರ ಅವರನ್ನು ಇಷ್ಟ ಪಡುತ್ತಿಲ್ಲ. ಒಂದು ಕಾಲದಲ್ಲಿ ಯಡಿಯೂರಪ್ಪ ಅವರಿಗೆ ಅಂಟಿಕೊಂಡಿದ್ದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಂದರ ರಾಜ ಧನಾನಂದನ ಮೇಲೆ ಚಾಣಕ್ಯ ಮುನಿಸಿಕೊಂಡಂತೆ ಯಡಿಯೂರಪ್ಪ ಅವರ ಮೇಲೆ ಮುನಿಸಿಕೊಂಡಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಮ್ಮನ್ನು ಸೋಲಿಸಲು ಯಡಿಯೂರಪ್ಪ-ವಿಜಯೇಂದ್ರ ಏನೇನು ಪ್ರಯತ್ನ ಮಾಡಿದ್ದರು? ಇತ್ತೀಚಿನ ಉಪಚುನಾವಣೆಯಲ್ಲಿ ತಮ್ಮ ಮಗ ಭರತ್ ಸೋಲಲು ಹೇಗೆ ಕಾರಣರಾದರು? ಎಂಬುದನ್ನು ನೆನೆಸಿಕೊಂಡಾಗಲೆಲ್ಲ ಬೊಮ್ಮಾಯಿ ಕ್ರುದ್ಧರಾಗುತ್ತಾರೆ. ಅಷ್ಟೇ ಅಲ್ಲ, ಇವತ್ತು ವಿಜಯೇಂದ್ರ ಅವರನ್ನು ಪಟ್ಟದಿಂದ ಕೆಳಗಿಳಿಸಲು ಸಜ್ಜಾಗಿರುವ ಸಂಸದರ ಪಡೆಯ ಮುಂಚೂಣಿಯಲ್ಲಿ ಬಂದು ನಿಂತಿದ್ದಾರೆ.

ಇದೇ ರೀತಿ, ಚಿಕ್ಕಬಳ್ಳಾಪುರದ ಸಂಸದ ಡಾ.ಕೆ.ಸುಧಾಕರ್ ಅವರಿಗೆ ವಿಜಯೇಂದ್ರ ಅವರ ಮೇಲೆ ಮಿತಿಮೀರಿದ ಸಿಟ್ಟಿದೆ. ತಮ್ಮ ಜಿಲ್ಲೆಗೆ ನುಗ್ಗಿ ತಮ್ಮನ್ನು ಡಮ್ಮಿ ಮಾಡಲು ವಿಜಯೇಂದ್ರ ನಡೆಸಿದ ಪ್ರಯತ್ನವು ಅವರು ಕನಲಿಹೋಗುವಂತೆ ಮಾಡಿದೆ. ಇನ್ನು ತುಮಕೂರಿನಲ್ಲಿ ಗೆದ್ದು ಕೇಂದ್ರ ಸಚಿವರಾಗಿರುವ ವಿ.ಸೋಮಣ್ಣ ಅವರನ್ನಂತೂ ಕೇಳುವುದೇ ಬೇಡ. ವಿಧಾನಸಭಾ ಚುನಾವಣೆಯಲ್ಲಿ ತಮ್ಮನ್ನು ಸೋಲಿಸಲು ಯಡಿಯೂರಪ್ಪ-ವಿಜಯೇಂದ್ರ ಏನೇನು ಮಾಡಿದರು? ಲಿಂಗಾಯತ ನಾಯಕತ್ವಕ್ಕೆ ತಾವು ಅಡ್ಡಿಯಾಗಬಾರದು ಅಂತ ಹೇಗೆಲ್ಲಾ ಹಣಿಯಲು ಯತ್ನಿಸಿದರು? ಎಂಬುದು ಸೋಮಣ್ಣ ಆಕ್ರೋಶದ ಮೂಲ.

ಇನ್ನು ಚಿತ್ರದುರ್ಗದ ಸಂಸದ ಗೋವಿಂದ ಕಾರಜೋಳ ಅವರಿಗೂ ಯಡಿಯೂರಪ್ಪ-ವಿಜಯೇಂದ್ರ ಬಗ್ಗೆ ಸಿಟ್ಟು ಬಂದಿದೆ. ದಲಿತರ ಕೋಟಾದಲ್ಲಿ ತಾವು ಕೇಂದ್ರ ಸಚಿವರಾಗುವ ಅವಕಾಶಕ್ಕೆ ಯಡಿಯೂರಪ್ಪ ಇಂಬು ನೀಡಲಿಲ್ಲ ಎಂಬುದು ಅವರ ಅಸಮಾಧಾನದ ಮೂಲ. ಬಾಗಲಕೋಟೆಯ ಪಿ.ಸಿ.ಗದ್ದಿಗೌಡರ್ ಅವರ ಸಿಟ್ಟಿಗೂ ಇಂಥದೇ ಕಾರಣವಿದೆ. ಸತತ ಮೂರು ಬಾರಿ ಸಂಸದರಾದ ತಮಗೆ ಕೇಂದ್ರ ಸಂಪುಟದಲ್ಲಿ ಜಾಗ ಕೊಡಿಸಲು ಶಿಫಾರಸು ಮಾಡಿ ಅಂತ ಗದ್ದಿಗೌಡರ್ ಅವರು ಯಡಿಯೂರಪ್ಪ ಅವರನ್ನು ಕೋರಿದ್ದರಂತೆ. ಆದರೆ ಅವರ ಕೋರಿಕೆಯನ್ನು ತಿರಸ್ಕರಿಸಿದ ಯಡಿಯೂರಪ್ಪ ಅವರು, 'ಈ ಸಲ ನಮ್ಮ ರಾಘವೇಂದ್ರ ಮಂತ್ರಿ ಆಗಿಬಿಡಲಿ. ನೀವು ಸ್ವಲ್ಪ ದಿನ ಕಾಯಿರಿ' ಎಂದಿದ್ದರಂತೆ. ಅಂದ ಹಾಗೆ, ಯಡಿಯೂರಪ್ಪ ಅವರ ಬಯಕೆಯಂತೆ ರಾಘವೇಂದ್ರ ಕೇಂದ್ರ ಮಂತ್ರಿಮಂಡಲಕ್ಕೆ ಸೇರಲಿಲ್ಲ ಎಂಬುದು ಬೇರೆ ಮಾತು. ಆದರೆ ಸಮಯ ಬಂದರೆ ಯಡಿಯೂರಪ್ಪ ಮಕ್ಕಳ ಪರ ನಿಲ್ಲುತ್ತಾರೆಯೇ ಹೊರತು ತಮ್ಮ ಜತೆಗಲ್ಲ ಎಂಬುದು ಗದ್ದಿಗೌಡರ್ ಅವರಿಗೆ ಕನ್‌ಫರ್ಮ್ ಆಗಿದೆ. ಹೀಗಾಗಿ ಅವರೀಗ ವಿರೋಧಿ ಗ್ಯಾಂಗಿನಲ್ಲಿ ನೆಲೆಯಾಗಿದ್ದಾರೆ ಎಂಬುದು ಮೂಲಗಳ ಮಾತು.

ಇದೇ ರೀತಿ ಬಿಜಾಪುರದ ಸಂಸದ ರಮೇಶ್ ಜಿಗಜಿಣಗಿ ಅವರು ಯಡಿಯೂರಪ್ಪ-ವಿಜಯೇಂದ್ರ ಕ್ಯಾಂಪಿನಿಂದ ದೂರವಾಗಿ ಬಹುಕಾಲವೇ ಆಗಿಹೋಗಿದೆ. ಲೋಕಸಭಾ ಚುನಾವಣೆಯಲ್ಲಿ ತಮಗೆ ಟಿಕೆಟ್ ತಪ್ಪಿಸಲು ಯತ್ನಿಸಿದ್ದರಿಂದ ಹಿಡಿದು, ದಿಲ್ಲಿ ರಾಜಕಾರಣದಲ್ಲಿ ತಾವು ನೆಲೆ ಆಗದಿರಲು ಇವರು ಏನೆಲ್ಲಾ ಮಾಡಿದರಲ್ಲಾ ಎಂಬುದು ಜಿಗಜಿಣಗಿ ಕೋಪ. ಉಳಿದಂತೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಿಂದ ಗೆದ್ದಿರುವ ದೇವೇಗೌಡರ ಅಳಿಯ ಡಾ.ಮಂಜುನಾಥ್ ಅವರು ಬಣ ರಾಜಕೀಯದಲ್ಲಿ ಗುರುತಿಸಿಕೊಂಡಿಲ್ಲವಾದರೂ ರಾಜಕಾರಣದ ಅನಿವಾರ್ಯತೆಗಳು ತಮ್ಮನ್ನು ಯಡಿಯೂರಪ್ಪ-ವಿಜಯೇಂದ್ರ ಕ್ಯಾಂಪಿನಿಂದ ದೂರ ನಿಲ್ಲುವಂತೆ ಮಾಡುತ್ತವೆ ಎಂಬುದನ್ನು ಅರ್ಥ ಮಾಡಿಕೊಂಡಿದ್ದಾರೆ.

ಇದೇ ರೀತಿ ಕೇಂದ್ರ ಸಚಿವರಾದ ಪ್ರಲ್ಹಾದ ಜೋಷಿ ಅವರು ಭವಿಷ್ಯದ ಸಿಎಂ ಕ್ಯಾಂಡಿಡೇಟು. ಇವತ್ತು ರಾಜ್ಯ ಬಿಜೆಪಿಯ ಗೊಂದಲವನ್ನು ಶಮನಗೊಳಿಸಲು ವರಿಷ್ಠರು ಅವರಿಗೆ ಟಾಸ್ಕ್ ನೀಡಿದ್ದಾರಾದರೂ, ಅವರು ವಿಜಯೇಂದ್ರ ಜತೆ ನಿಲ್ಲುತ್ತಾರೆ ಎಂಬುದು ಸುಳ್ಳು. ಇನ್ನು ಬೆಳಗಾವಿಯಿಂದ ಗೆದ್ದ ಜಗದೀಶ್ ಶೆಟ್ಟರ್, ಬೆಂಗಳೂರು ಉತ್ತರ ಕ್ಷೇತ್ರದಿಂದ ಗೆದ್ದ ಶೋಭಾ ಕರಂದ್ಲಾಜೆ, ಉತ್ತರ ಕನ್ನಡದಿಂದ ಗೆದ್ದ ವಿಶ್ವೇಶ್ವರ ಹೆಗಡೆ ಕಾಗೇರಿ, ಚಿಕ್ಕಮಗಳೂರಿನಿಂದ ಗೆದ್ದ ಕೋಟಾ ಶ್ರೀನಿವಾಸ ಪೂಜಾರಿ ಮತ್ತು ಮೈಸೂರಿನಿಂದ ಗೆದ್ದ ಯದುವೀರ್ ಒಡೆಯರ್ ಅವರು ವಿಜಯೇಂದ್ರ ನಾಯಕತ್ವದ ವಿರೋಧಿಗಳಲ್ಲವಾದರೂ ತಟಸ್ಥ ಬಣದಲ್ಲಿರುವುದರಿಂದ 'ವಿಜಯೇಂದ್ರ ಬೇಕೇ ಬೇಕು' ಎನ್ನುವವರಲ್ಲ.

ಹಾಗೆ ನೋಡಿದರೆ, ಇವತ್ತು ನೇರವಾಗಿ ವಿಜಯೇಂದ್ರ ಜತೆಗಿರುವವರು ಮಂಗಳೂರಿನ ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಿವಮೊಗ್ಗದ ಬಿ.ವೈ.ರಾಘವೇಂದ್ರ, ಬೆಂಗಳೂರು ಸೆಂಟ್ರಲ್ಲಿನ ಪಿ.ಸಿ.ಮೋಹನ್, ಬೆಂಗಳೂರು ದಕ್ಷಿಣದ ತೇಜಸ್ವಿ ಸೂರ್ಯ ಅವರಂಥವರು ಮಾತ್ರ. ಹೀಗಾಗಿ ಮೋದಿ-ಅಮಿತ್ ಶಾ ಜೋಡಿ ಕೂಡಾ ಒಂದು ಮಟ್ಟದಲ್ಲಿ ವಿವಶವಾಗಿದೆ. ಒಂದೇ ವ್ಯತ್ಯಾಸವೆಂದರೆ, ವಿಜಯೇಂದ್ರ ಅವರನ್ನು ಕೆಳಗಿಳಿಸಿ ಸೋಮಣ್ಣ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ತರಬೇಕು ಎಂದು ಬಹುತೇಕ ಸಂಸದರು ಹೇಳುತ್ತಿದ್ದರೆ, 'ವಿಜಯೇಂದ್ರ ಅವರನ್ನು ಬದಲಿಸಿದರೆ, ಅವರ ಜಾಗಕ್ಕೆ ರಾಘವೇಂದ್ರ ಅವರನ್ನು ತರೋಣ. ಕರ್ನಾಟಕ ವಿಧಾನಸಭೆಗೆ ಮಧ್ಯಂತರ ಚುನಾವಣೆ ಕನ್‌ಫರ್ಮ್ ಆದಾಗ ಸೋಮಣ್ಣ ಅವರನ್ನು ತಂದು ಕೂರಿಸೋಣ' ಅಂತ ಮೋದಿ-ಅಮಿತ್ ಶಾ ಅವರು ಯೋಚಿಸುತ್ತಿದ್ದಾರೆ.

ಕುಮಾರಣ್ಣಂಗೂ ವಿಜಯೇಂದ್ರ ಬೇಕಾಗಿಲ್ಲ

ಈ ಮಧ್ಯೆ, ಜೆಡಿಎಸ್ ನಾಯಕ, ಕೇಂದ್ರದ ಉಕ್ಕು ಮತ್ತು ಕೈಗಾರಿಕಾ ಖಾತೆಯ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೂ ಈಗ ವಿಜಯೇಂದ್ರ ಬೇಕಾಗಿಲ್ಲ. ಕಾರಣ? ವಿಜಯೇಂದ್ರ ಅವರಿಗೆ ಜೆಡಿಎಸ್ ಬಗ್ಗೆ ಇರುವ ನಿರಾಸಕ್ತಿ. ಅಂದ ಹಾಗೆ, ಕಳೆದ ಲೋಕಸಭಾ ಚುನಾವಣೆಯ ಹೊತ್ತಿಗೆ ಗೋವಾದ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮತ್ತು ಅಮಿತ್ ಶಾ ಅವರ ಲೆಕ್ಕಾಚಾರದ ಫಲವಾಗಿ ಬಿಜೆಪಿ-ಜೆಡಿಎಸ್ ಮಧ್ಯೆ ಹೊಂದಾಣಿಕೆ ಸಾಧಿತವಾಗಿತ್ತು. '2023 ರಲ್ಲಿ ಕರ್ನಾಟಕದ ಅಧಿಕಾರ ಸೂತ್ರ ಹಿಡಿದಿದ್ದ ಕಾಂಗ್ರೆಸ್ ಪಕ್ಷ ಬಲಿಷ್ಠವಾಗಿ ನೆಲೆ ನಿಂತಿದೆ. ಅದನ್ನು ವೈಯಕ್ತಿಕ ನೆಲೆಯಲ್ಲಿ ಎದುರಿಸಿದರೆ ಲೋಕಸಭಾ ಚುನಾವಣೆಯಲ್ಲಿ ನಾವು ಹತ್ತು ಸೀಟು ಗೆಲ್ಲುವುದೂ ಕಷ್ಟ. ಆದರೆ ಬಿಜೆಪಿ-ಜೆಡಿಎಸ್ ಮತಗಳು ಕನ್‌ಸಾಲಿಡೇಟ್ ಆದರೆ ಇಪ್ಪತ್ತರಿಂದ ಇಪ್ಪತ್ತೆರಡು ಸೀಟುಗಳನ್ನು ಗೆಲ್ಲಬಹುದು' ಅಂತ ಪ್ರಮೋದ್ ಸಾವಂತ್ ವರದಿ ಕೊಟ್ಟಾಗ ಮೋದಿ-ಅಮಿತ್ ಶಾ 'ಯೆಸ್' ಎಂದಿದ್ದರು.

ಅವತ್ತು ಚುನಾವಣೆಯಲ್ಲಿ ಪ್ರಮೋದ್ ಸಾವಂತ್ ಹೇಳಿದ್ದು ಬಹುತೇಕ ನಿಜವಾಯಿತು. ಆದರೂ ಸ್ವಪಕ್ಷೀಯರು ಒಳಗುನ್ನ ಹಾಕದೆ ಇದ್ದಿದ್ದರೆ ರಾಯಚೂರು, ದಾವಣಗೆರೆ, ಚಿಕ್ಕೋಡಿ ಸೇರಿದಂತೆ ಇನ್ನೂ ನಾಲ್ಕೈದು ಲೋಕಸಭಾ ಕ್ಷೇತ್ರಗಳಲ್ಲಿ ಗೆಲುವು ಗಳಿಸಬಹುದಿತ್ತು ಎಂಬ ನಸನಸೆ ಬಿಜೆಪಿ ಪಾಳಯದಲ್ಲಿ ಉಳಿದೇಹೋಯಿತು. ಅದೇನೇ ಇದ್ದರೂ ಮಿತ್ರಕೂಟ ಹತ್ತೊಂಬತ್ತು ಸೀಟುಗಳನ್ನು ಗಳಿಸಿದ್ದರಿಂದ ಮೋದಿ-ಅಮಿತ್ ಶಾ ಜೋಡಿ ಖುಷಿಯಾಗಿದ್ದಷ್ಟೇ ಅಲ್ಲ, ಈ ಯಶಸ್ಸಿಗೆ ಕಾಣಿಕೆ ನೀಡಿದ ಕುಮಾರಸ್ವಾಮಿ ಅವರನ್ನು ಕೇಂದ್ರ ಮಂತ್ರಿ ಮಂಡಲಕ್ಕೆ ಸೇರಿಸಿಕೊಂಡು ಒಳ್ಳೆ ಖಾತೆಯ ಗಿಫ್ಟ್ ನೀಡಿತು. ಆದರೆ ಇಷ್ಟೆಲ್ಲ ಆದರೂ ವಿಜಯೇಂದ್ರ ಮಾತ್ರ ಜೆಡಿಎಸ್ ಅನ್ನು ದೂರವಿಡುತ್ತಾ ಬಂದಿದ್ದಷ್ಟೇ ಅಲ್ಲ, ಇವತ್ತು ಅಸೆಂಬ್ಲಿ ಚುನಾವಣೆ ನಡೆದರೂ ಬಿಜೆಪಿ ಸ್ವಯಂಬಲದ ಮೇಲೆ ನೂರಾ ನಲವತ್ತು ಸೀಟು ಗೆಲ್ಲುತ್ತದೆ ಎಂಬ ಮೆಸೇಜು ರವಾನಿಸತೊಡಗಿದರು.

ಹೀಗೆ ನಮ್ಮ ಶಕ್ತಿಯಿಂದಲೇ ನೂರಾ ನಲವತ್ತು ಸೀಟು ಗೆಲ್ಲುತ್ತೇವೆ ಎಂದ ಮೇಲೆ ನಮಗೆ ಜೆಡಿಎಸ್‌ನ ಅಗತ್ಯ ಏನಿದೆ? ಅಂತ ಅವರು ರವಾನಿಸತೊಡಗಿದ ಸಿಗ್ನಲ್ಲು, ಪಕ್ಷದೊಳಗಿರುವ ಅವರ ವಿರೋಧಿಗಳಿಗೆ ಮಾತ್ರವಲ್ಲ, ಕೇಂದ್ರ ಸಚಿವ ಕುಮಾರಸ್ವಾಮಿ ಅವರಿಗೂ ಕಿರಿಕಿರಿಯಾಗುವಂತೆ ಮಾಡಿತು. ಅವರ ಈ ಕಿರಿಕಿರಿಯನ್ನು ಅರ್ಥ ಮಾಡಿಕೊಂಡ ಅಮಿತ್ ಶಾ ಅವರು ಕೆಲ ದಿನಗಳ ಹಿಂದೆ ಕರ್ನಾಟಕಕ್ಕೆ ಬಂದಾಗ ವಿಜಯೇಂದ್ರ ಅವರಿಗೆ, 'ಜೆಡಿಎಸ್ ಜತೆ ಸೇರಿ ನಾವು ಅಸೆಂಬ್ಲಿ ಎಲೆಕ್ಷನ್ನಿಗೆ ಹೋಗಬೇಕು. ಹೀಗಾಗಿ ಅವರೊಂದಿಗೆ ಸಂಬಂಧ ಚೆನ್ನಾಗಿರಲಿ' ಅಂತ ಹೇಳಿ ಹೋಗಿದ್ದರು. ಆದರೆ ಯಾರೇನೇ ಹೇಳಿದರೂ ವಿಜಯೇಂದ್ರ ಮನಃಪೂರ್ವಕವಾಗಿ ಜೆಡಿಎಸ್ ಜತೆ ಹೊಂದಿಕೊಂಡು ಹೋಗಲಾರರು ಎಂಬುದು ಕುಮಾರಸ್ವಾಮಿ ಅವರಿಗೆ ಕನ್‌ಫರ್ಮ್ ಆಗಿದೆ. ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿದರೆ ತಾವು ಸಿಎಂ ಆಗಲೇಬೇಕು ಎಂಬ ಲೆಕ್ಕಾಚಾರದಲ್ಲಿರುವವರು ಬೇರೆಯವರನ್ನು ಒಪ್ಪುವುದು ಹೇಗೆ? ಎಂಬುದು ಕುಮಾರಸ್ವಾಮಿ ಯೋಚನೆ.

ಹೀಗಾಗಿ ಬಹಿರಂಗವಾಗಿ ಮಾತನಾಡದಿದ್ದರೂ ಮಿತ್ರಕೂಟ ಸುಗಮವಾಗಿ ಮುನ್ನಡೆಯಲು ಸೋಮಣ್ಣ ಅವರಂಥ ನಾಯಕ ಬಿಜೆಪಿಯ ಮುಂಚೂಣಿಯಲ್ಲಿರಬೇಕು ಅಂತ ಅವರು ಬಯಸಿದ್ದಾರೆ. ಪರಿಣಾಮ? ವಿಜಯೇಂದ್ರ ಪದಚ್ಯುತಿಗೆ ಹವಣಿಸುತ್ತಿರುವವರಿಗೆ ಕುಮಾರಸ್ವಾಮಿ ಅವರ ಮಾರಲ್ ಸಪೋರ್ಟು ಸಿಗುವುದು ನಿಕ್ಕಿಯಾಗಿದೆ.

ಬದುಕಿನ ಬಂಡಿ ಸರಿಹಾದಿಯಲ್ಲಿ ಸಾಗಲಿ

ಅಭಿಮತ

ಆದರ್ಶ್ ಶೆಟ್ಟಿ, ಉಪ್ಪಿನಂಗಡಿ
vveditoped@gmail.com

ವರ್ಷಗಳು ಉರುಳಿದಂತೆ ಮನುಷ್ಯನ ಬದುಕಿನ ಶೈಲಿಯಲ್ಲಿ ನಾನಾ ಬಗೆಯ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಹೊಸ ಹೊಸ ತಂತ್ರಜ್ಞಾನಗಳ ಆವಿಷ್ಕಾರದಿಂದಾಗಿ ಬದುಕಿನಲ್ಲಿಂದು ಐಷಾರಾಮಿ ಆಯ್ಕೆಗಳು ಕಾಣಸಿಗುತ್ತಿವೆ. ಇಂದು ಹಣವೊಂದಿದ್ದರೆ ಎಲ್ಲಾ ಬಗೆಯ ಸೌಕರ್ಯಗಳೂ ಕಾಲಬುಡದಲ್ಲೇ ಬಂದು ಬೀಳುವಂಥ ವ್ಯವಸ್ಥೆಗಳಿವೆ. ನಾವಿಂದು ಖರೀದಿಸುತ್ತಿರುವ ವಸ್ತುಗಳು, ಬಳಸುತ್ತಿರುವ ವಾಹನಗಳು, ತಿನ್ನುವ ಆಹಾರ, ನಮ್ಮ ಆಚರಣೆಗಳು, ಕುಟುಂಬ ವ್ಯವಸ್ಥೆ ಪ್ರತಿಯೊಂದು ಕೂಡ 'ಫ್ಯಾಷನ್' ಆಗಿಬಿಟ್ಟಿವೆ. ನಮ್ಮ ಹಿರಿಯರೆಲ್ಲಾ ಕಿಲೋಮೀಟರ್‌ಗಟ್ಟಲೆ ನಡೆದೇ ಸಾಗುತ್ತಿದ್ದಂಥವರು, ನಾವಾದರೋ ಆಧುನಿಕ ಜೀವನಶೈಲಿಯಲ್ಲಿ ಹತ್ತು ಹೆಜ್ಜೆಯ ದೂರಕ್ಕೂ ವಾಹನಗಳನ್ನೇ ಅವಲಂಬಿಸಿರುವವರು. ಮನೆಯ ದಿನನಿತ್ಯದ ಕಾರ್ಯಗಳು, ಗೃಹೋಪಯೋಗಿ ವಸ್ತುಗಳು ಕೂಡ ಯಾಂತ್ರೀಕೃತವಾಗಿರುವುದರಿಂದ ಮನುಷ್ಯನ ದೇಹದಲ್ಲಿ ಶ್ರಮವಿಲ್ಲ, ಹವಾನಿಯಂತ್ರಿತ ಕೊಠಡಿಯಲ್ಲಿ ಬೆವರಹನಿ ಇಳಿಯುತ್ತಿಲ್ಲ.

ನಮ್ಮ ಬಹುತೇಕ ಹಿರಿಯರು ದೀರ್ಘಾಯುಷಿಗಳಾಗಿದ್ದುದಕ್ಕೆ ಕಾರಣ, ಅವರ ಬದುಕಿನ ಶೈಲಿ, ಆಹಾರ ಪದ್ಧತಿ, ಬೆಳೆದ ಪರಿಸರ ಮತ್ತು ದುಡಿಮೆಯ ಮಟ್ಟ ಆ ರೀತಿಯಲ್ಲಿದ್ದವು. ಈಗಿನವರಲ್ಲಿ ಆರೋಗ್ಯದ ಏರುಪೇರು, ರಕ್ತದೊತ್ತಡ, ಮಧುಮೇಹ ಮಾಮೂಲಾಗಿವೆ, ಅವು ಮಕ್ಕಳನ್ನೂ ಕಾಡುತ್ತಿವೆ. ಇತ್ತೀಚೆಗೆ ಸುದ್ದಿಯಾದ ಸರಣಿ ಹೃದಯಾಘಾತ ಪ್ರಕರಣಗಳೂ ಸಾಕಷ್ಟು ಜನರನ್ನು ಕಂಗೆಡಿಸಿವೆ. ಜಂಕ್‌ಫುಡ್‌ಗಳ ಹಾವಳಿ, ಬಾಯಿರುಚಿಗೆಂದು ಸೇರಿಸಲಾದ 'ಟೇಸ್ಟಿಂಗ್ ಪೌಡರ್‌ಗಳು', ರಾಸಾಯನಿಕಗಳ ಬಳಕೆಯಿಂದಾಗಿ ವಿಷಯುಕ್ತವಾಗಿರುವ ಆಹಾರ, ಪರಿಶ್ರಮವಿಲ್ಲದ ಮತ್ತು ಬೆವರು ಸುರಿಯದ ಕಾರಣಕ್ಕೆ ದೇಹದಲ್ಲಿ ಜಮೆಯಾಗುವ ಕೊಬ್ಬಿನಂಶ, ಕಾರ್ಯಕ್ಷೇತ್ರದಲ್ಲಿ ಹೆಚ್ಚುತ್ತಿರುವ ಒತ್ತಡಗಳು ಹೀಗೆ ಈಗಿನವರ ಅನಾರೋಗ್ಯಕ್ಕೆ ಸಾಕಷ್ಟು ಕಾರಣಗಳಿವೆ.

ಇಂದಿನವರಿಗೆ ಹಣ ಸಂಪಾದನೆ ಎಂಬುದೇ ಆದ್ಯತಾ ವಿಷಯವಾಗಿ ಮಾನವೀಯ ಸಂಬಂಧಗಳು ಮತ್ತು ನೈತಿಕ ಮೌಲ್ಯಗಳು ಮೂಲೆಗುಂಪಾಗುತ್ತಿವೆ. ಸ್ವಾರ್ಥ ಹೆಚ್ಚುತ್ತಿದೆ. ಆಧುನಿಕ ಶಿಕ್ಷಣ ವ್ಯವಸ್ಥೆಯೂ ಅಂಕಗಳಿಕೆ ಮತ್ತು ಪ್ರತಿಷ್ಠೆಯ ಪರಾಕಾಷ್ಠೆಗೆ ನಲುಗಿಹೋದ ಕಾರಣ, ನೈತಿಕ ಶಿಕ್ಷಣದ ನೆರವಿನಿಂದ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಲ್ಲಿ ಅದು ಎಡವಿದೆ. ಸ್ಮಾರ್ಟ್‌ಫೋನುಗಳೂ ಸೇರಿದಂತೆ ತಂತ್ರಜ್ಞಾನದ ಅತಿಬಳಕೆ ಮತ್ತು ಯಾಂತ್ರೀಕೃತ ಬದುಕಿನ ಪರಿಣಾಮವಾಗಿ ಕುಟುಂಬ ವ್ಯವಸ್ಥೆಯಲ್ಲಿನ ಬಾಂಧವ್ಯಗಳು ಕೂಡ ಜಾಳುಜಾಳಾಗಿಬಿಟ್ಟಿವೆ. ಹಿಂದೆಲ್ಲಾ ಬೇಸಗೆ/ದಸರಾ ರಜೆಯ ಸಂದರ್ಭಗಳಲ್ಲಿ ಮಕ್ಕಳು ತಮ್ಮ ಅಜ್ಜ-ಅಜ್ಜಿ, ಚಿಕ್ಕಮ್ಮ-ದೊಡ್ಡಮ್ಮ, ಮಾವನ ಮನೆಗಳಲ್ಲಿ ವಿಹರಿಸುವುದು, ಕುಣಿದು ಕುಪ್ಪಳಿಸುವುದು ವಾಡಿಕೆಯಾಗಿತ್ತು. ಆದರೀಗ ಮೊಬೈಲ್, ಟಿವಿ, ಸಾಮಾಜಿಕ ಮಾಧ್ಯಮಗಳ ವಿಪರೀತ ಹಾವಳಿಯಿಂದಾಗಿ ಇಂಥ ಭಾವನಾತ್ಮಕ ಒಡನಾಟಗಳು ಗಣನೀಯವಾಗಿ ಕಮ್ಮಿಯಾಗಿವೆ. ಕುಟುಂಬದ ಸದಸ್ಯರೆಲ್ಲರೂ ಒಟ್ಟಾಗಿ ಕುಳಿತು ಹರಟೆ ಹೊಡೆಯುವ, ಆಟವಾಡುವ ಪರಿಪಾಠಗಳೇ ಮಾಯವಾಗಿವೆ.

ಇನ್ನು ಮದುವೆ, ಮುಂಜಿ, ಧಾರ್ಮಿಕ ಆಚರಣೆಗಳನ್ನು ಕೂಡ ಕಾಲ ಬದಲಾದಂತೆ ಮಾರ್ಪಡಿಸಿ, ಫ್ಯಾಷನ್ ಜಗತ್ತಿನ ಅನಿವಾರ್ಯತೆಗೆ ಕಟ್ಟುಬಿದ್ದು ಅರ್ಥವಿಲ್ಲದ ಆಚರಣೆಗಳು/ಶಾಸ್ತ್ರಗಳನ್ನು ಅನುಸರಿಸಲಾಗುತ್ತಿದೆ. ಲಕ್ಷಗಟ್ಟಲೆ ವೇತನ/ಸಂಪಾದನೆಗೇ ಮಾನ್ಯತೆ ಸಿಗುತ್ತಿದೆ, ಮಾನವೀಯ ಸಂಬಂಧಗಳು ನಶಿಸಿಹೋಗುತ್ತಿವೆ ಅಥವಾ ಕೌಟುಂಬಿಕ ನಂಟಿಗೆ ಸಮಯವನ್ನೇ ನೀಡಲಾಗದಷ್ಟರ ಮಟ್ಟಿಗೆ ಮನುಷ್ಯನ ಬದುಕು 'ಬ್ಯುಸಿ' ಆಗಿಬಿಟ್ಟಿದೆ. ದಾಂಪತ್ಯ ಸಂಬಂಧಗಳು ಹದಗೆಡುತ್ತಿವೆ, ಕೌಟುಂಬಿಕ ಕಲಹಗಳು ಮತ್ತು ವಿವಾಹ ವಿಚ್ಛೇದನಗಳು ಹೆಚ್ಚುತ್ತಿವೆ. ಹಣ ಮತ್ತು ಆಸ್ತಿಗಾಗಿ ಹೆತ್ತವರನ್ನೇ ವೃದ್ಧಾಶ್ರಮಕ್ಕೆ ತಳ್ಳುವುದಕ್ಕೂ ಮಕ್ಕಳು ಹೇಸುತ್ತಿಲ್ಲ. ಅಷ್ಟೇಕೆ, ಹೆತ್ತವರ ಅಂತ್ಯಸಂಸ್ಕಾರಕ್ಕೂ ಮಕ್ಕಳು ಬಾರದೆ ಇನ್ಯಾರೋ ಅಂತಿಮ ವಿಧಿ-ವಿಧಾನಗಳನ್ನು ನೆರವೇರಿಸಿದ ಘಟನೆಗಳು ಸಾಕ್ಷಿವೆ.

ಶಾಲಾ ಮಕ್ಕಳು ಅಪರಾಧಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ, ಜೀವನದ ಸವಾಲುಗಳಿಗೆ ಅಂಜಿ ಹದಿಹರೆಯದಲ್ಲೇ ಆತ್ಮಹತ್ಯೆಗೆ ಮುಂದಾಗುವ, ಅಪ್ರಾಪ್ತ ಹೆಣ್ಣುಮಕ್ಕಳು ಅಕ್ರಮಗರ್ಭ ಧರಿಸಿ ಮಗುವಿಗೆ ಜನ್ಮ ನೀಡುವ ನಿದರ್ಶನಗಳು ಹೆಚ್ಚುತ್ತಿವೆ. ಹದಿಹರೆಯದವರೇ ಹೆಚ್ಚೆಚ್ಚು ಪ್ರಮಾಣದಲ್ಲಿ ಮಾರಕ ಕಾಯಿಲೆಗಳಿಗೆ ತುತ್ತಾಗುತ್ತಿರುವುದಕ್ಕೆ ನಮ್ಮ ಇಂದಿನ ಸಮಾಜ ಸಾಕ್ಷಿಯಾಗಿದೆ. ಆರೋಗ್ಯಕರವಲ್ಲದ ಆಹಾರ ಪದ್ಧತಿ, ವಾತಾವರಣದಲ್ಲಿನ ಏರುಪೇರು ಮುಂತಾದ ಅಂಶಗಳು ಮನುಷ್ಯನ ಆರೋಗ್ಯ ಮತ್ತು ನೆಮ್ಮದಿಯನ್ನೇ ಕಸಿದುಕೊಳ್ಳುತ್ತಿವೆ. ಮತ್ತೊಂದೆಡೆ, ಮನೆಯಲ್ಲಿ ಅಷ್ಟೈಶ್ವರ್ಯಗಳು ತುಂಬಿತುಳುಕುತ್ತಿದ್ದರೂ ಮಾನಸಿಕ ನೆಮ್ಮದಿಯೇ ದುಸ್ತರವಾಗಿರುವ ಕುಟುಂಬಗಳು ಸಾಕಷ್ಟಿವೆ; ಕೂಲಿ-ನಾಲಿ ಮಾಡಿಕೊಂಡು ಬದುಕುವವರ ಮನೆಯಲ್ಲಿ ಕಾಣಬರುವ ನೆಮ್ಮದಿ-ಸಂತೃಪ್ತಿಗಳೂ ಶ್ರೀಮಂತರ ಮನೆಯಲ್ಲಿ ಕಾಣಸಿಗದಿರುವಂಥ ಉದಾಹರಣೆಗಳು ಸಾಕಷ್ಟಿವೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ 'ದುಡ್ಡಿನ ಸಂಪಾದನೆ' ಎಂಬುದು ಮಿಕ್ಕೆಲ್ಲ ಆದರ್ಶಗಳನ್ನು ಮೂಲೆಗುಂಪಾಗಿಸಿದೆ. ವಿದ್ಯೆ ಪಡೆಯುವುದೇ ಸಂಪತ್ತನ್ನು ಒಟ್ಟುಮಾಡಲು ಎಂಬಲ್ಲಿಯವರೆಗೆ ಆಧುನಿಕ ಶಿಕ್ಷಣ ಪದ್ಧತಿ ತಲುಪಿದೆ. ದುಡ್ಡಿನ ಸಂಪಾದನೆ ಎಂಬುದು ಮನುಷ್ಯನ ಅವಶ್ಯಕತೆಗೆ ಅಥವಾ ಜೀವನ ನಿರ್ವಹಣೆಗೆ ಸಾಲುವಷ್ಟಿದ್ದರೆ ಸಾಕು ನೆಮ್ಮದಿಯಿಂದ ದಿನದೂಡಬಹುದು ಎಂಬ ಸರಳ ಸತ್ಯವನ್ನು ಯಾರೂ ಅರ್ಥಮಾಡಿಕೊಳ್ಳುತ್ತಿಲ್ಲ ಅಥವಾ ಅರ್ಥವಾಗಿದ್ದರೂ ಅದನ್ನು ಅನುಸರಿಸುತ್ತಿಲ್ಲ.

ಬದುಕಿನಲ್ಲಿನ ಸಾಧನೆಗೆ ಬಡತನ, ಸವಾಲು, ಅವಮಾನ, ಛಲ ಮುಂತಾದ ಅಂಶಗಳನ್ನೇ ಮೆಟ್ಟಿಲುಗಳಾಗಿಸಿಕೊಂಡ ಮಹಾನುಭಾವರು ನಮ್ಮ ಸಮಾಜದಲ್ಲಿ ಸಾಕಷ್ಟಿದ್ದಾರೆ. ಅವರ ಯಶೋಗಾಥೆಗಳನ್ನು ಒಮ್ಮೆ ಕೂಲಂಕಷವಾಗಿ ಅವಲೋಕಿಸಿದರೆ, ಅದರ ನೇಪಥ್ಯದಲ್ಲಿರುವ ಬದ್ಧತೆ, ಪರಿಶ್ರಮ, ಪ್ರಾಮಾಣಿಕತೆ ಮುಂತಾದ ಸಕಾರಾತ್ಮಕ ಅಂಶಗಳು ಅರ್ಥವಾದಾವು. ಇಂಥ ಮಹತ್ತರ ಅಂಶಗಳ ಪರಿಕಲ್ಪನೆಯನ್ನೂ, ಯಂತ್ರಗಳನ್ನೂ, ತಂತ್ರಜ್ಞಾನವನ್ನೂ ಕಟ್ಟಿಕೊಟ್ಟವರು ಮನುಷ್ಯರೇ. ಆದರೆ ಯಾವುದನ್ನು ಎಷ್ಟು ಪ್ರಮಾಣದಲ್ಲಿ ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುತ್ತೇವೆ ಎಂಬುದರಲ್ಲಿ ನಮ್ಮ ವಿವೇಚನೆ ಅಡಗಿದೆ. ಬದುಕನ್ನು ಸರಿಯಾದ ಹಾದಿಯಲ್ಲಿ ಮುನ್ನಡೆಸುವಂತಾಗಲು ಇಂಥ ವಿವೇಚನೆಯನ್ನು ಕೆನೆಗಟ್ಟಿಸಿಕೊಳ್ಳುವುದು ನಮ್ಮೆಲ್ಲರ ಆದ್ಯತೆಯಾಗಲಿ.

(ಲೇಖಕರು ಹವ್ಯಾಸಿ ಬರಹಗಾರರು)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಈಕೆ ಮಾದರಿಯಾಗಲಿ

'ಈ ಬಾರಿಯ ಚುನಾವಣೆಯಲ್ಲಿ ನಾನು ಗೆದ್ದರೆ ಅಲ್ಲಿ ರಸ್ತೆ ಮಾಡಿಸುತ್ತೇನೆ, ಇಲ್ಲಿ ಕಾಲುವೆ ತೋಡಿಸುತ್ತೇನೆ' ಎಂಬಂಥ ಹಲವು ಆಶ್ವಾಸನೆಗಳನ್ನು ಅಭ್ಯರ್ಥಿಗಳು ಪ್ರಚಾರ ಭಾಷಣದಲ್ಲಿ ನೀಡುವುದು ಸಾಮಾನ್ಯ. ಆದರೆ, ಗೆದ್ದ ನಂತರ ಬಹುತೇಕರು ಇಂಥ ಕ್ರಮಕ್ಕೆ ಮುಂದಾಗುವುದಿಲ್ಲ, ಕ್ಷೇತ್ರವೀಕ್ಷಣೆಯನ್ನೂ ಮರೆತುಬಿಡುತ್ತಾರೆ ಎಂಬುದು ವಾಸ್ತವ. ಪಂಜಾಬ್‌ನ ಆಮ್ ಆದ್ಮಿ ಪಕ್ಷದ ಶಾಸಕಿ ಅನ್‌ಮೋಲ್ ಗಗನ್ ಮಾನ್ ಅವರು ಕೂಡ, 'ನಾನು ಚುನಾಯಿತಳಾಗಿ ನಮ್ಮ ಪಕ್ಷವು ಸರಕಾರ ರಚಿಸಿದರೆ, ರೈತರ ಬೇಡಿಕೆಯನ್ನು ಈಡೇರಿಸುವೆ' ಎಂದು ಭರವಸೆ ನೀಡಿದ್ದರಂತೆ. ಆದರೆ ಇಷ್ಟು ಕಾಲ ಕಳೆದರೂ ಅದು ಕಾರ್ಯಗತವಾಗದಿದ್ದುದಕ್ಕೆ ಅವರು ಬೇಸರಗೊಂಡು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಅವರು ಪಕ್ಷಾಂತರ ಮಾಡದೆ ರಾಜಕೀಯವನ್ನೇ ತೊರೆಯಲು ನಿರ್ಧರಿಸಿರುವುದು ಒಂದು ವಿಸ್ಮಯ. ಶಾಸಕರು ಹೀಗೆ ಜವಾಬ್ದಾರಿ ಹೊತ್ತು ಕ್ರಮಕ್ಕೆ ಮುಂದಾದರೆ, ಶಾಸಕರ ಸಂಖ್ಯೆ ಕುಸಿದು ಸರಕಾರವೇ ಪತನವಾಗುತ್ತದೆ ಎಂಬ ಗಾಬರಿಯಿಂದ ಸಚಿವರು, ಮುಖ್ಯಮಂತ್ರಿಗಳು ಪ್ರತಿ ಕ್ಷೇತ್ರದ ಅಭಿವೃದ್ಧಿಯತ್ತ ಗಮನಕೊಡಲು ಸಾಧ್ಯವಿದೆ. ಜನಪರ ಕಾಳಜಿಯುಳ್ಳ ಆಮ್ ಆದ್ಮಿ ಶಾಸಕಿಯ ಈ ನಡೆ ದೇಶದೆಲ್ಲೆಡೆಯ ಮಿಕ್ಕ ಶಾಸಕರಿಗೂ ಮಾದರಿಯಾಗಲಿ.

– ಸತ್ಯಬೋಧ, ಬೆಂಗಳೂರು

ಸುಣ್ಣ-ಬೆಣ್ಣೆ ಆರೋಪ

ಅನುದಾನ ಹಂಚಿಕೆಯಲ್ಲಿ ಕಾಂಗ್ರೆಸ್ ಶಾಸಕರಿರುವ ಕ್ಷೇತ್ರಗಳಿಗೆ ಬೆಣ್ಣೆ ನೀಡಿದರೆ, ಬಿಜೆಪಿಯ ಶಾಸಕರಿರುವ ಕ್ಷೇತ್ರಗಳಿಗೆ ಸುಣ್ಣ ನೀಡಲಾಗಿದೆ ಎಂಬ ಆರೋಪ ಭಾರಿ ಸದ್ದು ಮಾಡುತ್ತಿದೆ. ವಾಸ್ತವದಲ್ಲಿ ಇದೇನೂ ಹೊಸ ಬೆಳವಣಿಗೆಯಲ್ಲ. ಬಿಜೆಪಿ ಅಧಿಕಾರದಲ್ಲಿರುವಾಗ ಕಾಂಗ್ರೆಸ್ ಇಂಥದೇ ಆರೋಪವನ್ನು ಮಾಡಿತ್ತು. ಪಕ್ಷ ಪದ್ಧತಿಯ ರಾಜಕೀಯ ವ್ಯವಸ್ಥೆ ಇರುವವರೆಗೆ, ಇಂಥ ಆರೋಪಗಳಲ್ಲಿ ಹುರುಳಿದ್ದರೂ ಏನೂ ಮಾಡಲಾಗದ ಅಸಹಾಯಕತೆ ತಲೆದೋರುತ್ತದೆ.

– ರಮಾನಂದ ಶರ್ಮಾ, ಬೆಂಗಳೂರು

ಆತ್ಮಾವಲೋಕನ ಆಗಲಿ

'ಇದೇ ಅಂತರಂಗ ಸುದ್ದಿ' ಅಂಕಣದಲ್ಲಿ (ಜು.20) ಪ್ರಕಟವಾದ 'ಸರಕಾರಿ ಕಚೇರಿಗಳಲ್ಲಿ ನನ್ನ ಫೋಟೋ ಬೇಡ ಎಂದ ಸೆನೆಗಲ್ ಅಧ್ಯಕ್ಷರು' ಶೀರ್ಷಿಕೆಯ ಬರಹವು, ಅಧಿಕಾರಸ್ಥರೆಲ್ಲಾ ಒಮ್ಮೆ ಆತ್ಮಾವಲೋಕನ ಮಾಡಿಕೊಳ್ಳುವಂತಿದೆ. ಇಂದು ಅಧಿಕಾರದಲ್ಲಿರುವವರು



ಪ್ರೋಟೋಕಾಲ್ ಹೆಸರಿನಲ್ಲಿ ಹೋದಲ್ಲಿ-ಬಂದಲ್ಲಿ ತಮ್ಮ ಹೆಸರು, ಫೋಟೋ ಬರಲೇಬೇಕು ಎಂದು ತಾಕೀತು ಮಾಡುತ್ತಿರುವಾಗ, ಈ ಸಂದೇಶ ನಿಜಕ್ಕೂ ಅರ್ಥವತ್ತಾದದ್ದು. ಸೆನೆಗಲ್ ಅಧ್ಯಕ್ಷರದ್ದು ನಿಜವಾದ ನಾಯಕತ್ವ. ಮೊದಲು ನಮ್ಮನ್ನು ನಾವು ಅರಿಯಬೇಕು. ನಾವೇನು ಹೇಳುತ್ತಿದ್ದೇವೋ ಅದರಂತೆ ನಡೆದುಕೊಳ್ಳುತ್ತಿದ್ದೇವೆಯೇ ಎಂಬುದು ಸ್ಪಷ್ಟವಿರಬೇಕು. ಮಾತನಾಡಿದಂತೆ ಮಾಡಿ ತೋರಿಸುವ ಛಲ, ಮನೋಧರ್ಮ ಇದ್ದರೇನೇ ಮಾತಿಗೊಂದು ಅರ್ಥ.

ಸೆನೆಗಲ್ ಅಧ್ಯಕ್ಷರ ಈ ಮಾತು ಇಂದಿನ ನಮ್ಮ ಆಳುಗರ ಮೇಲೆ ಸ್ವಲ್ಪವಾದರೂ ಪರಿಣಾಮ ಬೀರುವಂತಾಗಲಿ ಎಂದು ಆಶಿಸೋಣವೇ?

– ಶಂಕರನಾರಾಯಣ ಭಟ್, ಮಾಡಗೇರಿ

ನಿರೀಕ್ಷೆ ಸತ್ಯವಾಗಲಿ

56 ವರ್ಷದ ಹಿಂದೆ ನಡೆದ ಬ್ಯಾಂಕ್ ರಾಷ್ಟ್ರೀಕರಣದ ಕುರಿತು ರಮಾನಂದ ಶರ್ಮ ಮೆಲುಕುಹಾಕಿದ್ದಾರೆ (ಜು.18). ದೇಶವೊಂದರ ಆರ್ಥಿಕ ವ್ಯವಸ್ಥೆ ಸದೃಢವಾಗಿರುವ ನಿಟ್ಟಿನಲ್ಲಿ ಬ್ಯಾಂಕು ಮತ್ತು ಇತರ ಹಣಕಾಸು ಸಂಸ್ಥೆಗಳು ಮಹತ್ವದ ಪಾತ್ರ ವಹಿಸುತ್ತವೆ. ದೈನಂದಿನ ಹಣಕಾಸು ವ್ಯವಹಾರದಲ್ಲಿನ ಪಾರದರ್ಶಕತೆಯು, ಆಯಾ ದೇಶ ಮತ್ತು ಪ್ರದೇಶಗಳ ಶ್ರೀಮಂತಿಕೆಯನ್ನು ತೋರುತ್ತದೆ.

ಹೌದು, ದೇಶದಲ್ಲಿ 1969ರ ಜುಲೈನಲ್ಲಿ 14 ಬ್ಯಾಂಕುಗಳ ರಾಷ್ಟ್ರೀಕರಣವಾದ ನಂತರ, 1980ರಲ್ಲಿ ನಡೆದ 6 ಬ್ಯಾಂಕುಗಳ ರಾಷ್ಟ್ರೀಕರಣವು ನಿರೀಕ್ಷಿತ ಮತ್ತು ಉತ್ತಮ ಫಲಿತಾಂಶವನ್ನು ನೀಡಿದೆ. ಬ್ಯಾಂಕಿಂಗ್ ಸೇವೆಯಿರದ ಕ್ಷೇತ್ರ/ವಲಯಗಳಿಗೆ ನೂತನ ಶಾಖೆಗಳ ಆಗಮನವಾಗಿ, ಇಡೀ ದೇಶದಲ್ಲಿ ಬ್ಯಾಂಕ್ ವ್ಯವಹಾರ ಹಬ್ಬಿದೆ ಮತ್ತು ಇದೊಂದು ಸೇವಾಕ್ಷೇತ್ರ ಎಂಬುದು ಮತ್ತಷ್ಟು ನಿಜವಾಗಿದೆ.

ಇನ್ನು, ರಾಷ್ಟ್ರೀಕರಣಗೊಂಡ ಅಥವಾ ರಾಷ್ಟ್ರೀಕರಣಗೊಳ್ಳದ ಬ್ಯಾಂಕುಗಳು (ಹಳೆಯ ತಲೆಮಾರಿನವೂ ಸೇರಿ) ಇವತ್ತಿಗೂ ಗ್ರಾಹಕರ ಬೇಕು-ಬೇಡಗಳನ್ನು ಪೂರೈಸುತ್ತಿರುವುದು ಒಳ್ಳೆಯ ಬೆಳವಣಿಗೆ. ಕಳೆದ 25-30 ವರ್ಷಗಳಿಂದ ಹೊಸ ಪೀಳಿಗೆಯ ಕೆಲ ಬ್ಯಾಂಕುಗಳು (ಖಾಸಗಿ) ಕೂಡ ಹುಟ್ಟಿ, ದೇಶದಲ್ಲಿನ ಒಟ್ಟು ಬ್ಯಾಂಕುಗಳ ಮತ್ತು ಅವುಗಳ ಶಾಖೆಗಳ ಸಂಖ್ಯೆಯು ಗಣನೀಯ ಪ್ರಮಾಣದಲ್ಲಿ ವೃದ್ಧಿಯಾಗಿರುವುದು ನಾವು ನೋಡುವ ಸಂಗತಿ. ಕಳೆದ ಒಂದು ದಶಕದಲ್ಲಿ ಈ ವ್ಯವಸ್ಥೆಯು ಮತ್ತಷ್ಟು ಪಾರದರ್ಶಕವಾಗಿದೆ, ಹಣ ವರ್ಗಾವಣೆ ಅತ್ಯಂತ ಸುಲಭವಾಗಿದೆ, ನಗದು ವ್ಯವಹಾರ ತೀರಾ ಕಡಿಮೆಯಾಗಿದೆ.

ಇನ್ನು, ಇತ್ತೀಚಿನ ವರ್ಷಗಳಲ್ಲಿ ಬ್ಯಾಂಕುಗಳು ತಮ್ಮ ಲಾಭಗಳಿಕೆಯ ಪ್ರಮಾಣ ಹೆಚ್ಚಿಸಲು, ತಾವು ನೀಡುವ ಸಾಲದ ಬಡ್ಡಿಯ ಮೇಲಷ್ಟೇ ಅವಲಂಬಿತವಾಗದೆ, ವಿಮಾ ಕ್ಷೇತ್ರ (ಜೀವವಿಮೆ ಮತ್ತು ವಾಹನ ವಿಮೆ), ಉಳಿತಾಯ ಮತ್ತು ಹೂಡಿಕೆ ಕ್ಷೇತ್ರ ಮುಂತಾದವುಗಳಲ್ಲಿ ತಮ್ಮ ವ್ಯವಹಾರ ವ್ಯಾಪ್ತಿಯನ್ನು ಬೆಳೆಸಿಕೊಂಡಿವೆ. ಇವುಗಳ ಮೂಲಕ 'ಬಡ್ಡಿಯಲ್ಲದ ಆದಾಯ'ವನ್ನು ಗಳಿಸುವ ಧ್ಯೇಯವನ್ನು ಹೊಂದಿವೆ. ಇದಕ್ಕೆ ಜಾಸ್ತಿ ಒತ್ತು ನೀಡಲಾಗುತ್ತಿದೆ. ಈ ಬಾಬತ್ತುಗಳಲ್ಲಿ ಹಣವನ್ನು ತೊಡಗಿಸುವಂತೆ ಒತ್ತಾಯ ಮಾಡಿದರೆ ಗ್ರಾಹಕರು ಅಂಥ ಬ್ಯಾಂಕುಗಳಿಂದ ದೂರ ಹೋಗುವ ಸಾಧ್ಯತೆ ಹೆಚ್ಚು. ಅದರಿಂದ ನಷ್ಟವಾಗುವುದು ಬ್ಯಾಂಕುಗಳಿಗೇ.

ಲಾಭ ಮಾಡುವ ಉದ್ದೇಶ ಸರಿಯಿದ್ದರೂ, ಅದಕ್ಕೆ ಬಳಸುವ ದಾರಿ ಸರಿಯಿಲ್ಲ. ಆರ್‌ಬಿಐ ಕಡೆಯಿಂದ ಬ್ಯಾಂಕು ಪಡೆದ ಮೂಲ ಪರವಾನಗಿಯು ಬ್ಯಾಂಕಿಂಗ್ ವ್ಯವಹಾರಕ್ಕೆ ಮಾತ್ರ ಸೀಮಿತ. ಈ ಸಂಗತಿಯನ್ನು ಅರಿತು, ಅದಕ್ಕೆ ಧಕ್ಕೆ ಬಾರದ ರೀತಿಯಲ್ಲಿ, ಬ್ಯಾಂಕಿಂಗೇತರ ಚಟುವಟಿಕೆಗಳಿಗೆ ತಕ್ಷಣ ವಿರಾಮ ಕೊಟ್ಟು, ಗ್ರಾಹಕರ ನಿಜವಾದ ಸೇವೆಗೆ ಆದ್ಯತೆ ನೀಡಿದಲ್ಲಿ ಬ್ಯಾಂಕುಗಳು ಇನ್ನಷ್ಟು 'ಗ್ರಾಹಕಸ್ನೇಹಿ'ಯಾಗಿ ಬೆಳೆಯಲು-ಉಳಿಯಲು ಸಾಧ್ಯ. ಈ ನಿರೀಕ್ಷೆ ಸತ್ಯವಾಗಲಿ.

– ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಓದುಗರ ಒಣಿಗೆ ಭೇಟಿ ಕೊಡಿ

ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

- **ಬಸವರಾಜ ಡಂಬಳ, ಬೆಳಗಾವಿ**
ಭಟ್ರೇ, ದೇವರು ಒಂದರ ಮೇಲೆ ಒಂದು ಕೊಡ್ತಾನೆ ಅಂತಾರಲ್ಲ, ಹಾಗಂದ್ರೆ ಏನು?
– **ಹೂಂ.. ಬಿಯರ್ ಕ್ರೇಟರ್‌ನಲ್ಲಿ ಹನ್ನೆರಡು ಬಾಟಲಿಗಳಿರುತ್ತದಲ್ಲ, ಅದಕ್ಕೆ ಹಾಗಂತಾರೆ!**

- **ಚೆನ್ನಕೇಶವಿ ಪಿರಾಡೆ, ತುಮಕೂರು**
ಭಟ್ರೇ, ಲೆಟ್ಸ್ ಹ್ಯಾವ್ ಆ ವೈನ್ ಟುಗೆದರ್ ಅಂತ ನನ್ನ ಸ್ನೇಹಿತ ಹೇಳ್ತಾನಲ್ಲ?
– **ನೀನು ಓಪನ್ ಮಾಡು, ನಾನು ಕುಡೀತೀನಿ ಅಂತ ಅರ್ಥ!**

- **ರೂಪಶ್ರೀ, (ಇಮೇಲ್ ಮೂಲಕ)**
ಭಟ್ರೇ, ಇಂದು ರೂಮನ್ನು ಕ್ಲೀನ್ ಮಾಡಿದೆ ಅಂದ್ರೆ, ಆ ಮಾತಿಗೆ ಬೇರೆ ಅರ್ಥ ಇದೆಯಾ?
– **ಬಾಗಿಲಿನಿಂದ ಮಂಚದ ತನಕ ದಾರಿ ಮಾಡಿದೆ ಎಂದರ್ಥ!**

- **ಗುರುಪಾದ ಕೆ., ಬೆಂಗಳೂರು**
ಭಟ್ರೇ, ನಮ್ಮ ವೈರಿಗಳಿಗೆ ಹೊಡೆಯದೇ ಹೇಗೆ ಬಾರಿಸಬೇಕು?
– **ಅವರ ಮೊಬೈಲ್ ನಂಬರನ್ನು ಹತ್ತು ಗ್ರೂಪ್‌ನಲ್ಲಿ ಶೇರ್ ಮಾಡಿ, 'ಉಚಿತ ಪ್ಲಬಿಂಗ್‌ಗೆ ಸಂಪರ್ಕಿಸಿ' ಎಂದು ಬರೆಯಬೇಕು!**

- **ರತ್ನಾಕರ ಶೇಟ್, ಶಿವಮೊಗ್ಗ**
ಭಟ್ರೇ, ಮನೆಯ ಎಲ್ಲ ಬಾತ್ ರೂಮ್ ಬಾಗಿಲು ಅರ್ಧ ಗಂಟೆಯಿಂದ ಮುಚ್ಚಿದ್ದರೆ ಏನು ಮಾಡಬೇಕು?
– **ವೈಫೈ ಆಫ್ ಮಾಡಬೇಕು!**

- **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಆರ್‌ಸಿಬಿ ವಿಜಯೋತ್ಸವ ಆಚರಿಸಿದ ಸರಕಾರ ಹೆಮ್ಮೆಯ ಸಿಗಂದೂರು ಸೇತುವೆ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿಲ್ವಲ್ಲಾ?
– **ಕಾಲ್ತುಳಿತವಾಗಬಹುದು ಅಂತ ಯಾರಾದರೂ ಹೆದರಿಸಿರಬಹುದು ಅಂತೀರಾ?!**

- **ವೇದಾ, ಡಾಲರ್ಸ್ ಕಾಲೋನಿ**
ಭಟ್ರೇ, ನನ್ನನ್ನು ಮದುವೆಯಾಗಲು ಬರುವ ಹುಡುಗರೆಲ್ಲ ಹೆಚ್ಚಿನ ಸಮಯ ಕೇಳಲು ಕಾರಣ ಏನಿರಬಹುದು?
– **ವೇದಾಧ್ಯಯನ!**

- **ರಂಗರಾಮಾನುಜ, ಮೇಲುಕೋಟೆ**
ಭಟ್ರೇ, ಹೆಸರಿಗೆ ತಕ್ಕಂತೆ ಮುಖಭಾವ ಪ್ರದರ್ಶಿಸುತ್ತಿರುವ ಒಬ್ಬ ರಾಜಕಾರಣಿ ನಮ್ಮೊಂದಿಗೆ ಇದ್ದಾರೆಂದು ನಿಮಗನಿಸುತ್ತಾ?
– **ನೀನು ಇಷ್ಟು ಬೇಗ ಸದಾನಂದ ಗೌಡರನ್ನು ಮರೆಯಬಾರದಿತ್ತು!**

- **ಗಿಡ್ಡ ಗೋಪಾಲ, ಶ್ರೀರಂಗಪಟ್ಟಣ**
ಭಟ್ರೇ, ಭಾರತಕ್ಕೆ ಭೇಟಿ ಕೊಡುವ ಅಮೆರಿಕ ಅಧ್ಯಕ್ಷರೆಲ್ಲ ಪಕ್ಕದ ಪಾಕಿಸ್ತಾನಕ್ಕೂ ಏಕೆ ಹೋಗಿಬರುತ್ತಾರೆ?
– **ಬದರಿನಾಥಕ್ಕೆ ಹೋಗುವವರೆಲ್ಲ ಕೇದಾರನಾಥಕ್ಕೆ ಯಾಕೆ ಹೋಗುತ್ತಾರೆ ಅಂತ ಮೊದಲು ಹೇಳು!**

ಅಲ್ಲೂ, ಇಲ್ಲೂ, ಎಲ್ಲೆಲ್ಲೂ ಸಲ್ಲುವ ಸೈಕಲ್

ನೆದರ್‌ಲ್ಯಾಂಡ್, ಜರ್ಮನಿ, ಡೆನ್ಮಾರ್ಕ್, ಅಮೆರಿಕ ಮೊದಲಾದ ದೇಶಗಳು ಸೈಕಲ್ ಬಳಸುವುದನ್ನು ಹೆಚ್ಚು ಪ್ರೋತ್ಸಾಹಿಸುತ್ತವೆ. ಅನೇಕ ಮುಂದುವರಿದ ದೇಶಗಳಲ್ಲಿ ಕಚೇರಿಗೆ ಹೋಗಲು ಕಾರು, ಬಸ್ಸಿನ ಬದಲು ಸೈಕಲ್‌ನಲ್ಲಿ ಹೋಗುತ್ತಾರೆ. ಕೆಲಸ ಮಾಡುವ ಸ್ಥಳ ನಾಲ್ಕರಿಂದ ಎಂಟು ಕಿಲೋಮೀಟರ್ ದೂರದಲ್ಲಿದ್ದರೆ ಶೇಕಡಾ ಇಪ್ಪತ್ತರಿಂದ ಎಪ್ಪತ್ತರಷ್ಟು ಮಂದಿ ಕಚೇರಿಗೆ ಹೋಗಿ ಬರಲು ಸೈಕಲ್ ಬಳಸುತ್ತಾರೆ.

ವಿದೇಶವಾಸಿ

ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಬಡವರಿಗೆ ಬಂಧು, ಮಧ್ಯಮ ವರ್ಗದವರಿಗೆ ಸಾರಿಗೆಯ ಮಾಧ್ಯಮ, ಶ್ರೀಮಂತರಿಗೆ ಹವ್ಯಾಸ, ಸೈಕಲ್. ಇಂದಿಗೂ ಕರ್ನಾಟಕದ ಕೆಲವು ಕಡೆಗಳಲ್ಲಿ 'ದಿನವಿಡೀ ಕಷ್ಟಪಡುತ್ತಾನೆ' ಎನ್ನುವುದಕ್ಕೆ 'ಬೆಳಗಿನಿಂದ ಸಾಯಂಕಾಲದವರೆಗೂ ಸೈಕಲ್ ಹೊಡೆಯುತ್ತಾನೆ' ಎಂದು ಹೇಳುವುದಿದೆ. ಹಾಲು ಮಾರುವವರಿಂದ ಹಿಡಿದು ಮೀನು ಮಾರುವವರವರೆಗೆ, ಮುಂಜಾನೆ ದಿನಪತ್ರಿಕೆ ಹಂಚುವವರಿಂದ ಹಿಡಿದು ಆರೋಗ್ಯ ಕಾಪಾಡಿಕೊಳ್ಳಬೇಕೆಂದು ಬಯಸುವ 'ಫಿಟ್ನೆಸ್ ಫ್ರೀಕ್'ಗಳ ಸಾಯಂಕಾಲದ 'ಬೈಕ್ ರೈಡ್'ವರೆಗೆ ಶತಮಾನದಿಂದ ಜನರ ಜತೆಗಾರ–ಸೈಕಲ್.

ಸೈಕಲ್‌ನ ವಿಶೇಷತೆಯೆಂದರೆ, ಒಮ್ಮೆ ಕಲಿತರೆ ಮುಗಿಯಿತು, ಜೀವನಪೂರ್ತಿ ನೆನಪಿರುವ ವಿದ್ಯೆ ಅದು.It is one time investment (ಈ ಪಟ್ಟಿಗೆ ಈಜುವುದನ್ನೂ ಸೇರಿಸಿಕೊಳ್ಳಬಹುದು). ಸೈಕಲ್ ತುಳಿಯುವುದು ಬಿಟ್ಟು ದಶಕಗಳೇ ಕಳೆದಿರಲಿ, ಕಲಿಯುವಾಗ ಇದ್ದ 25 ಕಿಲೋ ದೇಹದ ತೂಕಕ್ಕೆ ಇನ್ನೂ ನೂರು ಸೇರಿ 125 ಕಿಲೋ ತೂಕದ ಶರೀರವೇ ಆಗಲಿ, ಸೈಕಲ್ ತಾರತಮ್ಯ ತೋರಿಸುವುದಿಲ್ಲ. ಒಮ್ಮೆ ಸೈಕಲ್ ಮೇಲೆ ನಮ್ಮ ದೇಹದ ಸಮತೋಲನ ಕಾಪಾಡಿಕೊಳ್ಳುವುದನ್ನು (ಬ್ಯಾಲೆನ್ಸಿಂಗ್) ಕಲಿತರೆ ಅದು ಜೀವನ ಪರ್ಯಂತ.

ಎಪ್ಪತ್ತು–ಎಂಬತ್ತರ ದಶಕದಲ್ಲಿ ಶಾಲೆಗೆ ಹೋಗುತ್ತಿದ್ದ ಮಕ್ಕಳಲ್ಲಿ ಬಹುತೇಕ ಎಲ್ಲರ ಕಣ್ಣಿಗೂ ಸಾಮಾನ್ಯವಾಗಿ ಕಾಣುತ್ತಿದ್ದುದು ಸೈಕಲ್. ಕೆಲವೊಮ್ಮೆ ಮಕ್ಕಳು ಬೆರಗುಗಣ್ಣಿನಿಂದ ನೋಡುತ್ತಿದ್ದ ದ್ವಿಚಕ್ರ ವಾಹನವೂ ಅದೇ ಸೈಕಲ್. ಶಾಲೆಯ ಬಾಗಿಲಲ್ಲಿ ಬಂದು ಐಸ್ ಕ್ಯಾಂಡಿ ಮಾರುವವರಿಗೆ, ಗೋಲಿ ಸೋಡಾ ಮಾರುವವರಿಗಂತೂ ಸಾರಿಗೆಯ ಸಾಧನವೂ ಸೈಕಲ್, ಮಾರುವ ಅಂಗಡಿಯೂ ಸೈಕಲ್. ಆಗಂತೂ ಹಾಲು, ಸೋಡಾ ಬಾಟಲಿ ಮಾರುವವರ ಸೈಕಲ್ ನೋಡುವುದೇ ಒಂದು ಸೋಜಿಗ. ಬಾಟಲಿ ಇಡಲಿಕ್ಕೆಂದೇ ಅವರು ಸೈಕಲ್ ಹಿಂದಿರುವ 'ಕ್ಯಾರಿಯರ್' ಮೇಲೆ ಅಳವಡಿಸಿಕೊಳ್ಳುತ್ತಿದ್ದ 'ಟ್ರೇ', ಕುಳಿತುಕೊಳ್ಳುವ 'ಸೀಟ್' ಮತ್ತು 'ಹ್ಯಾಂಡಲ್' ನಡುವಿನ ಕಂಬಿಯ ಮೇಲೆ ತೂಗಿ ಬಿಡುತ್ತಿದ್ದ ಗೋಣಿ ಪಾಟಿನ ಚೀಲ, ಇವೆಲ್ಲ ಅಂದಿನ ಬಾಲ್ಯದ ಕಂಗಳಿಗೆ ಬೆರಗು.

ಅದರೊಂದಿಗೆ ಕೆಲವರು ಸೈಕಲ್‌ನಲ್ಲಿ ಮಾಡುವ ವಿವಿಧ ಸರ್ಕಸ್, ಕಸರತ್ತುಗಳು ವಿಸ್ಮಯ. ಸೈಕಲ್ ನಡೆಸುವಾಗ ಎರಡೂ ಕೈ ಬಿಟ್ಟರಂತೂ ಮುಗಿಯಿತು, ಅವತ್ತಿಗೆ ಅವರೇ ಹೀರೋಗಳು. 'ನನ್ನ ಪ್ರಿಯತಮ ಕೈ ಬಿಟ್ಟು ಸೈಕಲ್ ನಡೆಸುತ್ತಾನೆ' ಎಂಬುದು ಕೆಲವು ಯುವತಿಯರ ಅಪ್ರಕಟಿತ, ಅಘೋಷಿತ ಬಯೋಡಾಟಾದಲ್ಲಿ ಸೇರಿಕೊಳ್ಳುತ್ತಿತ್ತು. ಕೆಲವೊಮ್ಮೆ ಪ್ರೇಮಪಾಶದಲ್ಲಿ ಸಿಲುಕಿಕೊಳ್ಳಲು ಅದೂ ಒಂದು ಕಾರಣವಾಗುತ್ತಿತ್ತು. ಹಲವಾರು ಯುವಕ ಯುವತಿಯರ ನಡುವೆ ಪ್ರೇಮಾಂಕುರಗೊಳಿಸುವಲ್ಲಿ, ಪ್ರೇಮಬಂಧವನ್ನು ಭದ್ರವಾಗಿಸುವಲ್ಲಿ ಸೈಕಲ್ ಮಹತ್ತರ ಪಾತ್ರವಹಿಸುತ್ತಿತ್ತು. ತನ್ನ ಹುಡುಗಿ ಬರುವ ಹಾದಿಯಲ್ಲಿ ಕಾಯುತ್ತ ಕುಳಿತಿರುವ ಹುಡುಗನ ಜತೆಗಾರನಾಗಿ ಸೈಕಲ್ ನಿಲ್ಲುತ್ತಿತ್ತು. ಸ್ನೇಹಿತರನ್ನು 'ಡಬಲ್ ರೈಡ್', 'ಟ್ರಿಪಲ್ ರೈಡ್' ಮೂಲಕ ಚಿತ್ರಮಂದಿರಕ್ಕೆ ಕೊಂಡೊಯ್ಯುತ್ತಿತ್ತು. ಅದೆಷ್ಟೋ ಲಕ್ಷ ಜನರನ್ನು ಕಚೇರಿಗೆ ತಲುಪಿಸುತ್ತಿತ್ತು. ರೈತರ ಬಾಳೆಗೊನೆಯಾಗಲಿ ಜೋಳದ ತೆನೆಯಾಗಲಿ, ಮಾರುಕಟ್ಟೆಗೆ ಹೊರುತ್ತಿತ್ತು. ಹೊಸದಾದರೆ ಒಳಿತು. ಇಲ್ಲವಾದರೆ, ಚಪ್ಪು ಹತ್ತಿದರೂ ಸರಿ, ಬುಕಣಾ ಎದ್ದರೂ ಸರಿ, ಒಂದು ಸೈಕಲ್ ಇದೆಯೆಂದರೆ ಆತನ ಕಿಮ್ಮತ್ತೇ ಬೇರೆ. ಲೆಕ್ಕವಿಲ್ಲದಷ್ಟು ಪ್ರೇಮದ, ಸ್ನೇಹದ, ಉದ್ಯೋಗದ, ಕೆಲಸದ ಕತೆಗೆ (ಕೆಲಸಕ್ಕೆ ಬಾರದ ಕತೆಗೂ) ಈ ಸೈಕಲ್ ಸಾಕ್ಷಿಯಾಗುತ್ತಿತ್ತು. ಇರಲಿ, ಈಗ ಮೋಟರ್ ಬೈಕ್‌ನಲ್ಲಿ ಮುಂದಿನ ಗಾಲಿಯನ್ನು ಗಾಳಿಗೆ ತೂರಿಕೊಂಡು ಹೋಗುವ 'ವ್ಹೀಲಿ' ಇದೆಯಲ್ಲ, ಆ ಕಸರತ್ತುಗಳೆಲ್ಲ ಸೈಕಲ್‌ನಲ್ಲಿ ಕೆಲವು ದಶಕ ಹಳತು. ಅಂದಹಾಗೆ, ಇಂದಿನ 'ಮೋಟರ್ ಬೈಕ್'ಗೆ ಮೂಲ ಪ್ರೇರಣೆಯೂ ಅದೇ ಸೈಕಲ್.

ಶಾಲಾ ದಿನಗಳಲ್ಲಿ ನಮ್ಮ ಮನೆಯ ಹತ್ತಿರ 'ಮಾರ್ಷಲ್' ಎಂಬ ಹೆಸರಿನವರು ಸುಮಾರು ಹತ್ತು ಸೈಕಲ್ ಬಾಡಿಗೆಗೆ ಇಟ್ಟಿದ್ದರು. ಅದರಲ್ಲಿ ಎರಡು ವಿಧದ ಸೈಕಲ್ ಇದ್ದವು. ಒಂದು, ಯಾವುದೇ ಅಲಂಕಾರ, ಹಿಂದೆ ಕ್ಯಾರಿಯರ್ ಮುಂದೆ ಡೈನಮೋ, ಸೀಟ್‌ಗೆ ಕವರ್ ಇಲ್ಲದ, ಕೊನೆ ಪಕ್ಷ ಬಾರಿಸಲು ಬೆಲ್ ಕೂಡ ಇಲ್ಲದ ಹಳೆಯ ಬೋಳು ಸೈಕಲ್. ಅದಕ್ಕೆ ತಾಸಿಗೆ ಐದು ರುಪಾಯಿ ಬಾಡಿಗೆ. ಇನ್ನೊಂದು, ಕ್ಯಾರಿಯರ್, ಡೈನಮೋ ಜತೆಗೆ, ಸ್ಪಂಜ್ ಇರುವ ಕುಶನ್ ಹಾಕಿದ ಸೀಟ್, ಬೆಲ್, ಹ್ಯಾಂಡಲ್‌ಗೆ ನೇತು ಬಿದ್ದ ಬಣ್ಣದ ರಿಬ್ಬನ್, ಪೆಡಲ್ ಮತ್ತು ಗಾಲಿಗೆ ಜೋಡಿಸಿದ ಹೊಳೆಯುವ ರಿಫ್ಲೆಕ್ಟರ್, ಇತ್ಯಾದಿ, ಇತ್ಯಾದಿ ಇರುವ ಹೊಸ ಸೈಕಲ್. ಅದಕ್ಕೆ ಹತ್ತು ರುಪಾಯಿ ಬಾಡಿಗೆ. ಮನೆಯಲ್ಲಿ ಕಿಸೆ ಖರ್ಚಿಗೆ ಎಂದು ಕೊಟ್ಟ ಸಣ್ಣ ಹಣ, ಕಾಡಿ–ಬೇಡಿ ಪಡೆದ ದುಡ್ಡು, ಅಜ್ಜ–ಅಜ್ಜಿ ಕೊಟ್ಟ ಭಕ್ಷೀಸು ಎಲ್ಲವೂ ಹೆಚ್ಚಾಗಿ ಹೋಗಿ ಸೇರುತ್ತಿದ್ದುದು ಅದೇ ಮಾರ್ಷಲ್‌ನ ಅಂಗಡಿಗೆ. ಅದು ತಾಸಿಗೆ ಐದು ರುಪಾಯಿ ಬಾಡಿಗೆಯ ಸೈಕಲ್‌ಗೆ ಎಂದು ಬೇರೆ ಹೇಳಬೇಕಿಲ್ಲವಲ್ಲ. ಸೈಕಲ್ ಕಲಿಯುವ ಮಕ್ಕಳಿಗೆ ಎಂದರೆ ಮಾರ್ಷಲ್ ಹೊಸ ಸೈಕಲ್ ಕೊಡುತ್ತಲೂ ಇರಲಿಲ್ಲ ಬಿಡಿ. ಆದರೂ ಐದು ರುಪಾಯಿಯಲ್ಲಿಯೇ ಒಳ ಪೆಡಲ್ (ಕತ್ರಿ) ತುಳಿದೇ ರಾಜ ದರ್ಬಾರ್ ಮೆರೆಯುತ್ತಿದ್ದೆವು. ಅದಕ್ಕೂ ಗತಿಯಿಲ್ಲವೆಂದರೆ ಹಳೆಯ ಚಕ್ರವನ್ನೇ ಉರುಳಿಸಿ, ಹಿಂದಿನಿಂದ ಪೆಟ್ಟುಕೊಡುತ್ತಾ ಓಡುತ್ತಿದ್ದೆವು. ಕ್ರಮೇಣ ಮೋಟರ್ ಬೈಕ್‌ಗಳು ಮಾರುಕಟ್ಟೆಗೆ ಬಂದು ಜನಪ್ರಿಯವಾಗತೊಡಗಿದವು. ಕೆಂಪು ಬಣ್ಣದ ರಾಜದೂತ್ ಬೈಕ್‌ಗಳು ಸೈಕಲ್ ಜಾಗವನ್ನು ಆಕ್ರಮಿಸಿಕೊಂಡವು.

ಇಂದಿನ ಯುವ ಪೀಳಿಗೆ ಅದೆಷ್ಟೋ ವಿಷಯಗಳಲ್ಲಿ 'ನಾವು ಅನುಭವಿಸಿದಷ್ಟು ಅವರು ಅನುಭವಿಸಲಿಲ್ಲ' ಎಂದು ಹೇಳುವುದಿದೆ. ಎಷ್ಟೋ ವಿಷಯಗಳಲ್ಲಿ ಅದು ನಿಜ. ಬಾಡಿಗೆ ಸೈಕಲ್, ಮೋಟರ್ ಸೈಕಲ್‌ಗಳ ಅಂಗಡಿಗಳು ಮುಚ್ಚಿ ಹೋಗಿವೆ. ಕೆಲವು ವಸ್ತುಗಳು, ವಿಷಯಗಳು, ಆಟಗಳು ನಮ್ಮ ಕಾಲಘಟ್ಟದಲ್ಲಿ ಆಗಿ ಅಂದಿಗೇ ಮುಗಿದು ಹೋದವು ಎಂಬುದೂ ಸತ್ಯ. ಲಗೋರಿ, ಡಬಾಂಡುಬಿಯಂಥ ಆಟಗಳು ಕೇವಲ ನಾಮಾವಶೇಷಗಳಾಗಿ ಉಳಿದುಕೊಂಡಿವೆ. ಅದೃಷ್ಟವಶಾತ್, ಕಾರಣ ಏನೇ ಇದ್ದರೂ ಇಂದಿನ ಪೀಳಿಗೆಯವರೂ ಸೈಕಲ್ ಇಷ್ಟಪಡುತ್ತಾರೆ ಎನ್ನುವುದು ಸಮಾಧಾನದ ಸಂಗತಿ. ಹೊಸ ಆವಿಷ್ಕಾರಗಳೊಂದಿಗೆ ನೂತನ ವಿನ್ಯಾಸದೊಂದಿಗೆ ಸೈಕಲ್ ಕೂಡ ಇಂದಿಗೂ ಮಾರುಕಟ್ಟೆಯಲ್ಲಿ ತನ್ನ ಅಸ್ತಿತ್ವ ಉಳಿಸಿಕೊಂಡಿದೆ.

ಮಜಾ ಎಂದರೆ, ಆ ದಿನಗಳಲ್ಲಿ ಒಂದು ಸೈಕಲ್ ಬೆಲೆ ಒಂದೋ ಎರಡೋ ಸಾವಿರ ರುಪಾಯಿ ಇರುತ್ತಿತ್ತು. ಇಂದು Audi, Lamborghini ಯಂಥ ಕಾರು ತಯಾರಿಸುವ ಸಂಸ್ಥೆಗಳೂ ಸೈಕಲ್ ತಯಾರಿಸುತ್ತಿವೆ. ನೀವು ಒಂದು ಲ್ಯಾಂಬರ್ಗಿನಿ ಸೈಕಲ್ ಕೊಳ್ಳಬೇಕು ಎಂದರೆ ಸುಮಾರು ಮೂವತ್ತು ಸಾವಿರ ಡಾಲರ್ ಎಣಿಸಬೇಕು. ಆ ದಿನಗಳಲ್ಲಿ ಸೈಕಲ್ ಸುಮಾರು ಇಪ್ಪತ್ತು ಕಿಲೋ ತೂಗುತ್ತಿತ್ತು. ಈಗ, ಹೊಸ ಸೈಕಲ್‌ಗಳ ತೂಕ ಹತ್ತು ಕಿಲೋ ಒಳಗೆ. ಲ್ಯಾಂಬರ್ಗಿನಿ ಸೈಕಲ್ ಹೇಳಿದೆನಲ್ಲ, ಅದು ಏಳು ಕಿಲೋಗಿಂತಲೂ ಕಮ್ಮಿ ತೂಕದ್ದು. ಇಂದು ವಿಶ್ವದ ಅತಿ ದುಬಾರಿ ಸೈಕಲ್ ಬೆಲೆ ಸುಮಾರು ಒಂದೂಮುಕ್ಕಾಲು ಮಿಲಿಯನ್ ಡಾಲರ್ ಎಂದು ದಾಖಲಾಗಿದೆ. 'ಅದೇನು ಬಂಗಾರದ್ದಾ? ಅದರಲ್ಲೇನು ವಜ್ರದ ತುಂಡು ಇದೆಯೇ?' ಎಂದು ಕೇಳಬೇಡಿ. ಅದು ಇಪ್ಪತ್ನಾಲ್ಕು ಕ್ಯಾರೆಟ್ ಅಪ್ಪಟ ಬಂಗಾರದ್ದೇ, ಅದರಲ್ಲಿ ವಜ್ರದ ಹರಳುಗಳನ್ನೂ ಸೇರಿಸಿದ್ದಾರೆ. ಅದೂ ಒಂದೆರಡಲ್ಲ, ಬರೋಬ್ಬರಿ ಆರು ನೂರು ಹರಳನ್ನು ಜೋಡಿಸಿದ್ದಾರೆ. ಇದೆಲ್ಲದರೊಂದಿಗೆ ಇಂದಿನ ಬಹುತೇಕ ಸೈಕಲ್‌ಗಳನ್ನು ಮಡಚಿ, ಕಾರಿನ ಡಿಕ್ಕಿಯಲ್ಲಿ ತುಂಬಿಕೊಂಡು ಹೋಗಬಹುದು.

ಆ ದಿನಗಳಲ್ಲಿ ಹೊಗೆ ಉಗುಳುವ ಯಂತ್ರಗಳಿಂದ ಆಗುವ ದುಷ್ಪರಿಣಾಮಗಳ ಬಗ್ಗೆಯಾಗಲಿ, ವಾಯುಮಾಲಿನ್ಯದ ಕುರಿತಾಗಲಿ ಹೆಚ್ಚಿನ ಮಾಹಿತಿಯಂತೂ ಇರಲಿಲ್ಲ. ಆಗ ಮಾಲಿನ್ಯ ಈ ಪ್ರಮಾಣದಲ್ಲಿ ಇರಲೂ ಇಲ್ಲ ಬಿಡಿ. ಈಗ ತಿಳಿದ ಮೇಲೂ ನಾವು ಎಷ್ಟು ಕಾಳಜಿ ವಹಿಸುತ್ತಿದ್ದೇವೆ? ಇಂದು ಪೆಟ್ರೋಲ್ ದರ ಮಿತಿಮೀರಿದ್ದರೂ ಬೈಕ್ ಬಿಟ್ಟು ಪುನಃ ಬೈಸಿಕಲ್ಲಿಗೆ ಬಂದಿಲ್ಲ. 'ಇನ್ನು ಮುಂದೆ ಬೈಸಿಕಲ್ಲೇ ಗತಿ' ಎಂದು ಬಾಯಲ್ಲಿ ಹೇಳುತ್ತೇವಾದರೂ ವಾಸ್ತವದಲ್ಲಿ ನಮಗೆ ಮನಸ್ಸಿಲ್ಲ.

ಈ ವಿಷಯದಲ್ಲಿ ಪಾಶ್ಚಿಮಾತ್ಯ ದೇಶಗಳು ಒಂದು ಹೆಜ್ಜೆ ಮುಂದು ಎಂದೇ ಹೇಳಬಹುದು. ನೆದರ್‌ಲ್ಯಾಂಡ್, ಜರ್ಮನಿ, ಡೆನ್ಮಾರ್ಕ್, ಅಮೆರಿಕ ಮೊದಲಾದ ದೇಶಗಳು ಸೈಕಲ್ ಬಳಸುವುದನ್ನು ಹೆಚ್ಚು ಪ್ರೋತ್ಸಾಹಿಸುತ್ತವೆ. ಅನೇಕ ಮುಂದುವರಿದ ದೇಶಗಳಲ್ಲಿ ಕಚೇರಿಗೆ ಹೋಗಲು ಕಾರು, ಬಸ್ಸಿನ ಬದಲು ಸೈಕಲ್‌ನಲ್ಲಿ ಹೋಗುತ್ತಾರೆ. ಕೆಲಸ ಮಾಡುವ ಸ್ಥಳ ನಾಲ್ಕರಿಂದ ಎಂಟು ಕಿಲೋಮೀಟರ್ ದೂರದಲ್ಲಿದ್ದರೆ ಶೇಕಡಾ ಇಪ್ಪತ್ತರಿಂದ ಎಪ್ಪತ್ತರಷ್ಟು ಮಂದಿ ಕಚೇರಿಗೆ ಹೋಗಿ ಬರಲು ಸೈಕಲ್ ಬಳಸುತ್ತಾರೆ. ಕೆಲವು ದೇಶಗಳಲ್ಲಿ ಪ್ರಧಾನಿ, ರಾಷ್ಟ್ರಪತಿಗಳೂ ಸೈಕಲ್ ಸವಾರಿ ಮಾಡುತ್ತಾರೆ. ಅಲ್ಲಿಯ ಮೆಟ್ರೊ, ರೈಲುಗಳ ಒಳಗೂ ಸೈಕಲ್ ಕೊಂಡೊಯ್ಯಬಹುದಾಗಿದ್ದು, ಅದಕ್ಕಾಗಿಯೇ ವಿಶೇಷ ಬೋಗಿ, ಸ್ಥಳವನ್ನು ಕಲ್ಪಿಸಲಾಗಿದೆ. ಸಾಕಷ್ಟು ಜನ ರೈಲಿನಲ್ಲಿ ಸೈಕಲ್ ಒಯ್ಯುವುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಹಾಗೆಯೇ, ರೇಲ್ವೆ ನಿಲ್ದಾಣದ ಬಳಿ ಸೈಕಲ್ ನಿಲ್ಲಿಸಲು ಬೇಕಾದಷ್ಟು ಪಾರ್ಕಿಂಗ್ ವ್ಯವಸ್ಥೆಗಳೂ ಇರುತ್ತವೆ. ಕೆಲವು ದೇಶಗಳಲ್ಲಿ ಸೈಕಲ್ ಸವಾರರಿಗೆ ಪ್ರತ್ಯೇಕ ಲೇನ್ ಇದೆ. ಸೈಕಲ್ ಸವಾರರು ರಸ್ತೆ ದಾಟುವಾಗ ದೊಡ್ಡ ವಾಹನದವರು ತಮ್ಮ ವಾಹನ ನಿಲ್ಲಿಸಿ, ಸೈಕಲ್‌ಗೆ ಆದ್ಯತೆ ನೀಡುತ್ತಾರೆ.

ಇದು ಎರಡು ವರ್ಷಗಳ ಹಿಂದಿನ ವಿಷಯ. ಮನುಷ್ಯರಿಗಿಂತಲೂ ಸೈಕಲ್ ಸಂಖ್ಯೆಯೇ ಹೆಚ್ಚಿರುವ ನೆದರ್‌ಲ್ಯಾಂಡ್ ದೇಶದ ಆಮ್‌ಸ್ಟರ್‌ಡ್ಯಾಮ್ ನಗರದ ಕೆಲವು ಭಾಗಗಳಲ್ಲಿ ಸೈಕಲ್ ನಿಲ್ಲಿಸುವುದಕ್ಕೆ ಸ್ಥಳ ಹುಡುಕುವುದೇ ದೊಡ್ಡ ಸವಾಲಾಗಿತ್ತು. ಜನ ನೆಲವನ್ನು ಬಿಡಿ, ನಾಲೆಗಳಲ್ಲೂ ಸೈಕಲ್ ಬಿಟ್ಟು ಹೋಗುತ್ತಿದ್ದರು. ಅಲ್ಲಿಯ ಸರಕಾರ ಅದಕ್ಕೆ ಪರಿಹಾರ ಮಾರ್ಗವೊಂದನ್ನು ಹುಡುಕಿತು. ನಗರದ ಕೇಂದ್ರ ಸ್ಥಾನದಲ್ಲಿ ಸೈಕಲ್ ನಿಲ್ದಾಣವೊಂದನ್ನು ಉದ್ಘಾಟಿಸಲಾಯಿತು. ದಿನದ ಇಪ್ಪತ್ನಾಲ್ಕು ಗಂಟೆಯೂ ತೆರೆದಿರುವ, ಸಾವಿರಾರು ಸೈಕಲ್ ನಿಲ್ಲಿಸಬಹುದಾದ ಉಚಿತ ಸೈಕಲ್ ನಿಲ್ದಾಣ ಅದು. ಕೆರೆಯ ಕೆಳಗೆ ನಿರ್ಮಿಸಲಾದ ಈ ನಿಲ್ದಾಣಕ್ಕೆ ಅಲ್ಲಿಯ ಸರಕಾರ ಅರವತ್ತು ಮಿಲಿಯನ್ ಯೂರೋ ಹಣ ಖರ್ಚುಮಾಡಿತು. ಅದಕ್ಕೆ ಸಮೀಪದಲ್ಲಿಯೇ 25 ಮಿಲಿಯನ್ ಯುರೋ ವೆಚ್ಚದ ಪಾರ್ಕಿಂಗ್ ಸ್ಥಳ ಈಗಾಗಲೇ ಇದೆ. ಸೈಕಲ್ ನಿಲ್ಲಿಸಲೆಂದು 85 ಮಿಲಿಯನ್ ಯೂರೋ ಹಣವನ್ನು ಒಂದು ಸರಕಾರ ಖರ್ಚು ಮಾಡುತ್ತದೆ ಎಂದರೆ ಮತ್ತೇನಾದರೂ ಹೇಳಬೇಕೇ? ಅದು ಸರಕಾರದ ಬದ್ಧತೆಯನ್ನು ತೋರಿಸುತ್ತದೆ. ಭಾರತದಲ್ಲೂ ಸಾರ್ವಜನಿಕ ಸ್ಥಳಗಳ ಬಳಿ, ಸಾರಿಗೆ ಸಂಪರ್ಕದ ನಿಲ್ದಾಣದ ಬಳಿ ಸೈಕಲ್ ನಿಲ್ಲಿಸುವ ವ್ಯವಸ್ಥೆಯ ಕುರಿತು ಸರಕಾರ ತೀವ್ರವಾಗಿ ಯೋಚಿಸಬೇಕಿದೆ. ಅದರಿಂದ ಹಲವು ಸೈಕಲ್ ಸವಾರರಿಗೆ ಪ್ರೋತ್ಸಾಹ ದೊರೆತರೆ, ಕೆಲವರಿಗೆ ಪ್ರೇರಣೆ ದೊರಕುತ್ತದೆ. ತನ್ಮೂಲಕ ವಾಯು ಮಾಲಿನ್ಯ, ಶಬ್ದ ಮಾಲಿನ್ಯದಿಂದ ಒಂದಷ್ಟು ದೂರವಿರಲು ಸಹಾಯವಾಗುತ್ತದೆ. ಒಂದಂತೂ ನಿಜ, ಅಂದಿಗಾಗಲಿ, ಇಂದಿಗಾಗಲಿ, ಪೂರ್ವವಾಗಲಿ, ಪಶ್ಚಿಮವಾಗಲಿ, ಸೈಕಲ್ ಎಲ್ಲ ಕಡೆ ಸಲ್ಲುತ್ತದೆ.

ಅನಾರೋಗ್ಯದತ್ತ ತಳ್ಳುವ ಮೊಬೈಲ್ ಮಾಯಾಂಗನೆ

ಕಳಕಳಿ

ಬಸವರಾಜ ಶಿವಪ್ಪ ಗಿರಗಾಂವಿ

ವಿಶ್ವದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನಗಳು ನಿರೀಕ್ಷೆಗೂ ಮೀರಿ ಅಭಿವೃದ್ಧಿಯಾಗುತ್ತಿವೆ. ಇಚ್ಛಿಸಿದ ಸೇವೆ ಮತ್ತು ವಸ್ತುಗಳು ಕ್ಷಣಾರ್ಧದಲ್ಲಿಯೇ ಮನೆ ಬಾಗಿಲಿಗೆ ಬರುತ್ತಿವೆ. ಇಂದು ಪ್ರೀತಿಪಾತ್ರರನ್ನು ಬೇಕೆನಿಸಿದಾಗ ಸಂಪರ್ಕಿಸಬಹುದು. ಕುಳಿತಲ್ಲಿಂದ ವಿಶ್ವದ ಯಾವುದೇ ಮೂಲೆಯಿಂದ ಹಣ ವರ್ಗಾವಣೆ, ಪತ್ರ ವ್ಯವಹಾರ, ಸಂಪರ್ಕ, ಸಂವಹನ ನಡೆಸಬಹುದಾಗಿದೆ, ಅವಶ್ಯಕ ಮಾಹಿತಿಗಳನ್ನು ಪಡೆಯಬಹುದಾಗಿದೆ. ಇವುಗಳಿಗೆಲ್ಲ ಪ್ರಮುಖ ಕಾರಣವೆಂದರೆ ಅಂಗೈಯಲ್ಲಿರುವ ಅತ್ಯಾಧುನಿಕ ಮೊಬೈಲ್ ಎಂಬ ಮಾಯಾಂಗನೆ! ಈ ಮೊಬೈಲ್‌ನಿಂದ ದೊರೆಯುವ ಅನುಕೂಲತೆಗಳ ಪಟ್ಟಿಯನ್ನು ಮಾಡುತ್ತ ಕೂತರೆ ಅದಕ್ಕೆ ಕೊನೆಯಿಲ್ಲವಾಗಬಹುದು. ಆದರೆ, ಸುಲಭಕ್ಕೆ ಕೈಗೆಟುಕುವ ಸೌಲಭ್ಯಗಳು ನಮ್ಮ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತಿರುವುದಂತೂ ಖರೆ. ಹೀಗಾಗಿ, ಮೊಬೈಲ್ ಫೋನ್ ಬಳಕೆಯು ನಿಯಮಿತವಾಗಿರಬೇಕು ಎಂಬುದು ನಾವು ಈ ಕ್ಷಣಕ್ಕೆ ಅರಿಯಬೇಕಾದ ಸತ್ಯ.

ಎರಡು ದಶಕಗಳ ಹಿಂದೆ, ಮೇಲೆ ಉಲ್ಲೇಖಿಸಿದಂಥ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದು ಸುಲಭವಾಗಿರಲಿಲ್ಲ. ಅಂದು ಶಾರೀರಿಕ ಶ್ರಮ ಅನಿವಾರ್ಯವಾಗಿತ್ತು. ಅಂದರೆ ಸಂಬಂಧಿಸಿದ ಸ್ಥಳಗಳಿಗೆ ಸಾಕಷ್ಟು ಬಾರಿ ಅಲೆದಾಡಿದಾಗ ಮಾತ್ರವೇ, ತೃಪ್ತಿಕರವಲ್ಲದಿದ್ದರೂ ಕೆಲವಷ್ಟು ಸೌಲಭ್ಯಗಳನ್ನು ದಕ್ಕಿಸಿಕೊಳ್ಳಬಹುದಾಗಿತ್ತು. ಹೀಗೆ ಅಲೆದಾಡುವ ಕಸರತ್ತು ಮೇಲ್ನೋಟಕ್ಕೆ 'ತೊಂದರೆದಾಯಕ' ಎನಿಸಿದರೂ, ಶರೀರಕ್ಕೆ ಆರೋಗ್ಯದಾಯಕವಾಗಿತ್ತು. ದಿನಗಳೆದಂತೆ, ಜನಸಂಖ್ಯೆಯ ಹೆಚ್ಚಳಕ್ಕೆ ಅನುಗುಣವಾಗಿ ಹೊಸ ತಂತ್ರಜ್ಞಾನಗಳ ಬಳಕೆ ಅನಿವಾರ್ಯವಾಯಿತು. ಇದರಿಂದಾಗಿ ಶಾರೀರಿಕ ಶ್ರಮವು ಕಡಿಮೆಯಾಗಿದ್ದಲ್ಲದೆ, ಕಠಿಣವಾಗಿದ್ದ ಕೆಲಸಗಳು ಕುಳಿತಲ್ಲಿಂದಲೇ ನಿರ್ವಹಿಸಬಹುದಾದಷ್ಟು ಸರಳಗೊಂಡವು. ಇಂಥ ತಂತ್ರಜ್ಞಾನಗಳ ಪೈಕಿ ಮೊಬೈಲ್ ಕೂಡ ಒಂದು. ಮೊಬೈಲ್ ಎಂಬ ಮಾಯಾಪೆಟ್ಟಿಗೆಯ ಕಾರಣದಿಂದಾಗಿ ಶಾರೀರಿಕ ಅಲೆದಾಟ ಇಂದು ಬಹುತೇಕ ಕಮ್ಮಿಯಾಗಿದೆ, ಆಗಬೇಕಾದ ಕೆಲಸಗಳು ಸುಲಭವಾಗಿ ನೆರವೇರುತ್ತಿವೆ ಮತ್ತು ಶ್ರಮದಾಯಕವಲ್ಲದ ಜೀವನಶೈಲಿ ಎಲ್ಲೆಂದರಲ್ಲಿ ಕಂಡುಬರುತ್ತಿದೆ.

ಆದರೆ, ಮೊಬೈಲ್ ಮಾಯಾಜಾಲದಿಂದ ಆಗುತ್ತಿರುವ ಅಗೋಚರ ಅನಾಹುತಗಳು ಮತ್ತು ಅನನುಕೂಲತೆಗಳನ್ನು ನಿರ್ಲಕ್ಷಿಸಲಾಗದು. ತೀರಾ ಅನಿವಾರ್ಯ ಸಂದರ್ಭಗಳಲ್ಲಿ ಮೊಬೈಲ್ ಅನ್ನು ನೆಚ್ಚುವುದರಲ್ಲಿ ತಪ್ಪೇನಿಲ್ಲ. ಆದರೆ ಕುಳಿತಲ್ಲೇ ಎಲ್ಲ ಕೆಲಸಗಳನ್ನೂ ಅದು ಮಾಡಿಕೊಡುತ್ತಿರುವುದರಿಂದ ಜನರಲ್ಲಿ ಶಾರೀರಿಕ ಶ್ರಮ ಕಡಿಮೆಯಾಗಿ ಸೋಮಾರಿತನ ಹೆಚ್ಚುತ್ತಿದೆ. ಇಂದು ಯಾರಿಗೂ ಮೊಬೈಲ್ ಸಾಧನವನ್ನು ಬಿಟ್ಟಿರುವುದಕ್ಕೇ ಸಾಧ್ಯವಾಗದಂಥ ಪರಿಸ್ಥಿತಿ ರೂಪುಗೊಂಡಿದೆ. ಕೆಲವೇ ವರ್ಷಗಳ ಹಿಂದೆ, ವಿವಿಧ ತಂತ್ರಜ್ಞಾನಗಳು ಇನ್ನೂ ಅಂಬೆಗಾಲಿಡುತ್ತಿರುವಾಗ ಜನರ ಜೀವನಶೈಲಿ ನೈಸರ್ಗಿಕವಾಗಿತ್ತು, ಅವರಲ್ಲಿ ಆರೋಗ್ಯವು ತುಂಬಿ ತುಳುಕುತ್ತಿತ್ತು. ಮಾತಿಗಿಂತ ಕೃತಿಯೇ ಹೆಚ್ಚು ಪ್ರಚಲಿತದಲ್ಲಿತ್ತು. ಬಂಧು–ಮಿತ್ರರು ಮನೆಗೆ ಆಗಮಿಸಿದಾಗಲೋ, ಮದುವೆ–ಮುಂಜಿಯಂಥ ಸಮಾರಂಭಗಳಲ್ಲೋ ಜನರ ಪಾರಸ್ಪರಿಕ ಒಡನಾಟ ಗಮನಾರ್ಹವಾಗಿರುತ್ತಿತ್ತು.

ಆದರೀಗ, ಬಗೆಬಗೆಯ ಸ್ಮಾರ್ಟ್‌ಫೋನುಗಳು ದಾಂಗುಡಿ ಇಟ್ಟ ನಂತರ ಇಂಥ ಒಡನಾಟಗಳು ಕ್ರಮೇಣ ಕಣ್ಮರೆಯಾಗುತ್ತಿವೆ. ಅಪರೂಪಕ್ಕೆ ಸಿಕ್ಕಿರುವ ಬಂಧು–ಮಿತ್ರರೊಂದಿಗೆ ಹರಟುವ, ಕಷ್ಟ–ಸುಖಗಳನ್ನು ಹಂಚಿಕೊಳ್ಳುವ, ಅವರ ಅನುಭವಗಳಿಗೆ ಕಿವಿಯಾಗುವ ಪರಿಪಾಠ ಕಮ್ಮಿಯಾಗಿ, ನೆಪಮಾತ್ರಕ್ಕೆ ಒಮ್ಮೆ 'ಹಾಯ್' ಎಂದು ವಿಶ್ ಮಾಡಿದ ನಂತರ ಒಬ್ಬೊಬ್ಬರೂ ಒಂದೊಂದು ಕಡೆ ತಮ್ಮ ಪಾಡಿಗೆ ತಾವು ಸ್ಮಾರ್ಟ್‌ಫೋನುಗಳಲ್ಲಿ ಮುಖ ಹುದುಗಿಸಿಕೊಂಡು ಕೂತುಬಿಡುತ್ತಾರೆ. ಇದನ್ನು ಕಂಡಾಗೆಲ್ಲ, 'ಮಾನವ ಸಂಘಜೀವಿ' ಎಂಬ ಮಾತು ಸುಳ್ಳಾಗುವ ಕಾಲ ಸಮೀಪಿಸುತ್ತಿದೆಯೇನೋ ಎನಿಸುತ್ತದೆ. ಇದು ಬಹುತೇಕ ಕಾರ್ಯಕ್ರಮಗಳಲ್ಲಿ/ಸಮಾರಂಭಗಳಲ್ಲಿ ಸಾಮಾನ್ಯವಾಗಿ ಕಾಣಬರುವ ದೃಶ್ಯ.

ಇನ್ನು, ಅಪ್ರಾಪ್ತರ ಕೈಗಳಿಗೂ ಈಗ ಸ್ಮಾರ್ಟ್ ಫೋನುಗಳು ಸುಲಭಕ್ಕೆ ಸಿಗುತ್ತಿರುವುದರಿಂದ, ಮನರಂಜನೆಯ ಹೆಸರಿನಲ್ಲಿ ಆ ವಯಸ್ಸಿಗೆ ಬೇಡದ ಬಾಬತ್ತುಗಳೆಡೆಗೆ ಅವರು ಕಣ್ಣು ಹಾಯಿಸುವಂತೆ ಆಗುತ್ತಿದೆ. ತಮ್ಮ ಆ ನಿರ್ಣಾಯಕ ಕಾಲಘಟ್ಟದಲ್ಲಿ ಬದುಕನ್ನು ಕಟ್ಟಿಕೊಳ್ಳುವುದರ ಬದಲಿಗೆ ಅಪ್ರಾಪ್ತರು ಸುಲಭದಲ್ಲಿಯೇ ಅನಾರೋಗ್ಯಕರ ಚಟುವಟಿಕೆಗಳಿಗೆ ತಮ್ಮನ್ನು ಒಡ್ಡಿಕೊಳ್ಳುವಂತಾಗುತ್ತಿದೆ. ಪರಿಣಾಮವಾಗಿ, ಮೋಸಗಾರಿಕೆ, ಅಪ್ರಾಮಾಣಿಕತೆ, ಬ್ಲ್ಯಾಕ್‌ಮೇಲ್/ಅಪರಾಧಿಕ ಚಟುವಟಿಕೆಗಳಲ್ಲಿ ಅವರು ತೊಡಗಿಸಿಕೊಳ್ಳುವುದು ಹೆಚ್ಚಾಗುತ್ತಿದೆ. ಯುವಕರು ನಸುಕಿನಿಂದಲೇ ಅತಿರೇಕದ ಮೊಬೈಲ್ ಬಳಕೆಗೆ ಒಡ್ಡಿಕೊಳ್ಳುತ್ತಿರುವುದರಿಂದಾಗಿ ಅವರಲ್ಲಿನ ದುಡಿಯುವ ಪ್ರವೃತ್ತಿ ಕುಸಿಯುತ್ತಿದೆ. ಹೆತ್ತವರಿಗೆ ಇಲ್ಲದ ಸಬೂಬು ಹೇಳಿ ಹಣ ಪಡೆದು, 'ಆನ್‌ಲೈನ್ ಗೇಮಿಂಗ್' ಚಾಳಿಗೆ ಸಿಲುಕಿ ಹಣ ಕಳೆದುಕೊಳ್ಳುವವರಿಗೇನೂ ಈಗ ಕಮ್ಮಿಯಿಲ್ಲ. ಇಂಥ ಚಾಳಿಯ ವಿಷವ್ಯೂಹಕ್ಕೆ ಸಿಲುಕಿದವರು ಅತಿಯಾದ ಸಾಲ ಮಾಡಿಕೊಂಡು, ಅದನ್ನು ತೀರಿಸಲೆಂದು ತಮ್ಮ ಆಸ್ತಿ–ಪಾಸ್ತಿಗಳನ್ನು ಮಾರಾಟಮಾಡಿ, ಕೊನೆಗೆ ಆತ್ಮಹತ್ಯೆ ಮಾಡಿಕೊಂಡಿರುವ ಉದಾಹರಣೆಗಳೂ ಸಾಕಷ್ಟಿವೆ. ಈ ಚಾಳಿ ಹೀಗೆಯೇ ಮುಂದುವರಿದರೆ ಯಾವ ಪರಿಸ್ಥಿತಿ ಎದುರಾಗಬಹುದು ಎಂಬುದನ್ನು ಊಹಿಸಿಕೊಳ್ಳಲಿಕ್ಕೂ ಸಾಧ್ಯವಿಲ್ಲ.

ಆದ್ದರಿಂದ, ಮನೆಯಲ್ಲಿರುವ ಹಿರಿಯರು ತಮ್ಮ ಮಕ್ಕಳು ಅತಿರೇಕದ ಪ್ರಮಾಣದಲ್ಲಿ ಮೊಬೈಲ್ ಬಳಸುವುದಕ್ಕೆ ಲಗಾಮು ಹಾಕಬೇಕು. ಈ ಸ್ಪರ್ಧಾತ್ಮಕ ಯುಗದಲ್ಲಿ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದ್ದು ಎಷ್ಟು ಮುಖ್ಯ ಎಂಬುದನ್ನು ಮಕ್ಕಳಿಗೆ ಅವರು ಮನವರಿಕೆ ಮಾಡಿಕೊಡಬೇಕು. ಜತೆಗೆ, ಮಕ್ಕಳ ಎದುರು ಅತಿರೇಕವೆಂಬಷ್ಟರ ಮಟ್ಟಿಗೆ ಮೊಬೈಲ್ ಬಳಸುವುದನ್ನು ದೊಡ್ಡವರೂ ನಿಲ್ಲಿಸಬೇಕು. ಆಗ ಮಾತ್ರವೇ ಮನೆಯಲ್ಲಿನ ಎಲ್ಲರ ದೈಹಿಕ ಮತ್ತು ಮಾನಸಿಕ ಆರೋಗ್ಯವು ಸುಧಾರಣೆಗೊಂಡೀತು, ಸೋಮಾರಿತನ ತೊಲಗಿ ಉತ್ಪಾದಕತೆ ಹೆಚ್ಚೀತು.

(ಲೇಖಕರು ಕೃಷಿ ತಜ್ಞರು)

ರಾಮಪಾದುಕಾ ಪ್ರದಾನ ಪವರ್-ಆಫ್-ಅಟಾರ್ನಿ ಅಲ್ಲವೇ?

'ಪವರ್ ಆಫ್ ಅಟಾರ್ನಿ' (POA) ನೀಡುವಿಕೆಯು ವ್ಯಕ್ತಿಗಳ ನಡುವಿನ ಒಡಂಬಡಿಕೆಗೆ ಮಾತ್ರವೇ ಸೀಮಿತವಾಗಿಲ್ಲ. ಅನೇಕ ಸಲ ಕಂಪನಿಗಳು, ಬ್ಯಾಂಕುಗಳು, ಕಟ್ಟಡ ನಿರ್ಮಾಣ ಕಂಪನಿಗಳು, ಇನ್ನಿತರ ಏಜೆನ್ಸಿ ವ್ಯವಹಾರಗಳು ಮುಂತಾದ ಕಡೆ ಇದು ಅನಿವಾರ್ಯ. ನಮಗೆ ಗೊತ್ತಿಲ್ಲದೆ ನಾವು ಅನೇಕ ಸಲ POA ಆಧಾರದಲ್ಲಿ ವ್ಯವಹರಿಸುತ್ತೇವೆ. ಉದಾಹರಣೆಗೆ ಬ್ಯಾಂಕ್ ವ್ಯವಸ್ಥಾಪಕರು ಮತ್ತು ಎಲ್‌ಐಸಿ ಏಜೆಂಟರು ಕೂಡಾ ಈ ಪರಿಪಾಠದ ಪ್ರತಿನಿಧಿಗಳು.

ಕಾನೂನ್ ಸೆನ್ಸ್

ತಿಮ್ಮಣ್ಣ ಭಾಗ್ವತ್
vveditoped@gmail.com

ಒಬ್ಬರ ಪ್ರತಿನಿಧಿಯಾಗಿ ಇನ್ನೊಬ್ಬರು ವ್ಯವಹರಿಸುವ ವಿಷಯ ಹೊಸತಲ್ಲ. ಶ್ರೀರಾಮನ ಪ್ರತಿನಿಧಿಯಾಗಿ ಅಯೋಧ್ಯೆಯ ಚಕ್ರವರ್ತಿಯಾಗಿ 14 ವರ್ಷಗಳ ಕಾಲ ಭರತ ಆಳಿದ್ದು ಬಹುಶಃ ಅತಿ ಪ್ರಾಚೀನ ಉದಾಹರಣೆ. 2500 ವರ್ಷಕ್ಕಿಂತಲೂ ಹಿಂದಿನ ಮೆಸೊಪೊಟಾಮಿಯ ಸಂಸ್ಕೃತಿಯ ಕಾಲದಲ್ಲಿ ಹಾಗೂ ಪ್ರಾಚೀನ ರೋಮನ್ ಮತ್ತು ಇಸ್ಲಾಮಿಕ್ ಕಾಯಿದೆಗಳಲ್ಲಿ ಒಬ್ಬರ ಪರವಾಗಿ ವ್ಯವಹಾರ ನಡೆಸಲು ಇನ್ನೊಬ್ಬರಿಗೆ ಅಧಿಕಾರ ನೀಡಿದ ದಾಖಲೆಗಳಿವೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ 15ನೇ ಶತಮಾನದಲ್ಲಿಯೇ Qui facit per alium, facit per se ಅಂದರೆ 'ಯಾವುದೇ ವ್ಯಕ್ತಿ ಇನ್ನೊಬ್ಬನ ಮೂಲಕ ಕಾರ್ಯನಿರ್ವಹಿಸಿದರೆ ಆ ಕಾರ್ಯವನ್ನು ಅವನೇ ಮಾಡಿದಂತೆ' ಎಂಬ ನಿಯಮ ಜಾರಿಯಲ್ಲಿತ್ತು. 1795ರಲ್ಲಿ ಅಮೇರಿಕದ ಪ್ರಥಮ ಅಧ್ಯಕ್ಷ ಜಾರ್ಜ್ ವಾಷಿಂಗ್ಟನ್, ತನ್ನ ಮಿತ್ರನೊಬ್ಬನಿಗೆ ತನ್ನ ವೈಯಕ್ತಿಕ ವ್ಯವಹಾರ ಕುರಿತಂತೆ 'ಪವರ್ ಆಫ್ ಅಟಾರ್ನಿ' (POA) ನೀಡಿದ್ದ. ಭಾರತದಲ್ಲಿ ಪವರ್ ಆಫ್ ಅಟಾರ್ನಿ ವ್ಯವಸ್ಥೆಗೆ ವಿಧಿಬದ್ಧ ಸ್ವರೂಪ ನೀಡಿದ್ದು ಬ್ರಿಟಿಷ್ ಆಡಳಿತದ 'ಪವರ್ ಆಫ್ ಅಟಾರ್ನಿ– 1882' ಕಾಯಿದೆಯ ಮೂಲಕ. ಇದಲ್ಲದೆ ಭಾರತೀಯ ಒಪ್ಪಂದ ಕಾಯಿದೆ 1872, ನೋಂದಣಿ ಕಾಯಿದೆ 1908 ಮತ್ತು ಸ್ಟಾಂಪ್ ಕಾಯಿದೆ 1889 ಮುಂತಾದವುಗಳ ವಿವಿಧ ಕಲಮುಗಳು ಕೂಡಾ POAಗೆ ಅನ್ವಯವಾಗುತ್ತವೆ.

ಏನಿದು ಪವರ್ ಆಫ್ ಅಟಾರ್ನಿ? (POA)

1882ರ ಪವರ್ ಆಫ್ ಅಟಾರ್ನಿ ಕಾಯಿದೆಯ 1–ಎ ಕಲಮಿನ ಪ್ರಕಾರ, POA ಎಂದರೆ ಅದನ್ನು ನೀಡುವ ವ್ಯಕ್ತಿಯ ಹೆಸರಿನಲ್ಲಿ ಮತ್ತು ಅವನ ಪರವಾಗಿ ಕಾರ್ಯನಿರ್ವಹಿಸಲು ಇನ್ನೊಬ್ಬ ನಿರ್ದಿಷ್ಟ ವ್ಯಕ್ತಿಗೆ ಅಧಿಕಾರ ನೀಡುವ ಲಿಖಿತ ಪತ್ರ. ದೈಹಿಕ ಅಸಾಮರ್ಥ್ಯ, ಕಾಯಿಲೆ, ದೂರದ ಊರಿನಲ್ಲಿ ಅಥವಾ ವಿದೇಶದಲ್ಲಿ ವಾಸ ಅಥವಾ ಇನ್ನಿತರ ವೈಯಕ್ತಿಕ ಕಾರಣಗಳಿಂದ ವಿಶೇಷವಾಗಿ ಸ್ಥಿರಾಸ್ತಿಗಳ ನಿರ್ವಹಣೆ, ಮೇಲ್ವಿಚಾರಣೆ ಅಥವಾ ಮಾರಾಟಕ್ಕೆ ಸಂಬಂಧಿಸಿ ಅಥವಾ ಇತರ ವ್ಯವಹಾರ, ಹಣಕಾಸು ನಿರ್ವಹಣೆಗಳ ವಿಷಯದಲ್ಲಿ ತಾವೇ ಸ್ವತಃ ಪಾಲ್ಗೊಳ್ಳಲು ಸಾಧ್ಯವಾಗದಿರುವ ಸಂದರ್ಭಗಳಲ್ಲಿ ತಮ್ಮ ಪರವಾಗಿ ಇನ್ನೊಬ್ಬರಿಗೆ ಆ ಎಲ್ಲ ಅಥವಾ ಆ ಪೈಕಿ ಕೆಲವು ವ್ಯವಹಾರ ನಡೆಸುವುದಕ್ಕೆ ಅಧಿಕಾರ ನೀಡಲು ಪವರ್ ಆಫ್ ಅಟಾರ್ನಿ ಅಥವಾ POA ನೀಡಲಾಗುತ್ತದೆ. POA ನೀಡುವಾತ ಪ್ರಧಾನ ವ್ಯಕ್ತಿ (Principal, Donor ಅಥವಾ Grantor), ಅಧಿಕಾರ ಪಡೆದವ ಪ್ರತಿನಿಧಿ (Agent / Attorney-in-fact/ Donee) ಆಗಿರುತ್ತಾರೆ. ಕಾನೂನು ರೀತ್ಯಾ ಜಾರಿಗೊಳಿಸಲಾದ ಪವರ್ ಆಫ್ ಅಟಾರ್ನಿ ಪಡೆದ ವ್ಯಕ್ತಿ ಅದರಲ್ಲಿ ನಮೂದಿಸಲಾದ ಕಾರ್ಯಗಳನ್ನು ಅದನ್ನು ನೀಡಿದಾತನ ಅನುಪಸ್ಥಿತಿಯಲ್ಲಿ ಮಾಡುವ ಅಧಿಕಾರ ಪಡೆಯುತ್ತಾನೆ ಮತ್ತು ಅವನು ಹಾಗೆ ಮಾಡಿದ ಕಾರ್ಯ ಅಥವಾ ಸಹಿಮಾಡಲಾದ ಕಾಗದ ಪತ್ರಗಳ ಕುರಿತು POA ನೀಡಿದಾತ ಸ್ವತಃ ತಾನೇ ಮಾಡಿದ ಹಾಗೆ ಬಾಧ್ಯಸ್ಥನಾಗುತ್ತಾನೆ ಮತ್ತು ಅದನ್ನು ಅಲ್ಲಗಳೆಯಲು ಆಗುವದಿಲ್ಲ (POA ಕಾಯಿದೆಯ 2ನೇ ಕಲಮು).

POA ನೀಡುವಿಕೆ ವ್ಯಕ್ತಿಗಳ ನಡುವೆ ಅಷ್ಟೇ ಸೀಮಿತವಾಗಿಲ್ಲ. ಅನೇಕ ಸಲ ಕಂಪನಿಗಳು, ಬ್ಯಾಂಕುಗಳು, ಕಟ್ಟಡ ನಿರ್ಮಾಣ ಕಂಪನಿಗಳು, ಇನ್ನಿತರ ಏಜೆನ್ಸಿ ವ್ಯವಹಾರಗಳು ಮುಂತಾದ ಕಡೆ ಇದು ಅನಿವಾರ್ಯ. ನಮಗೆ ಗೊತ್ತಿಲ್ಲದೆ ನಾವು ಅನೇಕ ಸಲ POA ಆಧಾರದಲ್ಲಿ ವ್ಯವಹರಿಸುತ್ತೇವೆ. ಉದಾಹರಣೆಗೆ ಬ್ಯಾಂಕ್ ವ್ಯವಸ್ಥಾಪಕರು ಮತ್ತು ಎಲ್‌ಐಸಿ ಏಜೆಂಟರು ಕೂಡಾ ಈ ಪರಿಪಾಠದ ಪ್ರತಿನಿಧಿಗಳು. ಕೆಲವು ಕಂಪನಿಗಳು ಇನ್ನೊಂದು ಕಂಪನಿಯನ್ನು ಏಜೆನ್ಸಿ ಒಪ್ಪಂದದನ್ವಯ ತಮ್ಮ ಏಜೆಂಟ್ ಆಗಿ ನಿಯುಕ್ತಿಗೊಳಿಸುತ್ತವೆ.

POAಯನ್ನು ಹೇಗೆ ನೀಡುವುದು?

ಭಾರತೀಯ ಒಪ್ಪಂದ ಕಾಯಿದೆ 1872ರ 182ರಿಂದ 238ನೇ ವರೆಗಿನ ಕಲಮುಗಳು ಏಜೆನ್ಸಿ ಒಪ್ಪಂದಗಳ (Conttract of Agency) ಕುರಿತಾಗಿ ಇವೆ. ಪ್ರಧಾನ ವ್ಯಕ್ತಿ (Principal) ಮತ್ತು ಏಜೆಂಟರ ನಡುವೆ ನಡೆಯುವ ಏಜೆನ್ಸಿ ಒಪ್ಪಂದದ ರೂಪರೇಷೆ ಮತ್ತು ವಿವಿಧ ಷರತ್ತುಗಳನ್ನು ಪವರ್ ಆಫ್ ಅಟಾರ್ನಿ ಮೂಲಕ ಸ್ಪಷ್ಟ ಪಡಿಸಲಾಗುತ್ತದೆ. ನೀವು POA ನೀಡುವುದಿದ್ದಲ್ಲಿ ಕಾನೂನು ತಜ್ಞರಿಂದ ಅದನ್ನು ಬರೆಯಿಸಬೇಕು. POAಯಲ್ಲಿ ಸಾಮಾನ್ಯವಾಗಿ, ಅದನ್ನು ನೀಡುವಾತ ಮತ್ತು ಪಡೆದವನ ಹೆಸರು ಮುಂತಾದ ವೈಯಕ್ತಿಕ ವಿವರಗಳು, ನೀಡಿಕೆಯ ಕಾರಣ ಮತ್ತು ಉದ್ದೇಶ ಮತ್ತು ಎಲ್ಲಕ್ಕಿಂತ ಮುಖ್ಯ ವಾಗಿ ಆ ಮೂಲಕ ನೀಡಲಾದ ಅಧಿಕಾರದ ಸ್ಪಷ್ಟನೆ, ನಡೆಸ ಬೇಕಾದ ವ್ಯವಹಾರದ ಸ್ವರೂಪ ಮತ್ತು ಅದರಲ್ಲಿ ಪ್ರತಿನಿಧಿಯ ಪಾತ್ರ ಮತ್ತು ಅಧಿಕಾರದ ಬಗ್ಗೆ ಉಲ್ಲೇಖಗಳಿರುತ್ತವೆ. ಆಸ್ತಿ ನಿರ್ವಹಣೆಯ ವಿಷಯವಾದರೆ ಅಂಥ ಆಸ್ತಿಯ ವಿವರವಿರುವ ಷೆಡ್ಯೂಲ್ ಮತ್ತು ಆ ಕುರಿತು ಪ್ರತಿನಿಧಿ ಕೈಗೊಳ್ಳಬಹುದಾದ ಕ್ರಮಗಳ ವಿವರ– ಉದಾಹರಣೆಗೆ ಆಸ್ತಿ ಮಾರಾಟದ ವಿಷಯವಾದರೆ ಖರೀದಿದಾರರನ್ನು ಹುಡುಕುವುದು, ದರದ ಚರ್ಚೆ ಮತ್ತು ನಿಗದಿ, ಖರೀದಿ ಒಪ್ಪಂದ ಮಾಡಿಕೊಡುವುದು, ಹಣ ಸ್ವೀಕಾರ, ಕ್ರಯಪತ್ರವನ್ನು ಸಿದ್ಧ ಪಡಿಸುವುದು ಮತ್ತು ನೋಂದಣಿಗೆ ತಯಾರಿ, ಸ್ಟ್ಯಾಂಪ್ ಶುಲ್ಕ ಮತ್ತು ನೋಂದಣಿ ಶುಲ್ಕದ ಪಾವತಿ, ಮಾರಾಟ ಮೊತ್ತದ ಸ್ವೀಕಾರ, ಕ್ರಯಪತ್ರಕ್ಕೆ ಸಹಿಮಾಡುವುದು, ನೋಂದಣಿ ಕಚೇರಿಯಲ್ಲಿ ಸಹಿಮಾಡುವುದು ಮತ್ತು ನೋಂದಣಿ ಮಾಡಿಸುವುದು ಮುಂತಾದ ವಿವಿಧ ಹಂತಗಳ ಕ್ರಮಗಳನ್ನು ಸ್ಪಷ್ಟವಾಗಿ ಬರೆಯುವುದರ ಜತೆಗೆ ಆ ಕುರಿತು ಕೈಗೊಳ್ಳಬೇಕಾದ ಎಲ್ಲ ಕ್ರಮಗಳನ್ನು ಕೂಡ ಬರೆಯಬೇಕಾಗುತ್ತದೆ. ಆದರೆ ಈ ಪೈಕಿ ಯಾವುದಾದರೂ ಒಂದು ಅಥವಾ ಕೆಲವು ಕ್ರಮಗಳನ್ನು– ಉದಾಹರಣೆಗೆ ಹಣ ಸ್ವೀಕಾರ, ಕ್ರಯಪತ್ರಕ್ಕೆ ಸಹಿಮಾಡುವುದು, ನೋಂದಣಿ ಕಚೇರಿಯಲ್ಲಿ ಸಹಿ ಮಾಡುವುದು ಮುಂತಾದವನ್ನು



ಮಾಲೀಕನೇ ಮಾಡುವುದಿದ್ದಲ್ಲಿ ಹಾಗೆ ಸ್ಪಷ್ಟ ಪಡಿಸಬೇಕು. 1908ರ ನೋಂದಣಿ ಕಾಯಿದೆಯ ಪ್ರಕಾರ ಸ್ಥಿರಾಸ್ತಿಗಳ ವ್ಯವಹಾರ ಕುರಿತಾದ POAಗಳ ನೋಂದಣಿ ಮತ್ತು ಸ್ಟ್ಯಾಂಪ್ ಕಾಯಿದೆಯನ್ವಯ ಸ್ಟ್ಯಾಂಪ್ ಶುಲ್ಕ ಭರಿಸುವುದು ಕಡ್ಡಾಯ. ಆದರೆ ಇತರ ವ್ಯವಹಾರಗಳ POAಗಳ ನೋಂದಣಿ ಕಡ್ಡಾಯವಲ್ಲ. ಇಬ್ಬರು ಸಾಕ್ಷಿಗಳ ಸಮಕ್ಷಮ ಅಥವಾ ನೋಟರಿ ಎದುರು POAನೀಡುವವ ಮತ್ತು ಪಡೆಯುವವರು ಸಹಿಮಾಡಬೇಕು. 'ಮಾಹಿತಿ ತಂತ್ರಜ್ಞಾನ ಕಾಯಿದೆ 2000' ಇದರ ಪ್ರಕಾರ ಡಿಜಿಟಲ್ ಸಹಿ ಕೂಡಾ ಮಾಡಬಹುದು. ಏಜೆನ್ಸಿ ಒಪ್ಪಂದಕ್ಕೆ ಪರಿಗಣನೆ (Consideration) ಬೇಕಿಲ್ಲವಾದರೂ ಪ್ರತಿನಿಧಿಗೆ ನೀಡಬಹುದಾದ ಸಂಭಾವನೆಯನ್ನು ಕೂಡಾ ನಮೂದಿಸಬಹುದು. ವಿದೇಶದಲ್ಲಿರುವವರು ಆ ದೇಶದಲ್ಲಿನ ಭಾರತದ ವಿದೇಶಾಂಗ ಕಾರ್ಯಾಲಯದಲ್ಲಿ ಅಥವಾ ನೋಟರಿಯ ಎದುರು ಸಹಿಮಾಡಿದ POAಯನ್ನು ಭಾರತದಲ್ಲಿ ನೋಂದಣಿ ಮಾಡಿಸಬೇಕು. POA ನೀಡುವವ ಮತ್ತು ಪಡೆಯುವವರಿಬ್ಬರೂ ಅಪ್ರಾಪ್ತ ವಯಸ್ಕರು ಆಗಿರಬಾರದು. ಅವರಿಗೆ ಮಾನಸಿಕ ಅಸ್ವಸ್ಥತೆ ಅಥವಾ ಇನ್ಯಾವುದೇ ರೀತಿಯಲ್ಲಿ ಒಪ್ಪಂದ ಮಾಡಲು ಅಸಾಮರ್ಥ್ಯ (Incompetence to Contract) ಇರಬಾರದು. POAಯ ಆಧಾರದಲ್ಲಿ ಯಾವುದೇ ಆಸ್ತಿಯ ನೋಂದಣಿ ಮಾಡುವಾಗ ಸಂಬಂಧಿತ ನೋಂದಣಿ ಅಧಿಕಾರಿಯು ಅದರ ನೈಜತೆ ಮತ್ತು ಅದನ್ನು ಹಾಜರುಪಡಿಸುತ್ತಿರುವ ವ್ಯಕ್ತಿಯ ಗುರುತನ್ನು ಖಾತರಿಪಡಿಸಿಕೊಳ್ಳಬೇಕಾಗುತ್ತದೆ. POA ಪಡೆದವ ಯಾವುದೇ ದಾಖಲೆಗೆ ಸಹಿ ಮಾಡುವಾಗ ಅವನು ಅದನ್ನು ನೀಡಿದವನ ಪರವಾಗಿ ಸಹಿ ಮಾಡುತ್ತಾನೆಯೇ ಹೊರತು ತನ್ನ ಹೆಸರಿನಲ್ಲಲ್ಲ.

ಭಾಗ-01

POA ಯ ವಿವಿಧ ಪ್ರಕಾರಗಳು

ಉದ್ದೇಶ ಮತ್ತು ಅಧಿಕಾರ ವ್ಯಾಪ್ತಿಗಳ ಆಧಾರದಲ್ಲಿ ಅನೇಕ ಬಗೆಯ POAಗಳಿದ್ದರೂ ಮುಖ್ಯವಾಗಿ ಸಾಮಾನ್ಯ (General), ನಿರ್ದಿಷ್ಟ (Specific), ಬಾಳಿಕೆ ಬರುವ (Durable) POA ಎಂಬ ಪ್ರಕಾರದವುಗಳು ಹೆಚ್ಚು ಬಳಕೆಯಲ್ಲಿವೆ. General POA ಅಥವಾ GPAಯ ಮೂಲಕ ಪ್ರತಿನಿಧಿಯು ಬಹುತೇಕ ಎಲ್ಲಾ ಕಾರ್ಯಗಳನ್ನೂ ಮಾಡಲು ಅಧಿಕಾರ ಪಡೆಯುತ್ತಾನೆ. Specific POAಯನ್ನು ನಿರ್ದಿಷ್ಟ ಉದ್ದೇಶಕ್ಕೆ ಮಾತ್ರ ನೀಡಲಾಗುತ್ತದೆ ಮತ್ತು ಆ ಉದ್ದೇಶ ಈಡೇರಿದಾಗ ಅದು ರದ್ದಾಗುತ್ತದೆ. Durable POA ನೀಡಿದಾಗ ಸ್ವಸ್ಥನಾಗಿದ್ದ ವ್ಯಕ್ತಿ, ನಂತರ ಮಾನಸಿಕವಾಗಿ ಅಸ್ವಸ್ಥನಾದರೂ ಅದು ಚಾಲ್ತಿಯಲ್ಲಿರುತ್ತದೆ. ಹೀಗಾಗಿ Durable POA ಹೆಚ್ಚು ಸುರಕ್ಷಿತ.

POAಯನ್ನು ರದ್ದು ಪಡಿಸುವುದು ಅಥವಾ ಹಿಂಪಡೆಯುವುದು (Revocation)

ಹಿಂಪಡೆಯಲಾಗದ (Irrevocable) POAಗಳನ್ನು ಬಿಟ್ಟು ಇತರ POA ಗಳನ್ನು ರದ್ದು ಪಡಿಸಬಹುದು ಅಥವಾ ಹಿಂಪಡೆಯಬಹುದು. POAಯ ಷರತ್ತು ಉಲ್ಲಂಘನೆಯಾದರೆ ಹಿಂಪಡೆಯಲಾಗದ POAಯನ್ನು ಕೂಡಾ ರದ್ದುಗೊಳಿಸಬಹುದು. POAಪಡೆದಾತನಿಗೆ ರದ್ದತಿ ಪತ್ರವನ್ನು ಅಥವಾ ನೋಟಿಸ್ ಅನ್ನು ನೀಡುವ ಮೂಲಕ POAಯನ್ನು ರದ್ದು ಪಡಿಸಬಹುದು. POA ಆಧಾರದಲ್ಲಿ ಮೂರನೇ ವ್ಯಕ್ತಿ ಈಗಾಗಲೇ ಪ್ರತಿನಿಧಿಯ ಜತೆ ವ್ಯವಹಾರ ನಡೆಸಿದ್ದು ಗೊತ್ತಿದ್ದಲ್ಲಿ ಅವರಿಗೂ ನೋಟಿಸ್ ನೀಡಬೇಕು. ಮೂಲ POA ನೋಂದಣಿಯಾಗಿದ್ದರೆ ರದ್ದತಿ ಪತ್ರದ ನೋಂದಣಿ ಕಡ್ಡಾಯ. ಎಲ್ಲಾ ಬಗೆಯ POAಗಳ ರದ್ದತಿಗೆ ಪತ್ರಿಕಾ ಪ್ರಕಟಣೆಯನ್ನೂ ನೀಡುವುದು ಸೂಕ್ತ. POA ನೀಡಿದವ ಮೃತಪಟ್ಟರೆ, ಮಾನಸಿಕನಾಗಿ ಅಸ್ವಸ್ಥನಾದರೆ (Durable POA ಹೊರತುಪಡಿಸಿ) ಅಥವಾ ದಿವಾಳಿಯಾದರೆ POA ರದ್ದಾಗುತ್ತದೆ. POA ಒಂದು ಹಕ್ಕಲ್ಲವಾದ್ದರಿಂದ ಅದನ್ನು ಪಡೆದವ ಮೃತನಾದರೆ ವಾರಸುದಾರಿಕೆ ಹಕ್ಕು ಬರುವುದಿಲ್ಲ. ಆದರೆ ರದ್ದಾಗುವವರೆಗೆ ಅದರ ಆಧಾರದಲ್ಲಿ ನಡೆಸಲಾಗುವ ವ್ಯವಹಾರಗಳು ಕಾನೂನು ರೀತ್ಯಾ ಊರ್ಜಿತವಿರುತ್ತವೆ.

POA ಕಾಯಿದೆಯ 3ನೇ ಕಲಮಿನ ಪ್ರಕಾರ POA ಪಡೆದವ ಅದನ್ನು ನೀಡಿದ ವ್ಯಕ್ತಿಯ ಸಾವು, ಮಾನಸಿಕ ಅಸ್ವಸ್ಥತೆ, ದಿವಾಳಿ ಅಥವಾ POAಯ ರದ್ದತಿ ಕುರಿತು ಯಾವುದೇ ಮಾಹಿತಿಯಿಲ್ಲದೆ ಅದರನ್ವಯ ಹಣನೀಡಿದರೆ ಅಥವಾ ವ್ಯವಹರಿಸಿದರೆ ಆ ಕುರಿತು ಅವನು ಬಾಧ್ಯಸ್ಥನಾಗುವುದಿಲ್ಲ. ಆದರೆ ಹಣ ಪಡೆದವರಿಗೆ ಅಥವಾ ಇತರ ವ್ಯವಹಾರ ಮಾಡಿದವರಿಗೆ ಈ ರಕ್ಷಣೆ ಸಿಗುವುದಿಲ್ಲ. ಪವರ್ ಆಫ್ ಅಟಾರ್ನಿ ಕಾಯಿದೆ 1882ರ 4ನೇ ಕಲಮಿನ ಪ್ರಕಾರ POA ಯನ್ನು ಜಿಲ್ಲಾ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯದಲ್ಲಿ ಸುರಕ್ಷಿತವಾಗಿ ಇಡುವ ಅವಕಾಶವಿದೆ. ಹಾಗೆ ಇಟ್ಟಾಗ ಅಂಥ POAಯ ದೃಢೀಕೃತ ಪ್ರತಿಯ ಆಧಾರದಲ್ಲಿ ಮೂಲಪ್ರತಿಯಷ್ಟೇ ಅಧಿಕೃತವಾಗಿ ವ್ಯವಹರಿಸಬಹುದು. ಅಂಥ POA ಗಳನ್ನು ತಿದ್ದುಪಡಿ ಮಾಡುವ ಇಲ್ಲವೇ ನಕಲಿ ಮಾಡುವ ಸಾಧ್ಯತೆ ಇರುವುದಿಲ್ಲ.

ಪವರ್ ಆಫ್ ಅಟಾರ್ನಿ ಮೂಲಕ ನಡೆಯುವ ಪ್ರಕ್ರಿಯೆಗಳು ಕಾನೂನುಬದ್ಧವಾಗಿ ನಡೆದಲ್ಲಿ ಯಾವುದೇ ಸಮಸ್ಯೆ ಇರುವುದಿಲ್ಲ ಮತ್ತು ಆ ಎಲ್ಲ ವ್ಯವಹಾರಗಳು ಮಾಲೀಕರೇ ಸ್ವತಃ ನಡೆಸಿದಷ್ಟೇ ಊರ್ಜಿತವಾಗಿರುತ್ತವೆ. ಆದರೆ POA ಯನ್ನು ದುರುಪಯೋಗ ಪಡಿಸಿಕೊಂಡು ಮೋಸ ಮಾಡುವ ಸಾಧ್ಯತೆ ಇರುವುದರಿಂದ POA ನೀಡುವವರು, ಪಡೆದವರು ಮತ್ತು ವಿಶೇಷವಾಗಿ ಅದರ ಆಧಾರದಲ್ಲಿ ವ್ಯವಹರಿಸುವವರು ಅನೇಕ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಅಂಥ ಮೋಸದ ಸಾಧ್ಯತೆಗಳು ಮತ್ತು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕುರಿತು ಮುಂದಿನ ಭಾಗದಲ್ಲಿ ಚರ್ಚಿಸೋಣ.

(ಮುಂದುವರಿಯುವುದು)

(ಲೇಖಕರು ಕಾನೂನು ತಜ್ಞರು ಮತ್ತು ಕೆವಿಜಿ ಬ್ಯಾಂಕ್‌ನ ನಿವೃತ್ತ ಎಜಿಎಂ)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 77

ಸಮಾಚಾರ ಸಣ್ಣದಲ್ಲ

ರಾಜಸ್ಥಾನ: ಭಾರೀ ಪ್ರವಾಹಕ್ಕೆ 6 ಸಾವು

ಜೈಪುರ: ರಾಜಸ್ಥಾನದಲ್ಲಿ ಶನಿವಾರ ಸುರಿದ ಭಾರೀ ಮಳೆಯಿಂದಾಗಿ ಕೆಲವೆಡೆ ಪ್ರವಾಹದಂತಹ ಪರಿಸ್ಥಿತಿ ನಿರ್ಮಾಣವಾಗಿದ್ದು, ಕಳೆದ 24 ಗಂಟೆಗಳಲ್ಲಿ ಪ್ರವಾಹದಲ್ಲಿ ಸಿಲುಕಿ ಮತ್ತು ಮಳೆ ಸಂಬಂಧಿತ ಅವಘಡಗಳಲ್ಲಿ ಒಟ್ಟು 6 ಜನರು ಸಾವನ್ನಪ್ಪಿದ್ದಾರೆ. ಅರಬ್ಬೀ ಸಮುದ್ರದಲ್ಲಿ ವಾಯುಭಾರ ಕುಸಿತವಾಗಿದ್ದರಿಂದ ರಾಜಸ್ಥಾನದ ಅಜ್ಮೀರ್, ಪುಷ್ಕರ್, ಬುಂಡಿ, ಸವಾಯಿ ಮಾಧೋಪುರ್ ಮತ್ತು ಪಾಲಿಯಲ್ಲಿ ಭಾರೀ ಮಳೆಯಾಗಿದೆ. ಈ ಪ್ರದೇಶಗಳ ನದಿಗಳು ಉಕ್ಕಿ ಹರಿದಿವೆ. ಜೈಪುರದಲ್ಲಿಯೂ 24 ಗಂಟೆಗಳಲ್ಲಿ ಭಾರೀ ಮಳೆಯಾಗಿದೆ. ಸವಾಯಿ ಮಾಧೋಪುರದಲ್ಲಿ ಮನೆ ಹೊರಗೆ ಆಟವಾಡುತ್ತಿದ್ದ 4 ವರ್ಷದ ಮಗು ಸೇರಿ ಇಬ್ಬರು ಸಾವಿಗೀಡಾದರು. ಅಜ್ಮೀರ್‌ನ ಕಿಶನ್‌ಗಢದಲ್ಲಿ 4 ಹುಡುಗಿಯರು ಕೊಳದಲ್ಲಿ ಮುಳುಗಿ ಸಾವಿಗೀಡಾಗಿದ್ದಾರೆ.

ಗಗನಸಖಿ ಅತ್ಯಾಚಾರ: ಸಹೋದ್ಯೋಗಿ ಸೆರೆ

ಮುಂಬೈ: ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಮೀರಾ ರಸ್ತೆ ಪ್ರದೇಶದಲ್ಲಿರುವ ಆರೋಪಿಯ ನಿವಾಸದಲ್ಲಿಯೇ ಗಗನಸಖಿ(23) ಮೇಲೆ ಸಹೋದ್ಯೋಗಿ ಅತ್ಯಾಚಾರ ನಡೆಸಿದ್ದು, 25 ವರ್ಷದ ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿ ವಿರುದ್ಧ ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್)ದ 64 (ಅತ್ಯಾಚಾರ), 351(2) (ಕ್ರಿಮಿನಲ್ ಬೆದರಿಕೆ), ಮತ್ತು 352 (ಉದ್ದೇಶಪೂರ್ವಕ ಅವಮಾನ) ಸೆಕ್ಷನ್‌ಗಳಡಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ನವಘರ್ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಧೀರಜ್ ಕೋಲಿ ಸುದ್ದಿಸಂಸ್ಥೆಗೆ ಭಾನುವಾರ ತಿಳಿಸಿದ್ದಾರೆ. ಪ್ರಕರಣದ ತನಿಖೆ ಮುಂದುವರೆದಿದೆ ಎಂದಿದ್ದಾರೆ.

ರಾಜೀನಾಮೆ ಹಿಂಪಡೆದ ಎಎಪಿ ಶಾಸಕಿ ಅನ್ಮೋಲ್

ಚಂಡೀಗಢ: ಪಂಜಾಬ್‌ನಲ್ಲಿನ ಆಮ್ ಆದ್ಮಿ ಪಕ್ಷದ(ಎಎಪಿ) ಸರಕಾರದ ಸಚಿವ ಸ್ಥಾನದಿಂದ ಕೈಬಿಟ್ಟದ್ದಕ್ಕೆ ಮುನಿಸಿಕೊಂಡು ಶಾಸಕಿ ಸ್ಥಾನಕ್ಕೆ

ರಾಜೀನಾಮೆ, ರಾಜಕೀಯ ಕ್ಷೇತ್ರವನ್ನೇ ತ್ಯಜಿಸುವೆ ಎಂದು ಘೋಷಿಸಿದ್ದ ಎಎಪಿ ಶಾಸಕಿ ಅನ್ಮೋಲ್ ಗಗನ್ ಮಾನ್ ಈಗ 'ಯು ಟರ್ನ್' ಹೊಡೆದಿದ್ದಾರೆ. ಶಾಸಕಿ ಸ್ಥಾನಕ್ಕೆ ನೀಡಿದ್ದ ರಾಜೀನಾಮೆ ಪತ್ರವನ್ನು ವಾಪಸ್ ತೆಗೆದುಕೊಂಡಿದ್ದಾರೆ. ಎಎಪಿಯ ಪಂಜಾಬ್ ಘಟಕ ಅಧ್ಯಕ್ಷ ಅಮನ್ ಅರೋರಾ ಅವರು ಮನೆಗೆ ಬಂದು ಭೇಟಿಯಾಗಿ ಸಮಾಧಾನಪಡಿಸಿದ ಬಳಿಕ ಅನ್ಮೋಲ್ ನಿರ್ಧಾರ ಬದಲಿಸಿದ್ದಾರೆ ಎಂದು ತಿಳಿದುಬಂದಿದೆ. 'ಪಕ್ಷ ನನ್ನ ರಾಜೀನಾಮೆ ಪತ್ರವನ್ನು ತಿರಸ್ಕರಿಸುವುದಾಗಿ ಹೇಳಿದೆ. ಹಾಗಾಗಿ ರಾಜಕೀಯದಲ್ಲೇ ಮುಂದುವರಿಯುವೆ' ಎಂದು ಅನ್ಮೋಲ್ 'ಎಕ್ಸ್' ಸಂದೇಶದಲ್ಲಿ ಭಾನುವಾರ ತಿಳಿಸಿದ್ದಾರೆ.

ಪೊಲೀಸ್ ಮೇಲೆ ಹಲ್ಲೆ: ಕನ್ವರ್ ಯಾತ್ರಿಕರ ಸೆರೆ

ಮಿರ್ಜಾಪುರ: ಉತ್ತರ ಪ್ರದೇಶದ ಮಿರ್ಜಾಪುರ ರೈಲು ನಿಲ್ದಾಣದಲ್ಲಿ ಶನಿವಾರ ಟಿಕೆಟ್ ತಪಾಸಣೆ ವೇಳೆ ಉಂಟಾದ ವಾಗ್ವಾದ ಬಳಿಕ ಕನ್ವರ್ ಯಾತ್ರಿಕರ ಗುಂಪು ನಿಲ್ದಾಣದಲ್ಲಿ ಸಿಆರ್‌ಪಿಎಫ್ ಯೋಧನ ಮೇಲೆ ಹಲ್ಲೆ ನಡೆಸಿದ್ದರು. ಬ್ರಹ್ಮಪುತ್ರ ಮೇಲ್ ರೈಲು ಹತ್ತಲು ಮುಂದಾಗಿದ್ದ ಕನ್ವರ್‌ಗಳ ಗುಂಪು ಸಿಆರ್‌ಪಿಎಫ್ ಯೋಧನ ಮೇಲೆ ಹಲ್ಲೆ ನಡೆಸಿತ್ತು. ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿ ಜಾಲ ತಾಣದಲ್ಲಿ ವೈರಲ್ ಆಗಿತ್ತು. ಆ ಬಳಿಕ ಎಚ್ಚೆತ್ತ ಪೊಲೀಸರು ಘಟನೆ ಸಂಬಂಧ ಮೂವರನ್ನು ಬಂಧಿಸಿದ್ದಾರೆ.

ಬೆಂಗಳೂರು ಮಹಿಳೆ ಕರೂರಿನಲ್ಲಿ ಕೊಲೆ

ಕರೂರು: ತಮಿಳುನಾಡಿನ ಕರೂರು ಜಿಲ್ಲೆಯ ಕುಳಿತಲೈ ಸರಕಾರಿ ಜಿಲ್ಲಾಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿದ್ದ ಪತ್ನಿ ವಿ.ಶ್ರುತಿ(27)ಯನ್ನು ಪತಿ, ಮರುಧೂರ್ ಸಮೀಪದ ಪಟ್ಟವರ್ತಿಯ ಕಾರು ಚಾಲಕ ಆರ್.ವಿಶ್ರುತ್ (28) ಭಾನುವಾರ ಮುಂಜಾನೆ ಚಾಕುವಿನಿಂದ ಇರಿದು ಕೊಂದಿದ್ದಾನೆ. ವಿಶ್ರುತ್ ಬೆಂಗಳೂರು ಮೂಲದ ಶ್ರುತಿಯನ್ನು ಪ್ರೀತಿಸಿ 7 ವರ್ಷಗಳ ಹಿಂದೆ ವಿವಾಹವಾಗಿದ್ದ. ದಂಪತಿಗೆ ಇಬ್ಬರು ಪುಟ್ಟ ಮಕ್ಕಳಿದ್ದಾರೆ. ಪಟ್ಟವರ್ತಿ ಮನೆಯಲ್ಲಿ ದಂಪತಿ ನಡುವೆ ಶನಿವಾರ ರಾತ್ರಿ ಜಗಳ ನಡೆದಿದೆ. ವಿಶ್ರುತ್ ಹಲ್ಲೆಯಿಂದ ಗಾಯಗೊಂಡಿದ್ದ ಶ್ರುತಿಯನ್ನು ನೆರೆಹೊರೆಯವರೇ ಚಿಕಿತ್ಸೆಗಾಗಿ ಕುಳಿತಲೈ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿಗೂ ಬಂದ ಪತಿ, ಇರಿದು ಕೊಲೆ ಮಾಡಿ ಪರಾರಿಯಾಗಿದ್ದಾನೆ. ಕುಳಿತಲೈ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿ ಪತ್ತೆಗೆ ಶೋಧ ನಡೆಸಿದ್ದಾರೆ.

{ **ಶಶಿ ತರೂರ್** } ಕಾಂಗ್ರೆಸ್ ಸಂಸದ

ರಾಷ್ಟ್ರದ ಭದ್ರತೆ ವಿಷಯ ಬಂದಾಗ ಬೇರೆ ಪಕ್ಷಗಳ ಜತೆಗೆ ಸಹಕರಿಸುವುದು ಅತ್ಯಗತ್ಯವಾಗುತ್ತದೆ. ನನಗೆ ರಾಷ್ಟ್ರದ ಭದ್ರತೆ ವಿಚಾರ ಸದಾ ಮೊದಲ ಆದ್ಯತೆಯಾಗಿದೆ. ಯಾವುದೇ ರಾಜಕೀಯ ಪಕ್ಷವಾಗಲಿ ಅದರ ಮುಖ್ಯ ದೃಷ್ಟಿಕೋನ ಉತ್ತಮ ಭಾರತದ ನಿರ್ಮಾಣವೇ ಆಗಿರುತ್ತದೆ. ಆದರೆ, ನಮ್ಮ ದೇಶದಲ್ಲಿನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 'ರಾಜಕಾರಣ' ಎಂದರೆ 'ಪೈಪೋಟಿ' ಎಂದಾಗಿದೆ.

ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಫೆ.13 ಲೋಕಸಭೆಯಲ್ಲಿ ಮಂಡಿಸಿದ ವಿಧೇಯಕ

ನೂತನ ಆದಾಯ ತೆರಿಗೆ ವಿಧೇಯಕದ ಸಂಸತ್ ಸಮಿತಿ ವರದಿ ಇಂದು ಮಂಡನೆ

ದೆಹಲಿ: ಸಂಸತ್ತಿನ ಮಳೆಗಾಲ ಅಧಿವೇಶನ ಸೋಮವಾರ ಆರಂಭಗೊಂಡು ಆ.21ರವರೆಗೂ ಜರುಗಲಿದೆ. ಈ ಸಂದರ್ಭ ದೇಶದ ಜನರ ಜೀವನ, ವೃತ್ತಿ ಜೀವನದ ಮೇಲೆ ದೊಡ್ಡ ಮಟ್ಟದಲ್ಲಿ ಪರಿಣಾಮ ಬೀರುವಂತಹ 'ನೂತನ ಆದಾಯ ತೆರಿಗೆ ವಿಧೇಯಕ' ಕುರಿತು 31 ಸಂಸದರ ಸಮಿತಿ ನಡೆಸಿದ ಅಧ್ಯಯನದ ವರದಿಯನ್ನು ಇದೇ ಅಧಿವೇಶನದಲ್ಲಿ ಮಂಡಿಸಲು ಕೇಂದ್ರ ಸರಕಾರ ಮುಂದಾಗಿದೆ.

ಆರು ದಶಕಗಳಷ್ಟು ಹಳೆಯದಾದ ಆದಾಯ ತೆರಿಗೆ ಕಾಯಿದೆಯನ್ನು ಬದಲಿಸುವ 'ದಿ ನ್ಯೂ ಇನ್‌ಕಂ ಟ್ಯಾಕ್ಸ್ ಬಿಲ್-2025'(ನೂತನ ಆದಾಯ ತೆರಿಗೆ ವಿಧೇಯಕ-2025) ಅನ್ನು ಪರಿಶೀಲಿಸಲು ರಚಿಸಲಾಗಿದ್ದ ಸಂಸದೀಯ ಸಮಿತಿಯು, ಹಲವು ಸಲಹೆಗಳೊಂದಿಗೆ ವಿಸ್ತಾರವಾದ ವರದಿಯನ್ನು ಕೇಂದ್ರ ಸರಕಾರಕ್ಕೆ ಸಲ್ಲಿಸಿದ್ದು, ಆ ವರದಿಯನ್ನು ಲೋಕಸಭೆಯಲ್ಲಿ ಸೋಮವಾರ ಮಂಡಿಸಲು ನಿರ್ಧರಿಸಲಾಗಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆ.13ರಂದು ಲೋಕಸಭೆಯಲ್ಲಿ 'ಹೊಸ ಆದಾಯ ತೆರಿಗೆ ವಿಧೇಯಕ- 2025' ಮಂಡಿಸಿದ್ದರು. ಹೊಸ ವಿಧೇಯಕದಲ್ಲಿನ ಅಂಶಗಳು, ಅದರ ಪರಿಣಾಮಗಳನ್ನು ಅಧ್ಯಯನ ಮಾಡಿ ಪರಿಶೀಲಿಸಲೆಂದು ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಬಿಜೆಪಿ ಸಂಸದ ಬೈಜಯಂತ್ ಪಾಂಡಾ ಅವರ ಅಧ್ಯಕ್ಷತೆಯಲ್ಲಿ 31 ಸದಸ್ಯರ ಸಮಿತಿ ಯನ್ನು ರಚಿಸಿದ್ದರು. ಪಾಂಡಾ ಅವರ ನೇತೃತ್ವದ ಸಮಿತಿ ಯು 'ಹೊಸ ಆದಾಯ ತೆರಿಗೆ ವಿಧೇಯಕ- 2025'ಅನ್ನು ಸಮಗ್ರವಾಗಿ ಪರಿಶೀಲಿಸಿ 285 ಸಲಹೆಗಳನ್ನು ಒಳಗೊಂಡ ವರದಿಯಲ್ಲಿ ಸರಕಾರಕ್ಕೆ ಸಲ್ಲಿಸಿದೆ. ಆ ಬಳಿಕ ಜು.16ರಂದು ನಡೆದ ಸಂಪುಟ ಸಭೆಯಲ್ಲಿ 'ಹೊಸ ಐಟಿ ಮಸೂದೆ- 2025'ರ ಕುರಿತು ಸಮಿತಿ ಸಲಹೆಗಳ ಸಮೇತ ನೀಡಿದ ವರದಿಯನ್ನು ಅಂಗೀಕರಿಸಲಾಗಿದ್ದು, ವರದಿ ಯನ್ನು ಮುಂದಿನ ಕ್ರಮಕ್ಕಾಗಿ ಲೋಕಸಭಾ ಸದನದಲ್ಲಿ ಸೋಮ ವಾರದ ಕಲಾಪದ ವೇಳೆ ಮಂಡಿಸಲು ಸರಕಾರ ನಿರ್ಧರಿಸಿದೆ.

- ಪರಿಶೀಲನೆಗೆ ಬಿಜೆಪಿ ಸಂಸದ ಬೈಜಯಂತ್ ಪಾಂಡಾ ನೇತೃತ್ವದಲ್ಲಿ 31 ಸಂಸದರ ಸಮಿತಿ
- ಸಮಗ್ರ ಅಧ್ಯಯನ ಬಳಿಕ 285 ಸಲಹೆಗಳೊಂದಿಗೆ ವರದಿ ಮಂಡಿಸಿರುವ ಸಂಸತ್ ಸಮಿತಿ
- ಸಲಹೆಗಳ ಸಮೇತದ ಸಮಿತಿಯ ವರದಿಗೆ ಜು.16ರ ಕೇಂದ್ರ ಸಂಪುಟ ಸಭೆ ಅಂಗೀಕಾರ

ಹೆಸರು-ಪದ ಬದಲು!

ತೆರಿಗೆದಾರರು ಪದೇ ಪದೇ ಕೇಳುವ ಪ್ರಶ್ನೆಗಳನ್ನು ಆಧರಿಸಿ ಆದಾಯ ತೆರಿಗೆ ಇಲಾಖೆಯು ಹೊಸ ಕಾಯಿದೆಯಲ್ಲಿ ಅಧ್ಯಾಯಗಳ ಸಂಖ್ಯೆಯನ್ನು 47 ರಿಂದ 23ಕ್ಕೆ ಇಳಿಸಿದೆ. 1961ರ ಆದಾಯ ತೆರಿಗೆ ಕಾಯಿದೆಯಲ್ಲಿ ಉಲ್ಲೇಖಿಸಿರುವ 'ಹಿಂದಿನ ವರ್ಷ' ಎಂಬ ಪದದಿಂದ ತೆರಿಗೆದಾರರಲ್ಲಿ ಉಂಟಾಗುತ್ತಿದ್ದ ಗೊಂದಲವನ್ನು ತಪ್ಪಿಸಲು ಆ ಪದವನ್ನು 'ತೆರಿಗೆ ವರ್ಷ' ಎಂದು ಬದಲಿಸಲಾಗುತ್ತಿದೆ. ಅಲ್ಲದೆ, 'ಅಸೆಸ್‌ಮೆಂಟ್ ಇಯರ್'(ತೆರಿಗೆ ಮೌಲ್ಯಮಾಪನ ವರ್ಷ) ಪರಿಕಲ್ಪನೆಯನ್ನೂ ತೆಗೆದುಹಾಕಲಾಗಿದೆ.

ಅರ್ಧ ತಗ್ಗಿದ ಕಾಯಿದೆ ಗಾತ್ರ, ಪದಗಳ ಸಂಖ್ಯೆ

ಫೆ.13ರಂದು ಲೋಕಸಭೆಯಲ್ಲಿ ನೂತನ ಆದಾಯ ತೆರಿಗೆ ವಿಧೇಯಕವನ್ನು ಪರಿಚಯಿಸುವಾಗ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಹೊಸ ಮಸೂದೆಯಲ್ಲಿ ಬಹಳಷ್ಟು ಬದಲಾವಣೆಗಳನ್ನು ಮಾಡಲಾಗಿದೆ. ಪ್ರಸ್ತುತ ಜಾರಿಯಲ್ಲಿರುವ ಆದಾಯ ತೆರಿಗೆ ಮಸೂದೆಯಲ್ಲಿ 5.12 ಲಕ್ಷ ಪದಗಳಿವೆ. ಹೊಸ ವಿಧೇಯಕದಲ್ಲಿ ಪದಗಳ ಸಂಖ್ಯೆಯನ್ನು ಅರ್ಧದಷ್ಟು ಕಡಿಮೆ ಮಾಡಲಾಗಿದೆ.

ಬೈಜಯಂತ್ ಪಾಂಡಾ

ಅಲ್ಲದೇ ಹಳೆಯ ಆದಾಯ ತೆರಿಗೆ ಕಾಯಿದೆಯಲ್ಲಿದ್ದ 819 ವಿಭಾಗಗ ಳನ್ನು ಹೊಸ ವಿಧೇಯಕದಲ್ಲಿ 236ಕ್ಕೆ ಇಳಿಸಲಾಗಿದೆ ಎಂದು ವಿವರಿಸಿದ್ದರು. ಸದ್ಯ ಬಳಕೆಯಲ್ಲಿರುವ ಐಟಿ ಕಾಯಿದೆ ಯಿಂದ 1,200 ನಿಬಂಧನೆಗಳು ಮತ್ತು 900 ವಿವರಣೆಗಳನ್ನು ತೆಗೆದುಹಾಕಲಾಗಿದೆ. ನೂತನ ಆದಾಯ ತೆರಿಗೆ ವಿಧೇಯಕ-2025 ಒಟ್ಟು 57 ಕೋಷ್ಟಕಗಳನ್ನು ಹೊಂದಿದೆ. ತೆರಿಗೆ ವಿನಾಯಿತಿಗಳು ಮತ್ತು ಮೂಲದಲ್ಲೇ ತೆರಿಗೆ ಕಡಿತ(ಟಿಡಿಎಸ್/ಟಿಸಿಎಸ್)ಕ್ಕೆ ಸಂಬಂಧಿಸಿದ ನಿಬಂಧನೆಗಳನ್ನು ಕೋಷ್ಟಕ ರೂಪದಲ್ಲಿ ಇರಿಸುವ ಮೂಲಕ ಹೊಸ ವಿಧೇಯಕದಲ್ಲಿ ಹೆಚ್ಚು ಸ್ಪಷ್ಟಗೊಳಿಸಲಾಗಿದೆ. ಆದರೆ ಲಾಭಾಕಾಂಕ್ಷೆಯಿಲ್ಲದ ಸೇವಾ ಉದ್ದೇಶದ ಸಂಸ್ಥೆಗಳಿಗೆ ಸಂಬಂಧಿಸಿದ ಅಧ್ಯಾಯವನ್ನು ಸರಳ ಭಾಷೆಯಲ್ಲೇ ಸಮಗ್ರಗೊಳಿಸಲಾಗಿದೆ. ಪರಿಣಾಮವಾಗಿ ಸಂಖ್ಯೆ ಲೆಕ್ಕದಲ್ಲಿ 34,547 ಪದಗಳು ನೂತನ ವಿಧೇಯಕದಲ್ಲಿ ಕಡಿಮೆಯಾಗಿವೆ.

ಸರಳ ಅರ್ಥದಲ್ಲಿ ಆರ್ಥಿಕ ಸಂಗತಿ

1961ರ ಆದಾಯ ತೆರಿಗೆ ಕಾಯಿದೆಯ ಕಠಿಣ ನಿಯಮಗಳ ಪುಸ್ತಕ ಗಾತ್ರದಲ್ಲಿಯೂ ಬಹಳ ದೊಡ್ಡದಾಗಿತ್ತು. ಅದನ್ನು ಕೇಂದ್ರ ಹಣಕಾಸು ಸಚಿವಾಲಯದ ಪರಿಣತರು ಆದಷ್ಟೂ ಸರಳಗೊಳಿಸಲು ಯತ್ನಿಸಿದ್ದಾರೆ. ಅಲ್ಲದೇ, ಕಾಯಿದೆ ಪುಸ್ತಕದ ಗಾತ್ರವನ್ನೂ ಅರ್ಧಕ್ಕೆ ತಗ್ಗಿಸಲು ಬಹಳ ಶ್ರಮಿಸಿದ್ದಾರೆ. ಸರಳೀಕೃತವಾಗಿರುವ ನೂತನ ಆದಾಯ ತೆರಿಗೆ ವಿಧೇಯಕ, ತೆರಿಗೆ ದಾವೆಗಳ ವ್ಯಾಪ್ತಿಯನ್ನು ಕಡಿಮೆ ಮಾಡಲಿದೆ. ಆ ಮೂಲಕ ಆದಾಯ ತೆರಿಗೆ ಪದ್ಧತಿಗೆ ಹೊಸ ವ್ಯಾಖ್ಯಾನ ನೀಡಲಿದೆ. ಆ ಮೂಲಕ ತೆರಿಗೆ ಖಚಿತತೆ ಸಾಧಿಸುವ ಗುರಿ ಇಟ್ಟುಕೊಂಡಿದೆ.

20 ವರ್ಷ ಕೋಮಾ: ಸೌದಿ ಸ್ಲೀಪಿಂಗ್ ಪ್ರಿನ್ಸ್ ನಿಧನ

ರಿಯಾದ್: ಸೌದಿ ಅರೇಬಿಯಾದ ರಾಜಕುಮಾರ ಅಲ್ ವಲೀದ್ ಬಿನ್ ಖಾಲಿದ್ ಬಿನ್ ತಲಾಲ್ ಬಿನ್ ಅಬ್ದುಲಜೀಜ್ ಅಲ್ ಸೌದ್(36) ಶನಿವಾರ ನಿಧನರಾದರು. ಅಂತ್ಯಕ್ರಿಯೆ ಭಾನುವಾರ ರಿಯಾದ್‌ನಲ್ಲಿ ನಡೆದಿದೆ. ಎಂದು ರಾಜಮನೆತನದ ಅಧಿಕಾರಿಗಳು ಸೌದಿ ಅರೇಬಿಯ ಮಾಧ್ಯಮಗಳಿಗೆ ತಿಳಿಸಿದ್ದಾರೆ.

20 ವರ್ಷ ಕೋಮಾದಲ್ಲಿದ್ದ ಅವರು 'ಸ್ಲೀಪಿಂಗ್ ಪ್ರಿನ್ಸ್' ಎಂದೇ ಹೆಸರಾಗಿದ್ದರು. ಎಲ್ಲಾ ರೀತಿಯ ವೈದ್ಯಕೀಯ ಚಿಕಿತ್ಸೆಗಳ ಹೊರತಾಗಿಯೂ ರಾಜಕುಮಾರ ತಲಾಲ್‌ರಲ್ಲಿ ಚೇತರಿಕೆ ಕಂಡಿರಲಿಲ್ಲ. ಆದರೆ, ಇವತ್ತಲ್ಲದಿದ್ದರೆ ನಾಳೆ ತಲಾಲ್ ಕೋಮಾದಿಂದ ಹೊರಬರುತ್ತಾನೆ ಎಂಬ ಆಶಾಭಾವ ಅವರ ತಂದೆ ಪ್ರಿನ್ಸ್ ಖಾಲೀದ್ ಬಿನ್ ತಲಾಲ್ ಬಿನ್ ಅಬ್ದುಲ್ ಅಜೀಜ್ ಮತ್ತು ಕುಟುಂಬ ವರ್ಗದವರಲ್ಲಿತ್ತು. ರಾಜಕುಮಾರ ಅಲ್

-ವಲೀದ್, ಸೌದಿ ಅರೇಬಿಯಾ ಸಂಸ್ಥಾಪಕ ರಾಜ ಅಬ್ದುಲ್ ಅಜೀಜ್ ಅವರ ಮರಿ ಮೊಮ್ಮಗ, ರಾಜಕುಮಾರ ತಲಾಲ್ ಬಿನ್ ಅಬ್ದುಲ್ ಅಜೀಜ್ ಅವರ ಪುತ್ರ. ಸೌದಿ ರಾಜಮ ನೆತನದ ಉತ್ತರಾಧಿಕಾರಿಯಾಗಬೇಕಿದ್ದ ರಾಜಕುಮಾರ ಅಲ್-ವಲೀದ್, 2005ರಲ್ಲಿ ಲಂಡನ್ ಮಿಲಿಟರಿ ಕಾಲೇಜಿನಲ್ಲಿ ಓದುವಾಗ ಅಪಘಾತವಾಗಿತ್ತು. ಪ್ರಜ್ಞಾಹೀನರಾಗಿ 20 ವರ್ಷಗಳಿಂದ ವೆಂಟಿ ಲೇಟರ್ ಸಹಾಯದಲ್ಲಿ ಬದುಕಿದ್ದರು. ಕೊಳವೆ ಮೂಲಕ ಆಹಾರ ನೀಡಲಾಗುತ್ತಿತ್ತು.

ವಿಯೆಟ್ನಾಂ: ಪ್ರವಾಸಿಗರಿದ್ದ ದೋಣಿ ಮುಳುಗಿ 37 ಬಲಿ

ಹನೋಯಿ: ವಿಯೆಟ್ನಾಂನಲ್ಲಿ ಪ್ರವಾಸಿಗರುಗಳಿದ್ದ ದೊಡ್ಡ ದೋಣಿಯೊಂದು ಸುರಿದ ಮಳೆಯಿಂದಾಗಿ ನೀರಿನಲ್ಲಿ ತಲೆಕೆಳಗಾಗಿ ಮಗುಚಿಬಿದ್ದಿದೆ. ಪರಿಣಾಮ 37 ಪ್ರವಾಸಿಗರು ಸಾವಿಗೀಡಾಗಿದ್ದಾರೆ. 11 ಜನರ ರಕ್ಷಣೆಯಾಗಿದೆ. ಆದರೆ, ಐವರು ನಾಪತ್ತೆಯಾಗಿದ್ದಾರೆ ಎಂದು ವರದಿಯಾಗಿದೆ.

ಹಾ ಲಾಂಗ್ ಕೊಲ್ಲಿ ಪ್ರವಾಸಿ ತಾಣದಲ್ಲಿ ಶನಿವಾರ ಮಧ್ಯಾಹ್ನ ವೇಳೆಗೆ ಗುಡುಗು ಸಹಿತ ಭಾರೀ ಮಳೆ ಸುರಿದಿದ್ದರಿಂದ ದೋಣಿಗೆ ನೀರು ತುಂಬಿಕೊಂಡು, ಬಳಿಕ ಚಾಲಕನ ನಿಯಂತ್ರಣ ತಪ್ಪಿ ದೋಣಿ ತಲೆಕೆಳಗಾಗಿದೆ. ದೋಣಿಯಲ್ಲಿ 20 ಮಕ್ಕಳು ಸೇರಿದಂತೆ 48 ಪ್ರಯಾಣಿಕರಿದ್ದರು. ಅಲ್ಲದೇ, ದೋಣಿಯ ಐವರು ಸಿಬ್ಬಂದಿಗಳೂ ಇದ್ದರು. ದೋಣಿ ತಲೆಕೆಳಗಾಗಿದ್ದರಿಂದ ಎಲ್ಲರೂ ನೀರಿನಲ್ಲಿ ಮುಳುಗಿದರು. ಈಜು ತಿಳಿದ 11 ಮಂದಿ ಪಾರಾದರೆ, 37 ಜನರು ಸಾವಿಗೀಡಾದರು. ಉಳಿದ ಐವರಿಗಾಗಿ ಶನಿವಾರ ರಾತ್ರಿಯಿಡೀ ಶೋಧ ನಡೆಸಿದ್ದು, ಭಾನುವಾರವೂ ಶೋಧ ಕಾರ್ಯ ಮುಂದುವರಿಸಲಾಗಿದೆ. ದೋಣಿ ಮುಳುಗಿದ ವಿಷಯ ತಿಳಿದ ಕೂಡಲೇ ರಕ್ಷಣಾ ತಂಡಗಳು ಸ್ಥಳಕ್ಕೆ ಧಾವಿಸಿದ್ದು, 37 ಶವಗಳನ್ನು ನೀರಿನಿಂದ ಹೊರತೆಗೆದಿವೆ. ಈ ವೇಳೆ ತಲೆಕೆಳಗಾಗಿದ್ದ ದೋಣಿಯಡಿ ಗಾಳಿಯಾಡುತ್ತಿದ್ದ ಭಾಗದಲ್ಲಿ 14 ವರ್ಷದ ಬಾಲಕನೊಬ್ಬ ಪವಾಡ ಸದೃಶವಾಗಿ ಬದುಕುಳಿದಿದ್ದಾನೆ.

ಇಂಡೋನೇಷ್ಯಾ ಹಡಗಿಗೆ ಬೆಂಕಿ, 3 ಸಾವು

ಕೌಲಾಲಂಪುರ: ಇಂಡೋನೇಷ್ಯಾದಲ್ಲಿ 280 ಪ್ರಯಾಣಿಕರಿದ್ದ 'ಕೆಎಂ ಬಾರ್ಸಿಲೋನಾ ವಿಎ' ಹಡಗಿನಲ್ಲಿ ಭಾನುವಾರ ಮಧ್ಯಾಹ್ನ ಅಗ್ನಿ ಅವಘಡ ಸಂಭವಿಸಿ, ಮೂವರು ಸಾವನ್ನಪ್ಪಿದ್ದಾರೆ.

ಹಡಗು ತಲೌಡ್ ದ್ವೀಪದಿಂದ ಮನಾಡೊ ನಗರದತ್ತ ಸಂಚರಿಸುತ್ತಿದ್ದಾಗ, ಉತ್ತರ ಸುಲವೇಸಿ ಪ್ರಾಂತ್ಯದ ತಾಲಿಸ್ ದ್ವೀಪದ ಬಳಿ ಹಡಗಿಗೆ ಇದ್ದಕ್ಕಿದ್ದಂತೆ ಬೆಂಕಿ ಹೊತ್ತಿಕೊಂಡಿದೆ. ಕ್ಷಣಮಾತ್ರದಲ್ಲಿ ಹಡಗಿನ ಬೇರೆಡೆಗೂ ವ್ಯಾಪಿಸಲಾರಂಭಿಸಿದೆ. ಬೆಂಕಿ ಹರುಡುತ್ತಿದ್ದಂತೆ ಆತಂಕಗೊಂಡ ಪ್ರಯಾಣಿಕರು ಹಡಗಿನಿಂದ ನೀರಿಗೆ ಹಾರಿದರು. ಕೆಲವು ಪ್ರಯಾಣಿಕರು ಭಯದಲ್ಲೂ ಲೈಫ್ ಜಾಕೆಟ್‌ಗಳನ್ನು ಧರಿಸಿ ಸಹಾಯಕ್ಕಾಗಿ ಕೂಗುತ್ತಾ, ಅಗ್ನಿಯ ಜ್ವಾಲೆ, ದಟ್ಟ ಹೊಗೆ ಮಧ್ಯೆಯೇ ನೀರಿಗೆ ಹಾರುತ್ತಿರುವ ದೃಶ್ಯ ವಿಡಿಯೋದಲ್ಲಿ ಸೆರೆಯಾಗಿದೆ. ಹಡಗಿಗೆ ಬೆಂಕಿ ಬಿದ್ದಿರುವ ಸುದ್ದಿ ತಿಳಿಯುತ್ತಲೇ ಇಂಡೋನೇಷ್ಯಾದ ರಾಷ್ಟ್ರೀಯ ರಕ್ಷಣಾ ಕಾರ್ಯಾಚರಣೆ ತಂಡ ಮತ್ತು ನೌಕಾಪಡೆ, ಕರಾವಳಿ ಕಾವಲು ಪಡೆಗಳು ಸ್ಥಳಕ್ಕೆ ಧಾವಿಸಿ ಬಂದಿವೆ. ಜತೆಗೆ

ಸ್ಥಳೀಯ ಮೀನುಗಾರರೂ ಸೇರಿಕೊಂಡು ಹಡಗಿನಲ್ಲಿದ್ದವರನ್ನು, ಹಡಗಿನಿಂದ ಕಡಲಿಗೆ ಜಿಗಿದವರನ್ನು ರಕ್ಷಿಸಿದ್ದಾರೆ.

ಭಾನುವಾರ ಸಂಜೆಯವರೆಗೂ 150 ಮಂದಿಯನ್ನು ರಕ್ಷಿಸಲಾಗಿದೆ ಎಂದು ರಾಷ್ಟ್ರೀಯ ರಕ್ಷಣಾ ಕಾರ್ಯಾಚರಣೆ ಇಲಾಖೆಯ ಹಿರಿಯ ಅಧಿಕಾರಿ ವೆರಿ ಅರಿಯಂಟೊ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

9 ವರ್ಷದ ಬಳಿಕ ಭಾರತ-ನೇಪಾಳ ಸಭೆ

ಕಠ್ಮಂಡು: 9 ವರ್ಷಗಳ ಬಳಿಕ ಭಾರತ ಮತ್ತು ನೇಪಾಳ ನಡುವೆ ದೆಹಲಿಯಲ್ಲಿ ಮಹತ್ವದ ಸಭೆ ನಡೆಯಲಿದೆ ಎಂದು 'ಕಠ್ಮಂಡು ಪೋಸ್ಟ್' ಭಾನುವಾರ ವರದಿ ಮಾಡಿದೆ. ಎರಡೂ ದೇಶಗಳ ನಡುವೆ ದೀರ್ಘಕಾಲದಿಂದ ಬಾಕಿ ಇರುವ ಪ್ರಕರಣಗಳ ಇತ್ಯರ್ಥಕ್ಕೆ ಈ ಸಭೆ ಕಾರಣವಾಗಬಹುದಾಗಿದೆ. ಈ ಸಭೆ ಬಹಳ 'ಸಕಾರಾತ್ಮಕವಾದ ಮತ್ತು ದೊಡ್ಡದಾದ ಹೆಜ್ಜೆ' ಆಗಿದೆ ಎಂದು ನೇಪಾಳದ ಗೃಹ ಸಚಿವ ರಮೇಶ್ ಲೇಖಕ್ ಬಣ್ಣಿಸಿದ್ದಾರೆ. ನೇಪಾಳದ ಗೃಹ ಕಾರ್ಯದರ್ಶಿ ಗೋಕರ್ಣ ಮಣಿದ್ವಾಡಿ ಮತ್ತು ಭಾರತದ ಗೃಹ ಕಾರ್ಯದರ್ಶಿ ಗೋವಿಂದ ಮೋಹನ್ ನಡುವೆ 2 ದಿನ ಸಭೆ ನಡೆಯಲಿದೆ. ಗಡಿ ಸಮಸ್ಯೆ, ಗಡಿಯಾಚೆಗಿನ ಅಪರಾಧ, ಮಾನವ ಕಳ್ಳಸಾಗಣೆ, ಮಾದಕವಸ್ತು ಕಳ್ಳಸಾಗಣೆ ವಿಚಾರ ಚರ್ಚೆಯಾಗಲಿದೆ.

ಗೂಗಲ್ ಅರ್ಥ್‌ನಿಂದ ಹೊಸ ಉಪಗ್ರಹ ಚಿತ್ರಗಳು ಪ್ರಕಟ

ಪಾಕ್ ಅಣ್ವಸ್ತ್ರ ನೆಲೆ ಬಳಿ ಬ್ರಹ್ಮೋಸ್ ಗುರುತು!

ವಾಷಿಂಗ್ಟನ್: ಆಪರೇಷನ್ ಸಿಂದೂರ್ ಸೇನಾ ಕಾರ್ಯಾಚರಣೆ ವೇಳೆ ಪಾಕಿಸ್ತಾನದ ಮೇಲೆ ಭಾರತದ ಸೇನಾಪಡೆಗಳು ಬ್ರಹ್ಮೋಸ್ ಕ್ಷಿಪಣಿಗಳನ್ನು ಪ್ರಯೋಗಿಸಿದ್ದವು. ಆ ದಾಳಿಯ ಗುರುತುಗಳು ಇಂದಿಗೂ ಪಾಕಿಸ್ತಾನದ ಸರ್ಗೋಧಾ ಜಿಲ್ಲೆಯಲ್ಲಿರುವ ಕಿರಾನಾ ಬೆಟ್ಟದಲ್ಲಿ ಗೋಚರಿಸುತ್ತಿವೆ ಎಂಬುದನ್ನು ಉಪಗ್ರಹ ಚಿತ್ರಗಳೂ ಮತ್ತೊಮ್ಮೆ ದೃಢಪಡಿಸುತ್ತಿವೆ. ಗೂಗಲ್ ಅರ್ಥ್ ಸಂಸ್ಥೆಯು ಹೊಸ ಉಪಗ್ರಹ ಚಿತ್ರಗಳನ್ನು ಇತ್ತೀಚೆಗೆ ಬಿಡುಗಡೆ ಮಾಡಿದೆ.

ಭಾರತ ನಡೆಸಿದ ಆಪರೇಷನ್ ಸಿಂದೂರ್‌ನಲ್ಲಿ ತನ್ನ ನೆಲದಲ್ಲಿ ಯಾವುದೇ ಹಾನಿಯಾಗಿಲ್ಲ ಎಂದು ಪಾಕಿಸ್ತಾನ ಹೇಳಿಕೊಳ್ಳುತ್ತಿದೆ. ಆದರೆ ಉಪಗ್ರಹದ ಮೂಲಕ ಆಪರೇಷನ್ ಸಿಂದೂರ್ ಕಾರ್ಯಾಚರಣೆ ದಿನಗಳಲ್ಲಿ ತೆಗೆಯಲಾಗಿರುವ ಚಿತ್ರಗಳು ಪಾಕ್‌ನ ಅಣ್ವಸ್ತ್ರಗಳ ಪ್ರಮುಖ ನೆಲೆಯಾದ ಕಿರಾನಾ ಬೆಟ್ಟದ ಮೇಲೆ ಬ್ರಹ್ಮೋಸ್ ಕ್ಷಿಪಣಿ ದಾಳಿ ನಡೆದಿರುವುದನ್ನು ದೃಢಪಡಿಸುತ್ತಿವೆ. ಕಿರಾನಾ ಬೆಟ್ಟದ ಸರಣಿಯಲ್ಲಿ ಪಾಕಿಸ್ತಾನದ ಅಣ್ವಸ್ತ್ರಗಳ ಸಂಗ್ರಹವಿರುವ ಪ್ರದೇಶದಲ್ಲಿನ ಸೆಂಟ್ರಿ ಪೋಸ್ಟ್‌ನಿಂದ ಕೇವಲ 150 ಮೀಟರ್‌ಗಳಷ್ಟು ದೂರದಲ್ಲಿಯೇ ಭಾರತದ ಬ್ರಹ್ಮೋಸ್ ಕ್ಷಿಪಣಿ ಅಪ್ಪಳಿಸಿದೆ. ಆ ಜಾಗದಲ್ಲಿ ದೊಡ್ಡ ಕುಳಿ ಬಿದ್ದಿರುವುದು ಉಪಗ್ರಹ ಚಿತ್ರದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿದೆ.



ಅಲ್ಲದೇ, ಬ್ರಹ್ಮೋಸ್ ಕ್ಷಿಪಣಿ ಕಿರಾನಾ ಬೆಟ್ಟಗಳ ಸರಣಿಯಲ್ಲಿ ಹಲವೆಡೆ ಅಪ್ಪಳಿಸಿದಾಗ ಆ ಭಾಗದಲ್ಲಿ ದೊಡ್ಡದಾಗಿ ಹೊಗೆ ಮೇಲೆದ್ದಿರುವುದರ ದೃಶ್ಯಾವಳಿ ವಿಡಿಯೊವೊಂದರಲ್ಲಿ ಸೆರೆಯಾಗಿರುವುದನ್ನೂ ಈಗ ಬಿಡುಗಡೆ ಮಾಡಲಾಗಿದೆ. ಕಿರಾನಾ ಬೆಟ್ಟಗಳ ಸಾಲಿನಲ್ಲೇ ಪಾಕ್‌ನ ಅಣ್ವಸ್ತ್ರಗಳ ಸಂಗ್ರಹವಿದೆ ಎಂದು ನಂಬಲಾಗಿದೆ.

ಪಾಕ್‌ನ ಪ್ರಮುಖ ವಾಯುನೆಲೆ ಎನಿಸಿಕೊಂಡಿರುವ ಸರ್ಗೋದಾ ವಾಯುನೆಲೆಯ ರನ್‌ವೇಗಳು ಭಾರತದ ದಾಳಿ ವೇಳೆ ಪೂರ್ಣ ಹಾಳಾಗಿದ್ದವು. ಅವನ್ನು ಈಗ ದುರಸ್ತಿ ಮಾಡಿರುವುದನ್ನು ಇತ್ತೀಚೆಗಿನ ಉಪಗ್ರಹ ಚಿತ್ರಗಳು ತೋರಿಸಿವೆ.

15 ಬ್ರಹ್ಮೋಸ್ ಕ್ಷಿಪಣಿ

ಆಪರೇಷನ್ ಸಿಂದೂರ್ ಕಾರ್ಯಾಚರಣೆಯಲ್ಲಿ ಭಾರತ ಮೇ 9-10 ರ ರಾತ್ರಿ 15 ಬ್ರಹ್ಮೋಸ್ ಕ್ಷಿಪಣಿಗಳನ್ನು, ರಫೇಲ್ ಯುದ್ಧ ವಿಮಾನಗಳನ್ನು ಬಳಸಿ ಪಾಕ್ ಮೇಲೆ ದಾಳಿ ನಡೆಸಿತ್ತು. ಈ ದಾಳಿಯಲ್ಲಿ ಪಾಕ್‌ನ 11 ಪ್ರಮುಖ ವಿಮಾನ ನಿಲ್ದಾಣಗಳಿಗೆ ಹಾನಿಯಾಗಿತ್ತು. ವಾಯು ರಕ್ಷಣಾ ವ್ಯವಸ್ಥೆ ಮತ್ತು ವಾಯುಪಡೆ ಮೂಲಸೌಕರ್ಯಕ್ಕೆ ಭಾರಿ ಹೊಡೆತ ಬಿದ್ದಿತ್ತು.

ಬಾಗಲಕೋಟದ ವಿದ್ಯಾರ್ಥಿಗೆ ಜಾಮೀನು

ಕೋಲ್ಕತ್ತ: ಪಶ್ಚಿಮ ಬಂಗಾಳದಲ್ಲಿನ 'ಐಐಎಂ-ಕೆ' ಕಾಲೇಜಿನ ವಿದ್ಯಾರ್ಥಿಗೆ ಕೌನ್ಸಿಲಿಂಗ್‌ಗೆಂದು ವಿದ್ಯಾರ್ಥಿನಿಲಯಕ್ಕೆ ತೆರಳಿದ್ದ ಯುವತಿ ಮೇಲೆ ಬಾಗಲ ಕೋಟ ಮೂಲದ ವಿದ್ಯಾರ್ಥಿ ಅತ್ಯಾಚಾರ ನಡೆಸಿ ಬಂಧಿತನಾಗಿದ್ದು, ಕೋಲ್ಕತ್ತ ನ್ಯಾಯಾಲಯ ಆರೋಪಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕಿನ ಲೋಕಾಪುರ ಪಟ್ಟಣದ ನಿವಾಸಿಯಾದ ಆರೋಪಿ ಪರಮಾನಂದ ಟೋಪಣ್ಣನವರ್‌ಗೆ ಕೋಲ್ಕತ್ತ ನಗರದ ಅಲಿ ಪುರ 9 ಜೆಎಂಎಫ್‌ಸಿ ನ್ಯಾಯಾಲಯ 50,000 ರು. ಬಾಂಡ್ ನೀಡಲು ಸೂಚಿಸಿ ಶನಿವಾರ ಸಂಜೆ ಜಾಮೀನು ಮಂಜೂರು ಮಾಡಿದೆ. ಅಲ್ಲದೇ, ಆರೋಪಿ ವಿದೇಶಕ್ಕೆ ಪರಾರಿ ಯಾಗಲು ಅವಕಾಶವಾಗದಂತೆ ಆತನ ಪಾಸ್‌ಪೋರ್ಟ್ ವಶಪಡಿಸಿಕೊಳ್ಳುವಂತೆ ಪೊಲೀಸರಿಗೆ ನಿರ್ದೇಶನ ನೀಡಿದೆ. ಅಲ್ಲದೇ, ತನಿಖೆ ಪೂರ್ಣಗೊಳ್ಳುವವರೆಗೂ ಕೋಲ್ಕತ್ತ ನಗರದಿಂದ ಹೊರ ಹೋಗ ದಂತೆ ಷರತ್ತು ವಿಧಿಸಿದೆ ಎಂದು ವರದಿಯಾಗಿದೆ.

ಮದುವೆಯೇ ಅನೂರ್ಜಿತ: ಜೀವನಾಂಶ ಪ್ರಶ್ನೆಯೇ ಇಲ್ಲ

ಲಖನೌ: ವಿಭಿನ್ನ ತೀರ್ಪುಗಳ ಮೂಲಕ ಆಗ್ಗಾಗ್ಗೆ ದೇಶದ ಗಮನ ಸೆಳೆಯುವ ಉತ್ತರ ಪ್ರದೇಶದ ಅಲಹಾಬಾದ್ ಹೈಕೋರ್ಟ್, ಈಗ ಜೀವನಾಂಶ ಕೊಡಬೇಕಾದ ಸಂಕಷ್ಟಕ್ಕೆ ಸಿಲುಕಿದ್ದ ಪತಿಯೊಬ್ಬನನ್ನು ರಕ್ಷಿಸುವ ತೀರ್ಪು ನೀಡಿದೆ.

ಹಿಂದೂ ವಿವಾಹ ಕಾಯ್ದೆಯ ಸೆಕ್ಷನ್ 11ರಡಿ ಮದುವೆಯೇ ಅಮಾನ್ಯ, ಅನೂರ್ಜಿತ ಎಂದು ನ್ಯಾಯಾಲಯ ಘೋಷಿಸಿದ ಬಳಿಕ ಜೀವನಾಂಶದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಪತಿ ಎನಿಸಿಕೊಂಡವನಿಗೆ ಆ ಹೊರೆಯೇ ಇರುವುದಿಲ್ಲ ಎಂದು ನ್ಯಾ.ರಾಜೀವ್ ಮಿಶ್ರಾ ಅವರ ಪೀಠ ಶನಿವಾರ ತೀರ್ಪು ನೀಡಿದೆ.

ಈ ಮದುವೆಗೆ ಆರಂಭದಿಂದಲೇ ಮಾನ್ಯತೆ ಇರಲಿಲ್ಲ. ಹಾಗಾಗಿ ಪತಿ-ಪತ್ನಿ ಸಂಬಂಧವೂ ಇಲ್ಲ. ಜೀವನಾಂಶದ ಬಾಧ್ಯತೆಯೇ ಇರುವುದಿಲ್ಲ ಎಂದು ಪೀಠ ಸ್ಪಷ್ಟವಾಗಿ ಹೇಳಿದೆ. 2015ರ ಫೆಬ್ರವರಿಯಲ್ಲಿ ವಿವಾಹವಾದ ದಂಪತಿ ನಡುವೆ ಆರಂಭದಲ್ಲೇ ವಿರಸ. ಪತ್ನಿ ವರದಕ್ಷಿಣೆ ಕಿರುಕುಳ, ದೌರ್ಜನ್ಯ ಆರೋಪಗಳಡಿ ದೂರು ದಾಖಲಿಸಿದಳು. ಪತಿ ನಿರೀಕ್ಷಣಾ ಜಾಮೀನು ಕೋರಿದ್ದ ಅರ್ಜಿ ವಿಚಾರಣೆ ವೇಳೆ, ಪತ್ನಿ ಎನಿಸಿಕೊಂಡವಳಿಗೆ ಈ ಹಿಂದೆಯೇ ಬೇರೊಂದು ಮದುವೆಯಾಗಿದೆ. ಅದನ್ನು ಆಕೆ ಮುಚ್ಚಿಟ್ಟಿದ್ದಳು ಎಂಬ ಸಂಗತಿ ಹೊರಬಿದ್ದಿತು. ಆಗ ಕೌಟುಂಬಿಕ ನ್ಯಾಯಾಲಯ, 2015ರ ಫೆಬ್ರವರಿಯಲ್ಲಿನ ಮದುವೆಯೇ ಅಸಿಂಧು, ಅನೂರ್ಜಿತ ಎಂದು 2021ರ ನವೆಂಬರ್‌ನಲ್ಲಿ ಘೋಷಿಸಿತು. ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ ಪತ್ನಿ, ಕೌಟುಂಬಿಕ ಹಿಂಸೆಯಿಂದ ಮಹಿಳೆಗೆ ರಕ್ಷಣೆ ಕಾಯ್ದೆಯಡಿ ಜೀವನಾಂಶ ಕೋರಿ ಮತ್ತೊಂದು ದಾವೆ ಹೂಡಿದಳು. 2022ರ ಆಗಸ್ಟ್‌ನಲ್ಲಿ ಗಾಜಿಯಾಬಾದ್ ಸಿವಿಲ್ ನ್ಯಾಯಾಲಯ ಮಾಸಿಕ 10,000 ರು. ಜೀವನಾಂಶ ನೀಡುವಂತೆ ಪತಿಗೆ ಆದೇಶಿಸಿ ತೀರ್ಪು ನೀಡಿತು. ಈ ಆದೇಶದ ವಿರುದ್ಧ ಪತಿ ಅಲಹಾಬಾದ್ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ.

ಎಫ್‌ಐಆರ್ ಕಾಲ್ಪನಿಕ: ಸೈಫ್‌ಗೆ ಇರಿತ ಆರೋಪಿ

ಮುಂಬೈ: ಬಾಲಿವುಡ್ ನಟ ಸೈಫ್ ಅಲಿಖಾನ್(54) ಅವರ ಮುಂಬೈನ ಬಾಂದ್ರಾ ಪ್ರದೇಶದ ಐಷಾರಾಮಿ ವಸತಿ ಸಂಕೀರ್ಣದಲ್ಲಿನ ಮನೆಗೆ ಜ.16ರ ರಾತ್ರಿ ನುಸುಳಿ, ನಟನಿಗೆ ಚಾಕುವಿನಿಂದ



ಇರಿದು ಪರಾರಿಯಾಗಿದ್ದ ಆರೋಪಿ ಬಾಂಗ್ಲಾದೇಶಿ ಪ್ರಜೆ ಶರೀಫುಲ್ ಇಸ್ಲಾಂ (30), ತನ್ನ ವಿರುದ್ಧದ ಎಫ್‌ಐಆರ್ 'ಕಾಲ್ಪನಿಕ ಕಥೆ', ತಾನು ನಿರಪರಾಧಿ ಎಂದು ನ್ಯಾಯಾಲಯಕ್ಕೆ ಹೇಳಿಕೆ ಸಲ್ಲಿಸಿದ್ದಾನೆ. ಅಲ್ಲದೇ, ಜಾಮೀನು ಕೋರಿ 2ನೇ ಬಾರಿ ವಕೀಲ ವಿಪುಲ್ ದುಶಿಂಗ್ ಮೂಲಕ ಅರ್ಜಿ ಸಲ್ಲಿಸಿದ್ದಾನೆ. ನ್ಯಾಯಾಲಯ ಅರ್ಜಿ ವಿಚಾರಣೆಯನ್ನು ಸೋಮವಾರಕ್ಕೆ ನಿಗದಿಪಡಿಸಿದೆ. ಇರಿತದಿಂದ ತೀವ್ರವಾಗಿ ಗಾಯಗೊಂಡಿದ್ದ ನಟ ಸೈಫ್ ಅವರಿಗೆ ಖಾಸಗಿ ಆಸ್ಪತ್ರೆಯಲ್ಲಿ ತುರ್ತು ಶಸ್ತ್ರಚಿಕಿತ್ಸೆ ನಡೆಸಿ, 5 ದಿನಗಳ ನಂತರ ಡಿಸ್ಚಾರ್ಜ್ ಮಾಡಲಾಗಿತ್ತು. ಘಟನೆ ನಡೆದ 2 ದಿನಗಳ ನಂತರ ಥಾಣೆ ಜಿಲ್ಲೆಯಲ್ಲಿ ಆರೋಪಿಯನ್ನು ಪೊಲೀಸರು ಬಂಧಿಸಿದ್ದರು. ಆರೋಪಿ ಇಸ್ಲಾಂ ಸದ್ಯ ಮುಂಬೈನ ಆರ್ಥರ್ ರೋಡ್ ಸೆರೆಮನೆಯಲ್ಲಿದ್ದಾನೆ.

ಮನೆಗೆ ಅಕ್ರಮ ಪ್ರವೇಶ, ನಟನಿಗೆ ಇರಿತ ಪ್ರಕರಣದ ತನಿಖೆ ಮುಗಿದಿದೆ. ಸಿಸಿಟಿವಿ ದೃಶ್ಯಾವಳಿಗಳು ಮತ್ತು ಕರೆ ದಾಖಲೆಗಳು ಸೇರಿದಂತೆ ನಿರ್ಣಾಯಕ ಪುರಾವೆಗಳನ್ನು ಪೊಲೀಸರು ಸಂಗ್ರಹಿಸಿದ್ದಾರೆ. ದೋಷಾರೋಪ ಪಟ್ಟಿ ಸಲ್ಲಿಕೆ ಬಾಕಿ ಇದೆ.

ಆಂಧ್ರ ಮದ್ಯ ಹಗರಣ: ಸಂಸದ ಮಿಥುನ್ ಸೆರೆ

ವಿಜಯವಾಡ: ಆಂಧ್ರಪ್ರದೇಶದಲ್ಲಿ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಸರಕಾರದ ಅವಧಿಯಲ್ಲಿನ 3,200 ಕೋಟಿ ರು.ಗಳ ಅಬಕಾರಿ ಹಗರಣ ಸಂಬಂಧ ವೈಎಸ್‌ಆರ್ ಕಾಂಗ್ರೆಸ್ ಪಕ್ಷದ

ಸಂಸದ ಪಿ.ವಿ.ಮಿಥುನ್ ರೆಡ್ಡಿಯನ್ನು ವಿಶೇಷ ಪೊಲೀಸ್ ತನಿಖಾ ತಂಡ ಶನಿವಾರ ರಾತ್ರಿ ಬಂಧಿಸಿದೆ.

ಆಂಧ್ರಪ್ರದೇಶದ ರಾಜಂಪೇಟೆ ಕ್ಷೇತ್ರದ ಲೋಕಸಭಾ ಸದಸ್ಯ ಮಿಥುನ್ ರೆಡ್ಡಿ ಮಾಜಿ ಮುಖ್ಯಮಂತ್ರಿ ವೈ.ಎಸ್. ಜಗನ್‌ಮೋಹನ್ ರೆಡ್ಡಿಯ ಪರಮಾಪ್ತ. ಮಿಥುನ್‌ರನ್ನು ಶನಿವಾರ ಬೆಳಗ್ಗೆ ಹಲವು ಗಂಟೆಗಳ ಕಾಲ ಪ್ರಶ್ನಿಸಿದ್ದ ವಿಶೇಷ ತನಿಖಾ ತಂಡ, ಬಳಿಕ ವಿಜಯವಾಡದಲ್ಲಿನ ಸಂಸದರ ನಿವಾಸದಲ್ಲಿಯೇ ರಾತ್ರಿ 7.30ರ ವೇಳೆ ಬಂಧನಕ್ಕೊಳಪಡಿಸಿತು. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಸೇಡಿನ ರಾಜಕೀಯದಲ್ಲಿ ತೊಡಗಿದ್ದಾರೆ. ವೈ.ಎಸ್.ಜಗನ್ ಮೋಹನ್ ರೆಡ್ಡಿ ಆಪ್ತರ ವಿರುದ್ಧ 'ಸುಳ್ಳು' ಪ್ರಕರಣಗಳನ್ನು ದಾಖಲಿಸುತ್ತಿದ್ದಾರೆ ಎಂದು ವೈಎಸ್‌ಆರ್ ಕಾಂಗ್ರೆಸ್ ಪಕ್ಷ ಆಕ್ರೋಶ ವ್ಯಕ್ತಪಡಿಸಿದೆ. ಆಂಧ್ರ ಪ್ರದೇಶದ ಈ ಬೃಹತ್ ಅಬಕಾರಿ ಹಗರಣದ ಆರೋಪಿ ಬಾಲಾಜಿ ಗೋವಿಂದಪ್ಪ ಇತ್ತೀಚೆಗೆ ಮೈಸೂರಿನಲ್ಲಿ ಬಂಧನಕ್ಕೊಳಗಾಗಿದ್ದು ಉಲ್ಲೇಖಾರ್ಹ. ಆರೋಪಿಗಳಾದ ಧನುಂಜಯ್ ರೆಡ್ಡಿ, ಕೃಷ್ಣ ಮೋಹನ್ ರೆಡ್ಡಿ ಕೂಡಾ ಬಂಧಿತರಾಗಿದ್ದಾರೆ.

ನ್ಯಾ.ವರ್ಮಾ ಪದಚ್ಯುತಿ ನೋಟಿಸ್‌ಗೆ 100 ಸಹಿ

ದೆಹಲಿ: ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಆಗಿದ್ದಾಗ ಅಧಿಕೃತ ನಿವಾಸದಲ್ಲಿ ಕೋಟಿಗಟ್ಟಲೆ ಹಣ ಪತ್ತೆಯಾಗಿದ್ದ ಪ್ರಕರಣದಲ್ಲಿ ಸಿಲುಕಿಕೊಂಡಿರುವ ನ್ಯಾ.ಯಶವಂತ್ ವರ್ಮಾ

ಪದಚ್ಯುತಿಗೆ ಸಂಸತ್ತಿನಲ್ಲಿ ನಿರ್ಣಯ ಮಂಡಿಸುವ ನೋಟಿಸ್‌ಗೆ 100 ಸಂಸದರು ಸಹಿ ಹಾಕಿದ್ದಾರೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಭಾನುವಾರ ತಿಳಿಸಿದ್ದಾರೆ. ಸರ್ವ ಪಕ್ಷ ಸಭೆ ನಂತರ ಸುದ್ದಿಗಾರರೊಂದಿಗೆ ಭಾನುವಾರ ಮಧ್ಯಾಹ್ನ ಮಾತನಾಡಿದ ಸಚಿವರು, ನ್ಯಾಯಮೂರ್ತಿಯೊಬ್ಬರ ಪದಚ್ಯುತಿ ನಿರ್ಣಯವನ್ನು ಲೋಕಸಭೆಯಲ್ಲಿ ಮಂಡಿಸಲು ಅಗತ್ಯವಾಗಿರುವುದಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಸಂಸದರ ಬೆಂಬಲ ಸಿಕ್ಕಂತಾಗಿದೆ. ಹಾಗಿದ್ದೂ ಸಹಿ ಸಂಗ್ರಹ ಮುಂದುವರಿದಿದೆ. ನಿರ್ಣಯವನ್ನು ಯಾವಾಗ ಸದನದಲ್ಲಿ ಮಂಡಿಸಬೇಕು ಎಂಬುದನ್ನು ಸದನ ಕಲಾಪ ಸಮಿತಿ ನಿರ್ಧರಿಸಲಿದೆ ಎಂದರು. ನ್ಯಾಯಮೂರ್ತಿಯೊಬ್ಬರ ಪದಚ್ಯುತಿಗೆ ಲೋಕಸಭೆಯಲ್ಲಿ ಕನಿಷ್ಠ 100 ಸಂಸದರು ಮತ್ತು ರಾಜ್ಯಸಭೆಯಲ್ಲಿ 50 ಸಂಸದರು ಸಹಿ ಹಾಕಬೇಕಿದೆ. ಈ ಅಧಿವೇಶನದಲ್ಲೇ ನಿರ್ಣಯ ಮಂಡಿಸಲಾಗುವುದು ಎಂದು ಸರಕಾರ ಹೇಳಿದೆ. ನ್ಯಾಯಾಂಗದಲ್ಲಿನ ಭ್ರಷ್ಟಾಚಾರ ವಿರುದ್ಧದ ನಿರ್ಣಯಕ್ಕೆ ಪ್ರತಿಪಕ್ಷಗಳೂ ಬೆಂಬಲ ವ್ಯಕ್ತಪಡಿಸಿವೆ.

ರಷ್ಯಾದಲ್ಲಿ ಐದು ಬಾರಿ 7.4 ತೀವ್ರತೆ ಭೂಕಂಪ

ಮಾಸ್ಕೊ: ರಷ್ಯಾ ದೇಶದಲ್ಲಿ ಭಾನುವಾರ ಒಂದು ಗಂಟೆ ಅವಧಿಯಲ್ಲೇ 5 ಪ್ರಬಲ ಭೂಕಂಪಗಳು ಸರಣಿಯೋಪಾದಿಯಲ್ಲಿ ಸಂಭವಿಸಿವೆ. ರಿಕ್ಟರ್ ಮಾಪಕದಲ್ಲಿ ಭೂಕಂಪನದ ತೀವ್ರತೆ 7.4ರಷ್ಟು ದಾಖಲಾಗಿದೆ. 10 ಕಿ.ಮೀ. ಆಳದಲ್ಲಿ ಭೂಕಂಪನದ ಕೇಂದ್ರ ಬಿಂದುವಿತ್ತು ಎಂದು ಅಮೆರಿಕದ ಜಿಯೋಲಾಜಿಕಲ್ ಸರ್ವೆ ವರದಿ ಮಾಡಿಗಿದೆ.

6.6 ಮತ್ತು 6.7 ಹಾಗೂ 7.4 ಮತ್ತು 6.7 ಹಾಗೂ 7ರಷ್ಟು ತೀವ್ರತೆಯ ಭೂಕಂಪಗಳು ಸರಣಿಯೋಪಾದಿ ಸಂಭವಿಸಿದ ಪರಿಣಾಮ, ಹವಾಯಿ ಭಾಗದಲ್ಲಿ ಸುನಾಮಿ ಅಪ್ಪಳಿಸುವ ಭೀತಿ ಎದುರಾಗಿದೆ ಎಂಬ ಎಚ್ಚರಿಕೆ ಸಂದೇಶ ಅಮೆರಿಕದ ರಾಷ್ಟ್ರೀಯ ಸುನಾಮಿ ಎಚ್ಚರಿಕೆ ಕೇಂದ್ರದಿಂದ ಬಂದಿದೆ. ರಷ್ಯಾದ ಪೂರ್ವ ಭಾಗದಲ್ಲಿನ ಕಮ್ಚಟ್ಕಾ ಪೂರ್ವ ಕರಾವಳಿಯ ಕೆಲವು ಭಾಗಗಳಲ್ಲಿ ಸುನಾಮಿ ಉಂಟಾಗುವ ಸಾಧ್ಯತೆ ಇದೆ ಎಂದು ಎಚ್ಚರಿಕೆ ಸಂದೇಶದಲ್ಲಿ ಹೇಳಲಾಗಿದೆ. ಜರ್ಮನ್ ಸಂಶೋಧನಾ ಕೇಂದ್ರ ಜಿಯೋ ಸೈನ್ಸಸ್ ರಿಕ್ಟರ್ ಮಾಪಕದಲ್ಲಿ 6.7ರಷ್ಟು ತೀವ್ರತೆಯಲ್ಲಿ ಭೂಕಂಪವಾಗಿದೆ ಎಂದು ವರದಿ ಮಾಡಿತ್ತು. ಆದರೆ, ಯುರೋಪಿಯನ್ ಮೆಡಿಟರೇನಿಯನ್ ಭೂಕಂಪನ ಕೇಂದ್ರ ಮತ್ತು ಅಮೆರಿಕದ ಭೂವೈಜ್ಞಾನಿಕ ಸಮೀಕ್ಷೆ ರಿಕ್ಟರ್ ಮಾಪಕದಲ್ಲಿ 7.4 ತೀವ್ರತೆಯ ಭೂಕಂಪವಾ ಗಿದೆ ಎಂದು ವರದಿ ಮಾಡಿವೆ. ಸರಣಿ ಭೂಕಂಪವಾಗಿದ್ದರೂ, ಅದು 10 ಕಿಮೀ ಆಳದಲ್ಲಿ ಸಂಭವಿಸಿರುವುದರಿಂದ ಗಣನೀಯ ಪ್ರಮಾಣದ ಹಾನಿ, ಸಾವು-ನೋವು ಉಂಟಾಗಿಲ್ಲ ಎನ್ನಲಾಗಿದೆ.

ಸಮಾಚಾರ ಸಣ್ಣದಲ್ಲ

ವಿಪಕ್ಷದ ನಾಯಕರ ಹುಟ್ಟು ಹಬ್ಬ ಆಚರಣೆ

ಮುದಗಲ್: ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ಹುಟ್ಟು ಹಬ್ಬದ ನಿಮಿತ್ಯ ಮುದಗಲ್ ಪಟ್ಟಣದ ಸಮುದಾಯದ ಆರೋಗ್ಯ ಕೇಂದ್ರದ ರೋಗಿಗಳಿಗೆ ಹಣ್ಣು ಹಂಪಲು ವಿತರಿಣೆ ಮಾಡುವ ಮೂಲಕ ಹುಟ್ಟು ಹಬ್ಬ ಆಚರಣೆ ಮಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ಮುದಗಲ್ ಮಂಡಲ ಕಾರ್ಯದರ್ಶಿ ಗದ್ದೆಪ್ಪ ಜಕ್ಕೇಡಮಡು, ಹಿರಿಯ ಮುಖಂಡ ಗುರುಬಸಪ್ಪ ಸಜ್ಜನ್, ಮಲ್ಲಪ್ಪ ಮಾಟೂರು, ಮಾಹಾಂತೇಶ ಪಿಕಳಿಹಾಳ, ಸಜೀವ್ ಬಾಕ್ಲಿ, ಶಿವು ಕುಂಬಾರ, ನಾಗರಾಜ, ಪಂಪಾಪತಿ, ಹನುಮೇಶ ನಾಯಕ, ಡಾ: ವಿಕಾಸ ಪಾಟೀಲ್ ವಿರೂಪಾಕ್ಷಿ ಹೂಗಾರ,ಸೇರಿದಂತೆ ಮುಂತಾದವರು ಇದ್ದರು.

ಶಾಲಾವರಣದಲ್ಲಿ ಮಳೆ ನೀರು ಅವಾಂತರ

ಮುದಗಲ್: ಪಟ್ಟಣ ಸಮೀಪದ ಹೂನೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ರಾಮತ್ನಾಳ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಮಳೆ ನೀರು ನಿಂತ ಹಿನ್ನಲೆಯಲ್ಲಿ ಶಾಲೆಗೆ ಹೋಗಲು ಮಕ್ಕಳಿಗೆ ತುಂಬಾ ತೊಂದರೆಯಾಗಿದೆ. ವರುಣನ ಆರ್ಭಟಕ್ಕೆ ಸರಕಾರಿ ಶಾಲಾ ಆವರಣ ಜಾಲವೃತವಾಗಿದೆ. ಮುಖ್ಯ ದ್ವಾರಾದಲ್ಲೇ ನೀರು ನಿಂತ ಕಾರಣ ಶಾಲಾ ಮೈದಾನ ಕೆರೆಯಾಗಿ ಮಾರ್ಪಟ್ಟಿದೆ ಮಕ್ಕಳು. ಕೊಳಚೆ ನೀರಿನಲ್ಲೇ ಶಾಲಾ ಕೊಠಡಿಗಳಿಗೆ ತೆರಳುವಂಥ ಪರಿಸ್ಥಿತಿ ನಿರ್ಮಾಣವಾಗಿದೆ ಹಾಗೂ ನಿಂತ ನೀರಲ್ಲಿ ಎದ್ದು ಬಿದ್ದು ತರಗತಿಗಳಿಗೆ ಮಕ್ಕಳು ಹಾಜರಾಗುತ್ತಿದ್ದಾರೆ.ಮಕ್ಕಳು ವಿವಿಧ ಖಾಯಿಲೆಗಳಿಗೆ ತುತ್ತಾಗುವ ಪೋಷಕರು ಹೆಚ್ಚಿನ ಆತಂಕದಲ್ಲಿ ಇದ್ದಾರೆ ಸ್ಥಳೀಯ ಗ್ರಾಮ ಪಂಚಾಯತಿ ಆಡಳಿತದ ವಿರುದ್ಧ ಹಿಡಿಶಾಪ ಹಾಕಿ ಸ್ಥಳೀಯರ ಆಕ್ರೋಶ ಹೊರಹಾಕಿದ್ದಾರೆ.

ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿ ಉಮಾಕಾಂತ

ಹರಪನಹಳ್ಳಿ: ತಾಲೂಕು ಗುತ್ತಿಗೆದಾರರ ಸಂಘದ ಅಧ್ಯಕ್ಷರಾಗಿ ತೆಲಗಿ ಉಮಾಕಾಂತ, ಉಪಾಧ್ಯಕ್ಷರಾಗಿ ಎಚ್.ಎಂ.ವಿಕ್ರಮ, ಕಾರ್ಯದರ್ಶಿಯಾಗಿ ಎಚ್ .ಜಯಪ್ರಕಾಶ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶುಕ್ರವಾರ ಗುತ್ತಿಗೆದಾರರ ಸಂಘಕ್ಕೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಗೌರವಾಧ್ಯಕ್ಷರಾಗಿ ತೋಟಪ್ಪ ಶೆಟ್ಟಿ, ಸಹ ಕಾರ್ಯದರ್ಶಿಯಾಗಿ ಜಿ.ಆರ್.ರವಿನಾಯ್ಕ್, ಖಜಾಂಚಿಯಾಗಿ ಬಿ.ಜಬಿವುಲ್ಲ ಆಯ್ಕೆಯಾಗಿದ್ದಾರೆ. ಸಂಘದ ನಿರ್ದೇಶಕರಾಗಿ ಹುಣಿಸಿಹಳ್ಳಿ ಮಂಜುನಾಥ, ರಾಗಿರೊಟ್ಟಿ ಜಾಕೀರ ಹುಸೇನ್, ಪೊತಲಕಟ್ಟಿ ಮಹೇಶಪ್ಪ, ಬೆಂಡಿಗೇರಿ ಸಣ್ಣತಾಂಡ ರಮೇಶನಾಯ್ಕ್ ಮತ್ತು ಜಿಲ್ಲಾ ಪ್ರತಿನಿಧಿಯಾಗಿ ನಂದಬೇವೂರು ಮಂಜುನಾಥ ಅವರು ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಗುತ್ತಿಗೆದಾರರಾದ ಬಾಣದ ಅಂಜಿನಪ್ಪ, ಮಹಾಂತೇಶನಾಯ್ಕ್, ಟಿ.ಅಂಜಿನಪ್ಪ, ಛಲವಾದಿ ಪರಶುರಾಮ, ನಾಗರಾಜನಾಯ್ಕ್, ಪ್ರವೀಣ್ ಕುಮಾರ, ಅರುಣ್ ಕಮಾರ ಉಮ್ಮೇಶನಾಯ್ಕ್, ನೂರ್‍ಯಾನಾಯ್ಕ, ಚಂದ್ರನಾಯ್ಕ, ಭೋವಿ ಬಸವರಾಜ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಶುದ್ಧ ಕುಡಿಯುವ ನೀರಿನ ಪ್ರಾತ್ಯಕ್ಷಿಕೆ

ರಾಯಚೂರು: ನಗರದ ಜನತೆಗೆ ಕುಡಿಯಲು ಯೋಗ್ಯವಾದ ನೀರನ್ನು ಕೊಡುವುದು ಮಹಾನಗರ ಪಾಲಿಕೆಯ ಜವಾಬ್ದಾರಿಯಾಗಿದ್ದು, ಈ ನಿಟ್ಟಿನಲ್ಲಿ ಕುಡಿಯುವ ನೀರನ್ನು ಪರೀಕ್ಷಿಸಲು ಪ್ರತಿಯೊಂದು ವಾರ್ಡ್ ವಾಲ್‌ಮ್ಯಾನ್‌ಗಳು ಮತ್ತು ಸೂಪರ್‌ವೈಸರ್ ಗಳಿಗೆ ಕ್ಷೇತ್ರ ನೀರು ಪರಿಕ್ಷಾ ಕಿಟ್ ಮೂಲಕ ಪರೀಕ್ಷೆ ಮಾಡುವ ಕುರಿತು ತರಬೇತಿಯನ್ನು ನೀಡಲಾಗುತ್ತಿದ್ದು, ತರಬೇತಿಯನ್ನು ಪಡೆದು ಶುದ್ದ ಕುಡಿಯುವ ನೀರನ್ನು ಒದಗಿಸಲು ಸಿಬ್ಬಂದಿಗಳು ಕೈಜೋಡಿಸ ಬೇಕೆಂದು ಪಾಲಿಕೆ ಆಯುಕ್ತ ಜುಬಿನ್ ಮಹೋಪಾತ್ರ ಹೇಳಿದರು. ನಗರದ ಮಹಾನಗರ ಪಾಲಿಕೆಯ ವಲಯ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ನೀರು ಸರಬರಾಜು ವಿಭಾಗದ ಸಿಬ್ಬಂದಿಗೆ ನೀರು ಪರೀಕ್ಷಾ ಕಿಟ್‌ನ ಪ್ರಾತ್ಯಕ್ಷತೆ ಹಾಗೂ ತರಬೇತಿ ಕಾರ್ಯಾಗಾರವನ್ನುದ್ದೇಶಿಸಿ ಮಾತನಾಡಿದರು. ಪ್ರಸ್ತುತ ನಗರದಲ್ಲಿ ಅಪೌಷ್ಠಿಕತೆಯಿಂದ ಕೂಡಿದ ಮಕ್ಕಳಿದ್ದು, ಇದಕ್ಕೆ ಕುಡಿಯುವ ನೀರು ಕೂಡ ಕಾರಣವಾಗಿದ್ದು, ಈ ನಿಟ್ಟಿನಲ್ಲಿ ಜನರಿಗೆ ಶುದ್ದ ಕುಡಿಯುವ ನೀರನ್ನು ಒದಗಿಸಲು ಪ್ರತಿಯೊಬ್ಬರು ಪಣ ತೊಡಬೇಕಿದೆ ಎಂದು ಕರೆ ನೀಡಿದರು. ಇದೇ ವೇಳೆ ಕುಡಿಯುವ ನೀರು ಸರಬರಾಜು ಇಲಾಖೆಯ ನೀರು ಪರೀಕ್ಷಾ ತಜ್ಞರಾದ ಚಂದ್ರಿಕಾ ಹಾಗೂ ಯಾಕೂಬ್ ಅವರು ನೀರು ಪರೀಕ್ಷಾ ಕಿಟ್ನನ ಪ್ರಾತ್ಯಕ್ಷಿತೆಯನ್ನು ನೀಡಿದರು. ಜೊತೆಗೆ ವಾಲ್ ಮ್ಯಾನ್ ಮತ್ತು ಸೂಪರ್‌ವೈಸರ್‌ಗಳಿಗೆ ನೀರಿನ ಪರೀಕ್ಷೆಯನ್ನು ಮಾಡುವ ವಿಧಾನಗಳನ್ನು ಪ್ರಾಯೋಗಿಕವಾಗಿ ತಿಳಿಸಲಾಯಿತು. ಈ ಸಂದರ್ಭದಲ್ಲಿ ಮಹಾ ನಗರ ಪಾಲಿಕೆಯ ಕುಡಿಯುವ ನೀರು ವಿಭಾಗದ ಅಧಿಕಾರಿ ಮೇನಕಾ ಪಾಟೀಲ್, ಅಧಿಕಾರಿಗಳಾದ ಮಹೇಶ, ರಾಹುಲ್ ಉಪಸ್ಥಿತರಿದ್ದರು.

{ಸಿದ್ದರಾಮಯ್ಯ } ಮುಖ್ಯಮಂತ್ರಿ

ಬಿಜೆಪಿಯವರು ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತಿದ್ದಾರೆ. ನನ್ನ ಹಾಗೂ ಡಿಸಿಎಂ ನಡುವೆ ಒಡಕುಂಟು ಮಾಡುವ ಉದ್ದೇಶದಿಂದ ಬಿಜೆಪಿಯವರು ಅನಗತ್ಯ ಹೇಳಿಕೆಗಳನ್ನು ನೀಡುತ್ತಾರೆ. ಇದರಿಂದ ರಾಜಕೀಯ ಲಾಭವಾಗಬಹುದೆಂಬ ಭ್ರಮೆ ಬಿಜೆಪಿಯವರಿಗಿದ್ದು, ಅವರಿಗೆ ಇದು ಸದಾ ಭ್ರಮೆಯಾಗಿಯೇ ಇರಲಿದೆ.

ಸ್ವಾಸ್ಥ್ಯ ಸಂಕಲ್ಪ ಶಿಬಿರ | ಮಾದಕ ವ್ಯಸನಗಳಿಂದ ಯುವಪೀಳಿಗೆ ಶಿಕ್ಷಣ ಅರ್ಧಕ್ಕೆ ಮೊಟಕು : ಬಸವರಾಜ ಬಣಕಾರ

ಒಳ್ಳೆ ಹವ್ಯಾಸ ಬಿಟ್ಟು ದುಶ್ಚಟಗಳತ್ತ ಯುವಜನತೆ

ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸೇವಾ ಟ್ರಸ್ಟ್ ವತಿಯಿಂದ ಸ್ವಾಸ್ಥ್ಯ ಸಂಕಲ್ಪ ಯೋಜನೆಯ ಅಡಿಯಲ್ಲಿ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉಪನ್ಯಾಸಕ ಬಸವರಾಜ ಬಣಕಾರ ಉದ್ಘಾಟಿಸಿದರು.

ಸಂಡೂರು: ಯುವ ಸಮೂಹ ಉತ್ತಮ ಹವ್ಯಾಸಗಳಿಗಿಂತಲೂ ದುಶ್ಚಟಗಳ ದಾಸರಾಗುತ್ತಿರುವುದು ಆತಂಕದ ಸಂಗತಿ ಎಂದು ಉಪನ್ಯಾಸಕ ಬಸವರಾಜ ಬಣಕಾರ ತಿಳಿಸಿದರು.

ಪಟ್ಟಣದ ಎ.ಪಿ.ಎಂ.ಸಿ. ಸರಕಾರಿ ಪ್ರೌಢಶಾಲೆಯ ಆವರಣದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸೇವಾ ಟ್ರಸ್ಟ್ ವತಿಯಿಂದ ಸ್ವಾಸ್ಥ್ಯ ಸಂಕಲ್ಪ ಯೋಜನೆಯ ಅಡಿಯಲ್ಲಿ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು.

ಯುವ ಸಮೂಹ ದುಶ್ಚಟಗಳಿಂದ ದೂರವಿದ್ದು ಉತ್ತಮ ಹವ್ಯಾಸಗಳನ್ನು ಮೈಗೂಢಿಸಿಕೊಳ್ಳಲು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ಅಡಿಯಲ್ಲಿ ಡಾ. ವೀರೇಂದ್ರ ಹೆಗ್ಗಡೆಯವರು ಸ್ವಾಸ್ಥ್ಯ ಸಂಕಲ್ಪ ಎನ್ನುವಂತಹ ವಿನೂತನ ಕಾರ್ಯಕ್ರಮಗಳನ್ನು ಪ್ರೌಢಶಾಲೆಗಳಲ್ಲಿ ಆಯೋಜಿಸುವ ಮೂಲಕ ಉತ್ತಮ ಸಮಾಜ ನಿರ್ಮಾಣ ಮಾಡಲು ಸಹಕಾರಿಯಾಗಿದೆ ಎಂದರು.

ಯುವ ಪೀಳಿಗೆ ಗುಟಕಾ, ಧೂಮಪಾನ, ಮಧ್ಯಪಾನ ಸೇರಿದಂತೆ ಮಾದಕ ವ್ಯಸನಗಳಿಗೆ ದಾಸರಾಗುವ ಮೂಲಕ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ತಮ್ಮ ಜೀವನವನ್ನು ಕತ್ತಲೆಯ ಕೂಪಕ್ಕೆ ತಳ್ಳಿಕೊಳ್ಳುತ್ತಿದ್ದಾರೆ, ಇದರಿಂದ ಕುಟುಂಬವು ಸಂಕಷ್ಟಕ್ಕೆ ಬೀಳುವುದರ ಜತೆಗೆ ದೇಶದಲ್ಲಿ ಯುವ ಪೀಳಿಗೆ ಹಾಳಾಗುತ್ತಿರುವುದು ಆತಂಕದ ಸಂಗತಿಯಾಗಿದೆ ಎಂದು ತಿಳಿಸಿದರು.

ಇಂದು ಯುವಕರು ಇದ್ದಕ್ಕಿದ್ದ ಹಾಗೆ ಸಾವನ್ನಪ್ಪುತ್ತಿರುವುದು ಅತಿಯಾದ ಮೊಬೈಲ್ ಬಳಕೆಯೂ ಸಹ ಕಾರಣವಾಗುತ್ತಿರಬಹುದು, ಅದ್ದರಿಂದ ವಿದ್ಯಾರ್ಥಿಗಳು ನಿರಂತರ ಮೊಬೈಲ್ ಬಳಸದೆ ಅದರಿಂದ ದೂರವಿದ್ದು ಉತ್ತಮ ಶಿಕ್ಷಣ ಪಡೆದು ದೇಶದ ಆಸ್ತಿಯಾಗಬೇಕು ಎಂದು ಕರೆ ನೀಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ತಾಲೂಕು ಯೋಜನಾಧಿಕಾರಿ ಸೂರ್ಯನಾರಾಯಣ ಮಾತನಾಡಿ, ಒಂದು ಸರ್ಕಾರ ಮಾಡುವ ಕೆಲಸವನ್ನು ಶ್ರೀಕ್ಷೇತ್ರ ಧರ್ಮಸ್ಥಳ ಸಂಸ್ಥೆಯ ಡಾ. ವೀರೇಂದ್ರ ಹೆಗ್ಗಡೆಯವರು ಮಾಡುತ್ತಿದ್ದಾರೆ, ಕಲಿಕೆ ವೃದ್ದಿಗೆ ಅತಿಥಿ ಶಿಕ್ಷಕರ ನೇಮಕ, ಶೌಚಾಲಯ ನಿರ್ಮಾಣ, ಕೆರೆಗಳ ಅಭಿವೃದ್ದಿ, ದೇವಸ್ಥಾನಗಳ ಜೀರ್ಣೋದ್ಧಾರ, ಸ್ವಚ್ಚತಾ ಅಭಿಯಾನ, ಸ್ಮಶಾನದಲ್ಲಿ ಸಸಿ ನೆಡುವ ಕಾರ್ಯಕ್ರಮ ಸೇರಿದಂತೆ ರೈತರಿಗೆ, ಅಂಗವಿಕಲರಿಗೆ, ಸ್ವ ಉದ್ಯೋಗ ಮಾಡುವವರಿಗೆ ವಿವಿಧ ಯೋಜನೆಗಳನ್ನು ನೀಡಿದ್ದು ಅದರ ಪೂರ್ಣ ಸದುಪಯೋಗವಾಗಬೇಕು ಎಂದರು.

ಶಾಲೆ ಮುಖ್ಯಶಿಕ್ಷಕ ಬಾಬಾಸಾಹೇಬ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಮಾರಂಭದಲ್ಲಿ ಮೇಲ್ವಿಚಾರಕರಾದ ರಾಜಲಕ್ಷ್ಮಿ, ಶಿಕ್ಷಕರಾದ ರೇಣುಕಾ, ಹೂಲೆಪ್ಪ, ಬಾಷಾ, ಮಲ್ಲಪ್ಪ, ಸೇವಾ ಪ್ರತಿನಿಧಿಗಳಾದ ಮೌಲಾಬೀ, ಪಾರ್ವತಿ ಇತರರಿದ್ದರು.

> ನಮಗೆ ಅಬ್ದುಲ್ ಕಲಾಂ ಅಂತಹ ವ್ಯಕ್ತಿಗಳು ಆದರ್ಶರಾಗಬೇಕು, ಅದರೆ ಯುವಕರು ಜಾಹೀರಾತನ್ನು ನೀಡುವ ನಾಯಕರನ್ನು ಅನುಕರಣೆ ಮಾಡುತ್ತಿರುವುದು ಸರಿಯಲ್ಲ, ಅಲ್ಲದೇ ಯುವಕರು ಮದ್ಯದ ದಾಸರಾಗಿ ಹಗಲು ದುಡಿದು ಸಂಜೆ ಕುಡಿದು ಮನೆ ಸೇರುವುದರಿಂದ ಕುಟುಂಬ ಕಲಹದ ಜೊತೆಗೆ ಆರ್ಥಿಕ ಸಂಕಷ್ಟ ಉಂಟಾಗುತ್ತಿದೆ, ಜೊತೆಗೆ ಕ್ಯಾನ್ಸರ್ ನಂತಹ ಭಯಾನಕ ರೋಗಗಳು ಹರಡುತ್ತಿವೆ.
> – ಬಸವರಾಜ ಬಣಕಾರ, ಉಪನ್ಯಾಸಕ

ವಿದ್ಯಾರ್ಥಿ ನಾಯಕತ್ವ ಬೆಳೆಯಲು ಆತ್ಮವಿಶ್ವಾಸ ಮುಖ್ಯ

ಪಟ್ಟಣದ ಹೊರವಲಯದಲ್ಲಿರುವ ಪರ್ಲ್ ಪಬ್ಲಿಕ್ ಶಾಲೆಯಲ್ಲಿ ಶಾಲಾ ಹಂತದ ಪದವಿ ಪ್ರದಾನ ಕಾರ್ಯಕ್ರಮ ಜರಗಿತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಹರಪನಹಳ್ಳಿ ಸರ್ಕಲ್ ಇನ್ಸ್‌ಪೆಕ್ಟರ್ ಮಹಾಂತೇಶ್ ಜಿ ಸಜ್ಜನ್ ಭಾಗವಹಿಸಿದರು.

ಹರಪನಹಳ್ಳಿ: ವಿದ್ಯಾರ್ಥಿಗಳೇ ನಾಯಕತ್ವ ಮಾನವ ನಾಗರಿಕತೆಯ ಪ್ರಗತಿಗೆ ಕಾರಣವಾದ ಒಂದು ಪ್ರಮುಖ ಅಂಶ ಎಲ್ಲರೂ ನಾಯಕತ್ವದ ಗುಣಗಳನ್ನು ಹೊಂದಿರುವುದಿಲ್ಲ ಏಕೆಂದರೆ ನಾಯಕತ್ವಕ್ಕೆ ಕೆಲವು ಪ್ರಮುಖ ಗುಣಲಕ್ಷಣಗಳು ಬೇಕಾಗುತ್ತದೆ ಎಂದು ಹರಪನಹಳ್ಳಿ ಸರ್ಕಲ್ ಇನ್ಸ್‌ಪೆಕ್ಟರ್ ಮಹಾಂತೇಶ್ ಜಿ ಸಜ್ಜನ್ ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಪರ್ಲ್ ಪಬ್ಲಿಕ್ ಶಾಲೆಯಲ್ಲಿ ಶಾಲಾ ಹಂತದ ಪದವಿ ಪ್ರಧಾನ ಕಾರ್ಯಕ್ರಮ ಜರಗಿತು ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ವಿದ್ಯಾರ್ಥಿಗಳ ನಾಯಕನಿಗೆ ಆತ್ಮವಿಶ್ವಾಸ ಇರಬೇಕು ಆತ್ಮವಿಶ್ವಾಸದ ಕೊರತೆ ಇರುವ ವ್ಯಕ್ತಿ ಎಂದಿಗೂ ನಾಯಕನಾಗುವುದಕ್ಕೆ ಸಾಧ್ಯವಿಲ್ಲ ಅಮೆರಿಕದ ಒಬ್ಬ ಖ್ಯಾತ ಫುಟ್ಬಾಲ್ ಕೋಚ್ ಹೇಳ್ತಾರೆ ಹುಟ್ಟುತಲೆ ಯಾರು ನಾಯಕರಾಗಿ ಹುಟ್ಟುವುದಿಲ್ಲ ಹುಟ್ಟಿದ ನಂತರ ನಾಯಕರಾಗುತ್ತಾರೆ ಅವರ ಕಠಿಣ ಪರಿಶ್ರಮ ಮತ್ತು ಸರಳತೆ ಅವರನ್ನು ನಾಯಕನಾಗಿ ಮಾಡುತ್ತದೆ ಎಂದರು.

ಈ ಸಂದರ್ಭದಲ್ಲಿ ವಿಶೇಷವಾಗಿ ಎನ್.ಸಿ.ಸಿ ಮಕ್ಕಳಿಂದ ಪರೇಡ್ ನಡೆಸಲಾಯಿತು ಕಾರ್ಯಕ್ರಮದಲ್ಲಿ ಪ್ರಕೃತಿ ವಿದ್ಯಾ ಸಂಸ್ಥೆಯ ಅಧ್ಯಕ್ಷ ಮಂಜುನಾಥ್ ಪೂಜಾರ್, ಉಪಾಧ್ಯಕ್ಷ ನಾಗೇಶ್ ಉಪ್ಪಿನ್, ಕಾರ್ಯದರ್ಶಿಗಳಾದ ಮಾಲ್ತೇಶ್ ಚಳಗೇರಿ, ಖಜಾಂಚಿಗಳಾದ ಬಸವರಾಜ್ ಹುಲ್ಲತ್ತಿ, ಕಾರ್ಯನಿರ್ವಾಹಕ ನಿರ್ದೇಶಕರಾದ ಚನ್ನೇಶ್, ಬಣಕಾರ್ , ನಿರ್ದೇಶಕರಾದ ವಿರೂಪಾಕ್ಷಪ್ಪ, ಆಡಳಿತ ಅಧಿಕಾರಿಯಾದ ಸುಮಾ ನಾಗೇಶ್ ಪ್ರಾಂಶುಪಾಲರಾದ ಯಶೋ ಪದ್ಮ ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

> ಪ್ರಬುದ್ಧ ನಾಯಕರಾಗಲು ಮನುಷ್ಯನಿಗೆ ಯಾವ ಗುಣಗಳಿರಬೇಕು ಎಂದು ಮಹಾಭಾರತದ ಒಂದು ಸನ್ನಿವೇಶವನ್ನು ಉದಾರಣೆಯಾಗಿ ತೆಗೆದುಕೊಂಡು ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಿದರು.
> – ಶಶಿಧರ್ ಪೂಜಾರ, ಗೌರವಾಧ್ಯಕ್ಷರು

ವಿಜಯೇಂದ್ರಗೆ ಅದ್ದೂರಿ ಸ್ವಾಗತ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರನ್ನು ಬಿಜೆಪಿ ಕಾರ್ಯಕರ್ತರು ಸ್ವಾಗತ ಕೋರಿದರು.

ಮಸ್ಕಿ: ಪಟ್ಟಣದ ಹೆದ್ದಾರಿ ಮೂಲಕ ಪಕ್ಷದ ಸಂಘಟನಾ ಸಭೆಯಲ್ಲಿ ಭಾಗವಹಿಸಲು ಮಸ್ಕಿ ಮಾರ್ಗವಾಗಿ ಗಂಗಾವತಿಗೆ ತೆರಳುತ್ತಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಬಿಜೆಪಿ ಮುಖಂಡರು ಪಟ್ಟಣದಲ್ಲಿ ಅದ್ದೂರಿಯಾಗಿ ಭಾನುವಾರ ಸ್ವಾಗತ ಕೋರಿದರು.

ಇಲ್ಲಿಯ ಹಳೆಯ ಬಸ್ ನಿಲ್ದಾಣ ಬಳಿ ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್, ಪುರಸಭೆ ಅಧ್ಯಕ್ಷ ಮಲ್ಲಯ್ಯ ಅಂಬಾಡಿ, ಮಂಡಲ ಅಧ್ಯಕ್ಷ ಶರಣಯ್ಯ ಸೊಪ್ಪಿಮಠ ಪಕ್ಷದ ಶಾಲು ಹಾಗೂ ಹೂಗುಚ್ಛ ನೀಡಿ ಬರ ಮಾಡಿಕೊಂಡರು. ಕಾರ್ಯಕರ್ತರು ಪಕ್ಷದ ಬಾವುಟ ಹಿಡಿದು, ಪಟಾಕಿ ಸಿಡಿಸಿ ವಿಜಯೇಂದ್ರ ಪರ ಜೈಕಾರ ಹಾಕಿದರು.

ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ಅಧ್ಯಕ್ಷ ವಿಶ್ವನಾಥ ಪಾಟೀಲ್, ಮುಖಂಡರಾದ ಮಲ್ಲಪ್ಪ ಅಂಕುಶದೊಡ್ಡಿ, ಡಾ. ಬಿ.ಎಚ್. ದಿವಟರ್, ಪ್ರಸನ್ನ ಪಾಟೀಲ್, ಸೂಗಣ್ಣ ಬಾಳೇಕಾಯಿ, ದುರಗಪ್ಪ, ಜಗದೀಶ್ಚಂದ್ರ ಸ್ವಾಮಿ ಹಾಲಾಪೂರ, ಪಂಪಣ್ಣ ಗುಂಡಳ್ಳಿ. ವೆಂಕಟೇಶ್ ನಾಯಕ, ಮೌನೇಶ ನಾಯಕ, ನಾಗರಾಜ ಯಂಬಲದ, ಶಿವಕುಮಾರ ವಟಗಲ್, ಶ್ಯಾಮೀದ್ ಕಿಲ್ಲಾ ಸೇರಿದಂತೆ ಪಕ್ಷದ ಅನೇಕ ಮುಖಂಡರು, ಪುರಸಭೆ ಸದಸ್ಯರು ಸೇರಿದಂತೆ ಇತರರು ಪಾಲ್ಗೊಂಡಿದ್ದರು.

ಸಿಇಒ ಶಾಲೆಗೆ ಭೇಟಿ, ಪರಿಶೀಲನೆ

ಮಕ್ಕಳ ಪಾಲನೆ ಪೋಷಣೆಗಾಗಿ ಆರಂಭಿಸಿದ ಕೂಸಿನ ಮನೆಯ ವೀಕ್ಷಣೆ ನಡೆಸಿದ ಸಿಇಒ ಅವರು ಅಲ್ಲಿನ ಮಕ್ಕಳ ಹಾಜರಾತಿ ಮತ್ತು ಶಿಶು ಪಾಲಕಿಯರ ಕಾರ್ಯವೈಖರಿಯ ಬಗ್ಗೆ ಪರಿಶೀಲಿಸಿದರು.

ರಾಯಚೂರು: ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕಾಂದೂ ಅವರು ಶನಿವಾರ ಗ್ರಾಮೀಣ ಭಾಗದಲ್ಲಿ ಪ್ರವಾಸ ಕೈಗೊಂಡು ಮಸ್ಕಿ ತಾಲೂಕಿನ ವಟಗಲ್ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದರು.

ಕೂಲಿ ಕಾರ್ಮಿಕರ ಮಕ್ಕಳ ಪಾಲನೆ ಪೋಷಣೆಗಾಗಿ ಆರಂಭಿಸಿದ ಕೂಸಿನ ಮನೆಯ ವೀಕ್ಷಣೆ ನಡೆಸಿದ ಸಿಇಒ ಅವರು ಅಲ್ಲಿನ ಮಕ್ಕಳ ಹಾಜರಾತಿ ಮತ್ತು ಶಿಶು ಪಾಲಕಿಯರ ಕಾರ್ಯವೈಖರಿಯ ಬಗ್ಗೆ ಪರಿಶೀಲಿಸಿದರು.

ಪ್ರತಿನಿತ್ಯ ಶಿಶುಪಾಲನಾ ಕೇಂದ್ರದಲ್ಲಿ ವಿತರಿಸುವ ಆಹಾರದ ಕುರಿತು ಶಿಶು ಪಾಲಕಿಯರು ಮಕ್ಕಳಿಂದ ಮಾಹಿತಿ ಪಡೆದರು. ಮಕ್ಕಳಿಗೆ ವಿತರಿಸಲು ತಯಾರಿಸಿದ ಬೇಯಿಸಿದ ಮೊಟ್ಟೆ, ಶೇಂಗಾದ ಗುಣಮಟ್ಟ ಪರಿಶೀಲಿಸಿದರು.

ಜಿಲ್ಲಾ ಪಂಚಾಯತಿಯ ನಿರ್ದೇಶನದಂತೆ ಕೂಸಿನ ಮನೆಗಳಲ್ಲಿ ಆಹಾರ ಪಟ್ಟಿಯನ್ನು (ಫುಡ್ ಮೆನು) ಪ್ರದರ್ಶಿಸಿ ಅದರಂತೆ ಮಕ್ಕಳಿಗೆ ಆಹಾರ ಒದಗಿಸಬೇಕು. ಗ್ರಾಮ ಪಂಚಾಯಿತಿಯಿಂದ ಕೂಸಿನ ಮನೆ ಆರಂಭಿಸಿರುವ ಬಗ್ಗೆ ಪ್ರಚಾರ ನಡೆಸಿ, ಮಕ್ಕಳ ಸಂಖ್ಯೆ ಹೆಚ್ಚಳಕ್ಕೆ ಕ್ರಮಕೈಗೊಳ್ಳಬೇಕು. ಶಿಶು ಪಾಲಕಿಯರಿಗೆ ಎನ್‌ಎಂಆರ್ ಗಳನ್ನು ತೆಗೆದು ಕೂಲಿ ಪಾವತಿಸಬೇಕು ಎಂದು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರಾಥಮಿಕ ಶಾಲೆಯ 8ನೇ ತರಗತಿಗೆ ಭೇಟಿ ನೀಡಿ ಮಕ್ಕಳೊಂದಿಗೆ ಮಾತನಾಡಿ, ರಾಜ್ಯದ ಸಂಕ್ಷಿಪ್ತ ಮಾಹಿತಿ, ಕೇಂದ್ರ ಆಡಳಿತ ಪ್ರದೇಶಗಳ ಸಂಖ್ಯೆ ಕುರಿತು ಮಕ್ಕಳಿಂದ ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಅಮರೇಶ್, ಸಹಾಯಕ ನಿರ್ದೇಶಕ ಶಿವಾನಂದ ರಡ್ಡಿ, ಪಂಚಾಯಿತಿ ರಾಜ್ ಇಲಾಖೆಯ ಅಧಿಕಾರಿ ಸೋಮನಗೌಡ ಪಾಟೀಲ್, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ತಿಮ್ಮನಗೌಡ, ತಾಂತ್ರಿಕ ಸಂಯೋಜಕ ಅಶೋಕ್, ತಾಂತ್ರಿಕ ಸಹಾಯಕ ಅಭಿಯಂತರ ಪ್ರದೀಪ್, ಗ್ರಾಪಂ ಅಧ್ಯಕ್ಷರು, ಸದಸ್ಯರು, ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಸಹಾಯಕ ಅಭಿಯಂತರ ಬಸವರಾಜು, ವಿವಿಧ ಇಲಾಖೆ ಅಧಿಕಾರಿಗಳು, ತಾಪಂ ಮತ್ತು ಗ್ರಾಪಂ ಸಿಬ್ಬಂದಿ ಉಪಸ್ಥಿತರಿದ್ದರು.

ಹೂವು ಮುಡಿದು ನಿಂತ ತೊಗರಿ

ರಮೇಶ ಗೋನವಾರ, ಸಿಂಧನೂರು

ಸಿಂಧನೂರು ಹಾಗೂ ಸುತ್ತ ಮುತ್ತಲಿನ ತಾಲೂಕಿನ ಒಣ ಬೇಸಾಯ ಆಶ್ರಿತ ಗ್ರಾಮಗಳ ರೈತರ ಜಮೀನುಗಳಲ್ಲಿ ಈ ಬಾರಿ ತೊಗರಿ ಬೆಳೆ ಕಣ್ಣು ಕೋರೈಸುತ್ತಿದೆ. ಆರಂಭದಲ್ಲಿ ಮಳೆ ಕೊರತೆ ಎದುರಾಗಿತ್ತು, ತದನಂತರ ಬಿಟ್ಟೂ ಬಿಡದೇ ಸುರಿದ ಪರಿಣಾಮ ಬೆಳೆ ಹೂ ಮುಡಿದು ನಿಂತಿದ್ದು, ಅರ್ಧದಷ್ಟು ಜಮೀನುಗಳಲ್ಲಿ ಈಗಾಗಲೇ ಕಾಯಿಗಳು ಆಗಿವೆ.

> ''ಹೊಲ್ದಾಗ ಬೆಳಿ ಏನೋ ಚೆನ್ನಾಗಿದೆ. ಆದ್ರೆ ಮಾರ್ಕೆಟ್ಟನ್ಯಾಗ ಒಳ್ಳೆ ರೇಟು ಸಿಗೇಬೇಕ್ರಿ. ಹೋದ ಸಲ ಏಳುವರಿಯಿಂದ ಎಂಟು ಸಾವ್ರದವರೆಗೆ ಮೊದ್ಲ ರೇಟು ಇತ್ತು. ಆಮ್ಯಾಲೆ ಹದಿನೈದ ಹನ್ನೆರಡು ಸಾವ್ರದವರೆಗೆ ರೇಟು ಬಂತು. ಕಷ್ಟಪಟ್ಟು ಬೆಳಿದರ್ತಿವಿ. ಚಲೋ ರೇಟು ಸಿಕ್ರ ಮಾಡಿದ ಖರ್ಚು ಹೋಗಿ ಒಂದೀಟು ರೊಕ್ಕ ಉಳಿತಾವ.
> -ಶರಣಪ್ಪ, ಕಲಮಂಗಿಯ ರೈತ

ಕಳೆದ ವರ್ಷ ಆರಂಭದಲ್ಲಿ ತೊಗರಿಗೆ 7,500 ರಿಂದ 8000 ಸಾವಿರದವರೆಗೂ ದರ ಇತ್ತು. ಬರು ಬರುತ್ತಾ ಕೊನೆಯಲ್ಲಿ ಕ್ವಿಂಟಲ್‌ಗೆ 12 ಸಾವಿರ ರೂಪಾಯಿವರೆಗೂ ತೊಗರಿ ಮಾರಾಟವಾಗಿತ್ತು. ಉತ್ತಮ ದರವಿದ್ದ ಕಾರಣ ಮಳೆಯಾಶ್ರಿತ ರೈತರು ಒಳ್ಳೆಯ ಆದಾಯ ಪಡೆದುಕೊಂಡಿದ್ದರು. ಈ ಬಾರಿಯೂ ತೊಗರಿ ಬೆಳೆ ಬಂಪರ್ ಆಗಿರುವುದರಿಂದ ಉತ್ತಮ ಫಸಲು ಬಂದು ಒಳ್ಳೆಯ ಲಾಭ ದೊರೆಯಲಿದೆ ಎಂಬ ಆಶಾಭಾವನೆಯಲ್ಲಿದ್ದಾರೆ.

ಸತತ ಮಳೆಯಿಂದ ಕೀಟ ಕಾಟ ಕಡಿಮೆ. ಕಳೆದ ವರ್ಷಕ್ಕಿಂತ ಈ ಬಾರಿ ಕೀಟಗಳ ಕಾಟ ಕಡಿಮೆ ಇದೆ. ಆದರೂ ಎರಡರಿಂದ ಮೂರು ಬಾರಿ ಕ್ರಿಮಿನಾಶಕ ಸಿಂಪಡಿಸಿದ್ದೇವೆ ಎಂದು ರೈತರು ಹೇಳುತ್ತಾರೆ. ಸತತ ಮಳೆಯಿಂದಾಗಿ ಅಷ್ಟೊಂದು ಪ್ರಮಾಣದಲ್ಲಿ ತೊಗರಿಗೆ ಉಳುಬಾಧೆ ಕಾಡಿಲ್ಲ, ಇನ್ನು ಒಡಲು ಪ್ರದೇಶದಲ್ಲಿ ನೀರು ನಿಂತು ಅಲ್ಲಲ್ಲಿ ಎಲೆಗಳು ಹಳದಿ ಬಣ್ಣಕ್ಕೆ ತಿರುಗಿದ್ದು ಬಿಟ್ಟರೆ ಉಳಿದಂತೆ ಬೆಳೆ ಕಣ್ಣು ಬಿಡುವಂತೆ ಬಂದಿದೆ. ಹೊಲಗಳಲ್ಲಿ ತೊಗರಿ ಬೆಳೆ ನೋಡುವುದೇ ಒಂದು ಆನಂದ ಎನ್ನುತ್ತಾರೆ ರೈತರೊಬ್ಬರು.

ಉತ್ತಮ ಬೆಳೆ ಡಬಲ್ ಖುಷಿ

ಮಳೆಯಾಶ್ರಿತ ಪ್ರದೇಶದ ಜಮೀನುಗಳಲ್ಲಿನ ಬೆಳೆಗಳು ಉತ್ತಮವಾಗಿದ್ದರೆ, ಇತ್ತ ನೀರಾವರಿ ಅವಲಂಬಿತ ಗ್ರಾಮಗಳಲ್ಲಿಯೂ ಭತ್ತ ಉತ್ತಮವಾಗಿ ಬೆಳೆದಿರುವುದು ರೈತರಿಗೆ ಡಬಲ್ ಖುಷಿ ತಂದಿದೆ. ಇನ್ನು ಕೆಲ ಗ್ರಾಮಗಳಲ್ಲಿ ಮಳೆಯಾಶ್ರಿತ ಭೂಮಿ ಮತ್ತು ನೀರಾವರಿಯೂ ಇದ್ದು, ಕೆಲಸ ಕಾರ್ಯಗಳಲ್ಲಿ ಹೆಚ್ಚು ಬ್ಯುಸಿಯಾಗಿರುವುದು ಕಂಡು ಬರುತ್ತಿದೆ.

ಒಳ ಮೀಸಲು ಜಾರಿಗೆ ಆ.15 ಕೊನೆ ಗಡುವು

ಕೊಪ್ಪಳ: ಕೂಡಲೇ ರಾಜ್ಯ ಸರಕಾರ ಒಳ ಮೀಸಲಾತಿ ಜಾರಿ ಮಾಡಬೇಕು. ಆ. 15ರ ಒಳಗೆ ಒಳ ಮೀಸಲಾತಿ ಜಾರಿ ಆಗದಿದ್ದರೆ ಉಗ್ರ ಹೋರಾಟ ಮಾಡುತ್ತೇವೆ ಎಂದು ಸಿದ್ದರಾಮಯ್ಯ ನೇತೃತ್ವದ ಸಕಾರಕ್ಕೆ ಎಚ್ಚರಿಕೆ ನೀಡುತ್ತಿದ್ದೇವೆ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದರು. ಜಿಲ್ಲೆಯ ಗಂಗಾವತಿ ತಾಲೂಕಿನ ಮರಳಿ ಗ್ರಾಮದ ಖಾಸಗಿ ಹೋಟೆಲ್ ನಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಡೀ ರಾಜ್ಯದಲ್ಲಿ ನಮ್ಮ ಸಮಾಜ ತಮ್ಮ ಹಕ್ಕಾಗಿರುವ ಒಳ ಮೀಸಲಾತಿ ಜಾರಿಗಾಗಿ ಕಾದು ಕುಳಿತಿದೆ. ಈ ದೇಶದಲ್ಲಿ ದಲಿತರು ಮಲ ಮೂತ್ರ ತಲೆ ಮೇಲೆ ಹೊತ್ತು ಹೋಗುವ ಪದ್ದತಿ ಇತ್ತು. ಚರಂಡಿ ಸ್ವಚ್ಚ ಮಾಡುವ ಪದ್ಧತಿ ಇತ್ತು. ಪಾದರಕ್ಷೆ ಹೊಲಿದ ಜೀವನ ಮಾಡುವ ಈ ಸಮುದಾಯದ ಮೇಲೆ ಶತಮಾನದಿಂದ ಅಸ್ಪೃಶ್ಯತೆ ಆಚರಣೆ ನಡೆದಿದೆ. ಇಂಥ ಸಮುದಾಯ ಮೇಲೆತ್ತುವ ಕೆಲಸ ನಮ್ಮ ಪೂರ್ವಜರು ಸಂವಿಧಾನ ಮೂಲಕ ಅವಕಾಶ ಮಾಡಿಕೊಟ್ಟಿದ್ದಾರೆ ಎಂದರು. ಅಸ್ಪೃಶ್ಯತೆ ಆಚರಣೆ ಅನುಭವಿಸಿದ ಸಮುದಾಯಕ್ಕೆ ಉದ್ಯೋಗ, ಶಿಕ್ಷಣ, ರಾಜಕೀಯ ಮೀಸಲಾತಿ ಸಂವಿಧಾನ ನೀಡಿದೆ. ಇನ್ನು ಎಸ್ಸಿ ವರ್ಗದಲ್ಲಿ 56 ಜಾತಿಗಳಿವೆ. ಪ್ರಧಾನಿ ನರೇಂದ್ರ ಮೋದಿ ಅವರು ಹೈದ್ರಾಬಾದ್ ನಲ್ಲಿ ಮಾದಿಗ ಸಮಾವೇಶ ಮಾಡಿ, ನಾನು ನಿಮ್ಮಲ್ಲಿ ಒಬ್ಬ ದಲಿತ ಎಂದು ಹೇಳಿದ್ದರು. ಕೊಟ್ಟ ಮಾತಿನಂತೆ ಒಳ ಮೀಸಲಾತಿ ಜಾರಿ ಮಾಡಿದ್ದರು. ಆದರೆ ಸಿದ್ದರಾ ಮಯ್ಯ ಸರಕಾರ ಒಳಮೀಸಲಾತಿ ಜಾರಿಗೆ ಮೋಸ ಮಾಡಿದೆ. ಸುಪ್ರೀಂ ಕೋರ್ಟ್ ಆದೇಶ ಇದ್ದರೂ ಹೊಸ ಸಮಿತಿ ರಚನೆ ಮಾಡಿದೆ. ಇದು ಕಾನೂನು ಬಾಹೀರ ಎಂದರು.

ಕೊಪ್ಪಳ- ರಾಯಚೂರು, ಬಳ್ಳಾರಿ- ವಿಜಯನಗರ ಜಿಲ್ಲೆಗಳ ಬಿಜೆಪಿ ಸಂಘಟನಾತ್ಮಕ ಸಭೆ

ಸಿದ್ದರಾಮಯ್ಯ ಕ್ಯಾಟ್ ವಾಕ್ ಸಿಎಂ: ವಿಜಯೇಂದ್ರ ವ್ಯಂಗ್ಯ

ಗಂಗಾವತಿ ತಾಲೂಕು ಮರಳಿ ಗ್ರಾಮದಲ್ಲಿನ ಖಾಸಗಿ ಹೋಟೆಲ್ ನಲ್ಲಿ ನಡೆದ ಕೊಪ್ಪಳ– ರಾಯಚೂರು, ಬಳ್ಳಾರಿ– ವಿಜಯನಗರ ಜಿಲ್ಲೆಗಳ ಬಿಜೆಪಿ ಸಂಘಟನಾತ್ಮಕ ಸಭೆಯನ್ನು ಗಣ್ಯರು ಉದ್ಘಾಟಿಸಿದರು.

ಕೊಪ್ಪಳ: ರಾಜ್ಯ ಸರಕಾರದ ಅಭಿವೃದ್ಧಿ ಬಗ್ಗೆ ಚರ್ಚೆಗೆ ಬರುವಂತೆ ವಿರೋಧ ಪಕ್ಷಗಳಿಗೆ ಸಿಎಂ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ. ಸಿಎಂ ಮೊದಲು ಕಾಂಗ್ರೆಸ್ ಪಕ್ಷದ ಶಾಸಕರನ್ನು ಕರೆದು ಅವರು ಎತ್ತಿರುವ ಪ್ರಶ್ನೆಗೆ ಉತ್ತರ ಕೊಡಲಿ. ನಂತರ ವಿರೋಧ ಪಕ್ಷಗಳಿಗೆ ಸವಾಲು ಹಾಕಿಲಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ತಿರುಗೇಟು ನೀಡಿದರು.

ಗಂಗಾವತಿ ತಾಲೂಕು ಮರಳಿ ಗ್ರಾಮದಲ್ಲಿನ ಖಾಸಗಿ ಹೋಟೆಲ್ ನಲ್ಲಿ ಕೊಪ್ಪಳ– ರಾಯಚೂರು, ಬಳ್ಳಾರಿ– ವಿಜಯನಗರ ಜಿಲ್ಲೆಗಳ ಬಿಜೆಪಿ ಸಂಘಟನಾತ್ಮಕ ಸಭೆ ಉದ್ಘಾಟಿಸಿ ಭಾನುವಾರ ಮಾತನಾಡಿದರು.

ನಿಮ್ಮ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ಅಭಿವೃದ್ಧಿ ಬೇಕು ಎಂದರೆ ಗ್ಯಾರಂಟಿ ಬಿಟ್ಟು ಕೊಡಿ ಎಂದು ಜನರಿಗೆ ಬೆದರಿಕೆ ಹಾಕಿದ್ದಾರೆ. ಶಾಸಕ ಬಿ.ಆರ್.ಪಾಟೀಲ್ ಅವರು, ಸಿದ್ದರಾಮಯ್ಯ ಲಾಟರಿ ಸಿಎಂ ಎಂದು ಹೇಳಿದ್ದಾರೆ. ಇದರಿಂದ ಅಭಿವೃದ್ಧಿ ಬಗ್ಗೆ ವಿರೋಧ ಪಕ್ಷದ ಜತೆಗೆ ಚರ್ಚೆ ಮಾಡುವ ಯಾವುದೇ ಯೋಗ್ಯತೆ ಸಿಎಂ ಸಿದ್ದರಾಮಯ್ಯ ಅವರಿಗೆ ಇಲ್ಲ. ಆಡಳಿತ ಪಕ್ಷದ ಶಾಸಕರಿಗೆನೇ ಸರಕಾರ ಮತ್ತು ಸಿಎಂ ಮೇಲೆ ವಿಶ್ವಾಸ ಇಲ್ಲದಂತಾಗಿದೆ. ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ಶಾಸಕ ಬಿ.ಆರ್.ಪಾಟೀಲ್ ಅವರೇ ಸಿದ್ಧರಾಮಯ್ಯ ಸರಕಾರದ ವಿರುದ್ಧ ಮಾತನಾಡುತ್ತಿದ್ದಾರೆ. ಅದಕ್ಕಾಗಿಯೇ ರಾಜ್ಯದ ಉಸ್ತುವಾರಿ ಸುರ್ಜೆವಾಲ ಅವರು ಮೇಲಿಂದ ಮೇಲೆ ಕರ್ನಾಟಕಕ್ಕೆ ಬಂದು ಶಾಸಕರನ್ನು ಸಮಾಧಾನ ಮಾಡುವ ಕೆಲಸ ಮಾಡುತ್ತಿದ್ದಾರೆ. ಮತ್ತೊಂದು ಕಡೆ ಮುಂದೆ ಯಾರನ್ನು ಮುಖ್ಯಮಂತ್ರಿ ಮಾಡಬೇಕು ಎಂಬ ಚರ್ಚೆಯೂ ಕಾಂಗ್ರೆಸ್ ನಲ್ಲಿ ಜೋರಾಗಿ ನಡೆದಿದ್ದು, ಶಾಸಕರ ಕುದುರೆ ವ್ಯಾಪಾರಕ್ಕೆ ತಯಾರಿ ನಡೆದಿರುವುದು ಗುಟ್ಟಾಗಿ ಉಳಿದಿಲ್ಲ ಎಂದರು.

ಸಂಸದ ಗೋವಿಂದ ಕಾರಜೋಳ ಮಾತನಾಡಿ, ಮಲ್ಲಿಕಾರ್ಜುನ ಖರ್ಗೆ ಹೆಸರಿಗೆ ಮಾತ್ರ ಎಐಸಿಸಿ ಅಧ್ಯಕ್ಷರು. ಆದರೆ, ಅಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸರ್ವಾಧಿಕಾರಿ ಆಗಿದ್ದಾರೆ. ಆದರೆ, ಬಿಜೆಪಿಯಲ್ಲಿ ಹಾಗಿಲ್ಲ. ಬಿಜೆಪಿಯಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆ. ರಾಜ್ಯ ಸರಕಾರ ಭ್ರಷ್ಟಾಚಾರದಲ್ಲಿ ತೊಡಗಿದ್ದರೂ ಸಿದ್ದರಾಮಯ್ಯ ಬಂಡತನದಿಂದ ಮಾತನಾಡುತ್ತಿದ್ದಾರೆ ಎಂದರು.

ಶಾಸಕ ಗಾಲಿ ಜನಾರ್ದನ ರೆಡ್ಡಿ ಮಾತನಾಡಿ, ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಜಿಲ್ಲೆಯ ಎಲ್ಲ ಅವ್ಯವಹಾರ ಲೀಗಲ್ ಮಾಡಿದ್ದಾರೆ. ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ ನಾನು ಮತ್ತು ಶ್ರೀರಾಮುಲು ಮತ್ತೇ ರಾಜ್ಯ ಪ್ರವಾಸ ಮಾಡಿ, ಬಿಜೆಪಿ ಅಧಿಕಾರಕ್ಕೆ ತರುತ್ತೇವೆ. ಈ ಹಿಂದೆ ನಾವು ಯಡಿಯೂರಪ್ಪ ಜೊತೆ ಕೆಲಸ ಮಾಡಿದ್ದೇವೆ. ಆದರೆ, ನಾನು ವಿಜಯೇಂದ್ರಗೆ ಜೂನಿಯರ್ ಅಂತಾ ನಾ ಹೇಳಲ್ಲ. ವಯಸ್ಸಿನಲ್ಲಿ ಜೂನಿಯರ್ ಇದ್ದರೂ ಅನುಭವದಲ್ಲಿ ಸಾಕಷ್ಟು ಅನುಭವ ಇದೆ ಎಂದರು.

ಪಿ.ರಾಜೀವ, ಕರ್ನಾಟಕ ಸಹ ಉಸ್ತುವಾರಿ ಸುಧಾಕರ ರೆಡ್ಡಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಶರಣು ತಳ್ಳಿಕೇರಿ, ಸುಧಾಕರ ರೆಡ್ಡಿ, ಮಾಜಿ ಸಚಿವ ಬಿ.ಶ್ರೀರಾಮುಲು, ಸಚೇತ ದೊಡ್ಡನಗೌಡ ಪಾಟೀಲ್, ಮಾನಪ್ಪ ವಜ್ಜಲ, ಕೃಷ್ಣನಾಯ್ಕ, ಶಿವರಾಜ ಪಾಟೀಲ್, ಮುಖಂಡರಾದ ಬಂಗಾರು ಹನುಮಂತು, ಕೊಪ್ಪಳ ಜಿಲ್ಲಾಧ್ಯಕ್ಷ ಬಸವರಾಜ ಧಡೆಸುಗೂರ, ಸಂಜೀವರೆಡ್ಡಿ, ಅನೀಲ್ ನಾಯ್ಡು, ವೀರನಗೌಡ ಪಾಟೀಲ್, ಹೇಮಲತಾ ನಾಯಕ, ದೇವೇಂದ್ರಪ್ಪ, ಪರಾಜಿತ ಅಭ್ಯರ್ಥಿ ಡಾ.ಬಸವರಾಜ ಕ್ಯಾವಟರ್, ಬಸವರಾಜ ಬ್ಯಾಗವಾಟ್ ಇದ್ದರು.

> ಮಲ್ಲಿಕಾರ್ಜುನ ಖರ್ಗೆ ಹಿರಿಯ ರಾಜಕಾರಣಿ. ಮೈಸೂರು ಸಮಾವೇಶದಲ್ಲಿ ಪ್ರಧಾನಿ ಮೋದಿ ಟಿವಿಯಲ್ಲಿ ಬೊಗಳುತ್ತಾರೆ ಎಂದಿದ್ದಾರೆ. ಹಿರಿಯರಾಗಿ ಇಂಥ ಮಾತು ನಿರೀಕ್ಷೆ ಮಾಡಿರಲಿಲ್ಲ. ಬಿಜೆಪಿ ಕಾರ್ಯಕರ್ತರು ಈ ಯೋಜನೆ ಜನರಿಗೆ ತಲುಪಿಸಬೇಕಿದೆ.
> – ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಸಮಾಚಾರ ಸಣ್ಣದಲ್ಲ

ಟಿ20 ವಿಶ್ವಕಪ್ ಟೂರ್ನಿ: 32 ತಂಡ ಕಣಕ್ಕೆ?

ಸಿಂಗಾಪುರ: 2026ರ ಐಸಿಸಿ ಟಿ20 ವಿಶ್ವಕಪ್ ಬಳಿಕ ಚುಟುಕು ವಿಶ್ವಕಪ್‌ನಲ್ಲಿ ತಂಡಗಳನ್ನು ಹೆಚ್ಚಿಸಲು ಐಸಿಸಿ ಚಿಂತನೆ ನಡೆಸುತ್ತಿದೆ. ಟಿ20 ವಿಶ್ವಕಪ್ ತಂಡಗಳ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸಲು ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್(ಐಸಿಸಿ) ಚಿಂತನೆ ನಡೆಸುತ್ತಿದೆ. 2026ರ ಬಳಿಕ ಟಿ20 ವಿಶ್ವಕಪ್‌ನಲ್ಲಿ 32 ತಂಡಗಳನ್ನು ಆಡಿಸುವ ಬಗ್ಗೆ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚೆ ನಡೆದಿದೆ ಎಂದು ವರದಿಯಾಗಿದೆ. ಕಳೆದ ವರ್ಷ 4 ತಂಡಗಳನ್ನು ಹೆಚ್ಚಿಸಿ ಒಟ್ಟು 20 ತಂಡಗಳ ನಡುವೆ ವಿಶ್ವಕಪ್ ಆಡಿಸಲಾಗಿತ್ತು. 2026ರ ವಿಶ್ವಕಪ್‌ನಲ್ಲೂ 20 ತಂಡಗಳನ್ನೇ ಆಡಿಸುವ ಸಾಧ್ಯತೆ ಹೆಚ್ಚು. ಆದರೆ 2028ರಲ್ಲಿ ಲಾಸ್ ಏಂಜಲಿಸ್ ಒಲಿಂಪಿಕ್ಸ್ ಗಮನದಲ್ಲಿಟ್ಟುಕೊಂಡು 2026ರ ಬಳಿಕ ಟಿ20 ವಿಶ್ವಕಪ್‌ಗೆ ಇನ್ನೂ 12 ತಂಡಗಳನ್ನು ಸೇರಿಸುವ ಸಾಧ್ಯತೆಯಿದೆ ಎಂದು ವರದಿಯಾಗಿದೆ. ಈ ಬಗ್ಗೆ ಭಾನುವಾರ ಅಂತಿಮ ನಿರ್ಧಾರ ಹೊರಬೀಳಬಹುದು. ಲಾಸ್ ಏಂಜಲೀಸ್ ಒಲಿಂಪಿಕ್ಸ್ ಕ್ರಿಕೆಟ್ ತಂಡಗಳ ಅರ್ಹತೆ ಬಗ್ಗೆಯೂ ಸಭೆಯಲ್ಲಿ ಚರ್ಚೆಯಾಗಿದೆ. ಪ್ರತಿ ಖಂಡಗಳಿಂದ ರ‍್ಯಾಂಕಿಂಗ್ ಆಧಾರದಲ್ಲಿ ತಂಡಗಳನ್ನು ಆಯ್ಕೆ ಮಾಡಲು ನಿರ್ಧರಿಸಿದೆ ಎನ್ನಲಾಗುತ್ತಿದೆ. ಹೀಗಾದರೆ ರ‍್ಯಾಂಕಿಂಗ್‌ನಲ್ಲಿ ಮುಂಚೂಣಿಯಲ್ಲಿರುವ ಭಾರತ ಏಷ್ಯಾ ಖಂಡದಿಂದ ನೇರವಾಗಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲಿದೆ ಎಂದು ವರದಿಯಾಗಿದೆ.

ಏಷ್ಯನ್ ದಾಖಲೆ ಮೇಲೆ ಶುಭಮನ್ ಗಿಲ್ ಕಣ್ಣು

ಮ್ಯಾಚೆಂಸ್ಟರ್: ಇಲ್ಲಿನ ಓಲ್ಡ್ ಟ್ರಾಫರ್ಡ್‌ನಲ್ಲಿ ಬುಧವಾರ ಆರಂಭವಾಗಲಿರುವ ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು ಭರ್ಜರಿ ಪ್ರದರ್ಶನ ನೀಡುವ ಗುರಿಯನ್ನು ಹೊಂದಿದ್ದು, ಶುಭಮನ್ ಗಿಲ್ ಮಹತ್ವದ ಮೈಲಿಗಲ್ಲು ಸಾಧಿಸುವ ಸನಿಹದಲ್ಲಿದ್ದಾರೆ. ಇಂಗ್ಲಿಷ್ ನೆಲದಲ್ಲಿ ದ್ವಿಪಕ್ಷೀಯ ಟೆಸ್ಟ್ ಸರಣಿಯಲ್ಲಿ ಏಷ್ಯನ್ ಬ್ಯಾಟ್ಸ್‌ಮನ್ ಗಳಿಸಿದ ಅತಿ ಹೆಚ್ಚು ರನ್‌ಗಳ ದಾಖಲೆಯನ್ನು ಮುರಿಯಲು 25 ರನ್‌ಗಳ ಅವಶ್ಯ ಏದೆ. ಪ್ರಸ್ತುತ ದಾಖಲೆ ಪಾಕಿಸ್ತಾನದ ಮೊಹಮ್ಮದ್ ಯೂಸುಫ್ ಹೆಸರಿನಲ್ಲಿದೆ. ಅವರು ನಾಲ್ಕು ಪಂದ್ಯಗಳಲ್ಲಿ 90.14 ಸರಾಸರಿಯಲ್ಲಿ 631 ರನ್ ಗಳಿಸಿದ್ದರು. ಭಾರತದ ಪರ ರಾಹುಲ್ ದ್ರಾವಿಡ್ 4 ಪಂದ್ಯಗಳಿಂದ 602 ರನ್ ಗಳಿಸಿ ಈ ತನಕ ಅಗ್ರ ಸ್ಥಾನದಲ್ಲಿದ್ದರು. ಗಿಲ್ ಪ್ರಸ್ತುತ ಮೂರು ಪಂದ್ಯಗಳಿಂದ 607 ರನ್ ಗಳಿಸಿದ್ದಾರೆ. ಲಾರ್ಡ್ಸ್ ಟೆಸ್ಟ್‌ನಲ್ಲಿ 22 ರನ್‌ಗಳ ಸೋಲಿನ ನಂತರ, ಸರಣಿಯನ್ನು ಗೆಲ್ಲುವ ತಮ್ಮ ಆಕಾಂಕ್ಷೆಯನ್ನು ಉಳಿಸಿಕೊಳ್ಳಲು ಭಾರತವು ಮ್ಯಾಂಚೆಸ್ಟರ್ ಟೆಸ್ಟ್‌ನಲ್ಲಿ ಗೆಲುವು ಸಾಧಿಸಲೇಬೇಕು. ಆಸ್ಟ್ರೇಲಿಯಾದ ಮಾಜಿ ಬ್ಯಾಟ್ಸ್‌ಮನ್ ಗ್ರೆಗ್ ಚಾಪೆಲ್ ಅವರು ಮ್ಯಾಂಚೆಸ್ಟರ್ ಟೆಸ್ಟ್ ಶುಭಮನ್ ಗಿಲ್ ಅವರ ವೃತ್ತಿಜೀವನದ ಅತ್ಯಂತ ದೊಡ್ಡ ಸವಾಲು ಎಂದು ಬಣ್ಣಿಸಿದ್ದಾರೆ.

ಭಾರತಕ್ಕೆ ಮತ್ತೆ ಆಘಾತ, ಅವಳಿ ದೀಪ ಔಟ್

ಆಕಾಶ್‌ದೀಪ್, ಅರ್ಶ್‌ದೀಪ್ 4ನೇ ಟೆಸ್ಟ್‌ಗೆ ಅನುಮಾನ, ವೇಗಿ ಕಾಂಬೋಜ್ ಸೇರ್ಪಡೆ | ರಿಶಭ್ ಪಂತ್ ಚೇತರಿಕೆ

ಮ್ಯಾಂಚೆಸ್ಟರ್: ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಟೆಸ್ಟ್ ಪಂದ್ಯಕ್ಕೂ ಮುನ್ನ ಭಾರತ ಬೌಲಿಂಗ್ ತಂಡಕ್ಕೆ ಹಲವು ಆಘಾತಗಳು ಎದುರಾಗಿವೆ. ತಂಡದ ಪ್ರಮುಖ ವೇಗಿ ಆಕಾಶ್‌ದೀಪ್ ಗಾಯಗೊಂಡ ಬೆನ್ನಿಗೇ ಇನ್ನೊಬ್ಬ ಎಡಗೈ ವೇಗಿ ಅರ್ಶ್‌ದೀಪ್ ಸಿಂಗ್‌ಗೂ ಅಭ್ಯಾಸದ ವೇಳೆ ಕೈ ಬೆರಳಿನ ಗಾಯವಾಗಿದ್ದು, ಅವರ ಬದಲಿಗೆ ಬ್ಯಾಕ್-ಅಪ್ ಬೌಲರ್ ಆಗಿ ಅನ್ಶುಲ್ ಕಾಂಬೋಜ್ ಅವರನ್ನು ಸೇರಿಸಿಕೊಳ್ಳಲಾಗಿದೆ.

ಲಾರ್ಡ್ಸ್‌ನಲ್ಲಿ 22 ರನ್‌ಗಳ ಸೋಲಿನ ನಂತರ ಭಾರತ ಐದು ಪಂದ್ಯಗಳ ಸರಣಿಯಲ್ಲಿ 1-2 ರಿಂದ ಹಿನ್ನಡೆಯಲ್ಲಿದೆ. ಆದ್ದರಿಂದ, ಸರಣಿ ಜೀವಂತವಿರಿಸಿಕೊಳ್ಳಬೇಕಿದ್ದರೆ ಗಿಲ್ ಪಡೆಗೆ ಮಾಡು ಇಲ್ಲವೇ ಮಡಿ ಪಂದ್ಯವಾಗಿದೆ. ಪಂದ್ಯವನ್ನು ಗೆಲ್ಲಬೇಕು ಅಥವಾ ಡ್ರಾ ಮಾಡಿಕೊಳ್ಳಬೇಕು. 4ನೇ ಟೆಸ್ಟ್‌ಗೆ ಕೇವಲ 3 ದಿನಗಳು ಬಾಕಿ ಇರುವಾಗ, ಆಕಾಶ್‌ದೀಪ್ ತೊಡೆಸಂದು ನೋವಿಗೆ ತುತ್ತಾಗಿದ್ದಾರೆ. ಇದು ತಂಡಕ್ಕೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಎಡಗೈ ವೇಗಿ ಅರ್ಶ್‌ದೀಪ್ ಸಿಂಗ್ ಅವರು ಅಭ್ಯಾಸದ ವೇಳೆ ಸಾಯಿ ಸುದರ್ಶನ್ ಬಾರಿಸಿದ ಚೆಂಡನ್ನು ಹಿಡಿಯುವ ಯತ್ನದಲ್ಲಿ ಕೈಗೆ ಗಾಯ ಮಾಡಿಕೊಂಡಿದ್ದಾರೆ.

ಪಂತ್ ಚೇತರಿಕೆ

ಲಾರ್ಡ್ಸ್ ಟೆಸ್ಟ್‌ನ ಮೊದಲ ದಿನದಾಟದ ವೇಳೆ ಬೆರಳಿಗೆ ಗಾಯಕ್ಕೆ ತುತ್ತಾಗಿದ್ದ ಪಂತ್ ಸಂಪೂರ್ಣ ಚೇತರಿಕೆ ಕಂಡಿದ್ದು ಆಡಲು ಫಿಟ್ ಆಗಿದ್ದಾರೆ ಎಂದು ಬಿಸಿಸಿಐ ವೈದ್ಯಕೀಯ ವಿಭಾಗ ಮಾಹಿತಿ ನೀಡಿದೆ. ಅವರ ಗಾಯದ ಸ್ವರೂಪ ಗಂಭೀರ ವಾದದ್ದಲ್ಲ. ನಾಲ್ಕನೇ ಟೆಸ್ಟ್‌ನಲ್ಲಿ ಅವರು ಆಡಲಿದ್ದಾರೆ ಎಂದು ತಿಳಿಸಿದೆ. ಮೂರನೇ ಟೆಸ್ಟ್‌ನಲ್ಲಿ ಗಾಯದಿಂದ ಪಂತ್ ಕೀಪಿಂಗ್ ಮಾಡಿರಲಿಲ್ಲ. ಧ್ರುವ್ ಜುರೆಲ್ ಕೀಪಿಂಗ್ ನಡೆದಿದ್ದರು.

ಹೀಗಾಗಿ ಅವರಿಗೆ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಅವಕಾಶ ಸಿಗುವುದು ಅನುಮಾನ. ಅರ್ಶ್‌ದೀಪ್ ಸಿಂಗ್ ಅವರ ಗಾಯಗೊಂಡ ಕೈಗೆ ಹೊಲಿಗೆ ಹಾಕಲಾಗಿದೆ. ಚೇತರಿಸಿಕೊಳ್ಳಲು ಮತ್ತು ಸಂಪೂರ್ಣವಾಗಿ ಫಿಟ್ ಆಗಲು '10 ದಿನಗಳು' ಬೇಕಾಗುತ್ತದೆ, ಹೀಗಾಗಿ ಅಂಶುಲ್ ಕಂಬೋಜ್ ಅವರನ್ನು ಬದಲಿ ಆಟಗಾರನಾಗಿ ತಂಡಕ್ಕೆ ಸೇರಿಸಲಾಗಿದೆ ಎಂದು ಬಿಸಿಸಿಐ ಮೂಲಗಳು ಹೇಳಿವೆ. ಅರ್ಶ್ ದೀಪ್ ಗಾಯಗೊಂಡಿದ್ದರೂ ತಂಡದ ಜತೆ ಉಳಿಸಿಕೊಳ್ಳಲಾಗಿದೆ.

ಆಕಾಶ್ ದೀಪ್ ಅನುಮಾನ: ಅರ್ಶ್‌ದೀಪ್ ಸಿಂಗ್ ಜೊತೆಗೆ, ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್‌ನಲ್ಲಿ ನಡೆಯಲಿರುವ ಪಂದ್ಯಕ್ಕೆ ಆಕಾಶ್ ದೀಪ್ ಲಭ್ಯತೆಯ ಬಗ್ಗೆ ಭಾರತ ಕ್ರಿಕೆಟ್ ಮಂಡಳಿ ಆತಂಕದಲ್ಲಿದೆ. ಲಾರ್ಡ್ಸ್ ಟೆಸ್ಟ್‌ನ 4ನೇ ದಿನದಂದು ಆಕಾಶ್ ದೀಪ್ ತೊಡೆ ಸಂಧು ನೋವಿನಿಂದ ಚಿಕಿತ್ಸೆ ಪಡೆಯಲು ಮೈದಾನ ದಿಂದ ಹೊರ ನಡೆದಿದ್ದರು. ಎಜ್‌ಬಾಸ್ಟನ್ ಟೆಸ್ಟ್ ಪಂದ್ಯದ ಗೆಲುವಿನಲ್ಲಿ ಆಕಾಶ್‌ದೀಪ್ ಪ್ರಮುಖ ಪಾತ್ರವಹಿಸಿದ್ದರು. ಒಂದೊಮ್ಮೆ ಆಕಾಶ್‌ದೀಪ್ ಮತ್ತು ಅರ್ಶ್‌ದೀಪ್ ಅಲಭ್ಯರಾದರೆ ಆಗ ಕನ್ನಡಿಗ ಪ್ರಸಿದ್ಧ್ ಕೃಷ್ಣ ಅವರು ಸಿರಾಜ್ ಮತ್ತು ಬುಮ್ರಾ ಜತೆ ಆಡುವ ಬಳಗದಲ್ಲಿ ಕಾಣಿಸಿಕೊಳ್ಳಬಹುದು.

ಯಾರೀ ಅನ್ಶುಲ್?

ಹರಿಯಾಣದ 24 ವರ್ಷದ ವೇಗಿ ಅನ್ಶುಲ್ ಕಾಂಬೋಜ್ ಇತ್ತೀಚೆಗೆ ಇಂಗ್ಲೆಂಡ್ ಪ್ರವಾಸ ಮಾಡಿದ್ದ ಭಾರತ 'ಎ' ತಂಡದ ಭಾಗವಾಗಿದ್ದರು. ಇಂಗ್ಲೆಂಡ್ ಲಯನ್ಸ್ ವಿರುದ್ಧ ಆಡಿದ್ದ ಎರಡು ಅನಧಿಕೃತ ಟೆಸ್ಟ್‌ನಲ್ಲಿ 5 ವಿಕೆಟ್ ಕಿತ್ತಿದ್ದರು. ಎರಡನೇ ಪಂದ್ಯದಲ್ಲಿ ಅರ್ಧಶತಕವನ್ನೂ ಗಳಿಸಿದ್ದರು. 18ನೇ ಆವೃತ್ತಿಯ ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪರ ಆಡಿದ್ದ ಅವರು 21.50 ಸರಾಸರಿ ಮತ್ತು 8ರ ಎಕಾನಮಿಯಲ್ಲಿ ಎಂಟು ವಿಕೆಟ್‌ಗಳನ್ನು ಕಬಳಿಸಿದ್ದರು. ಕಾಂಬೋಜ್ ಆಲ್‌ರೌಂಡರ್ ಆಗಿದ್ದು, ತಮ್ಮ ಪ್ರಥಮ ದರ್ಜೆ ವೃತ್ತಿಜೀವನದಲ್ಲಿ 22.88 ರ ಸರಾಸರಿಯಲ್ಲಿ 79 ವಿಕೆಟ್‌ಗಳನ್ನು ಮತ್ತು 3.10 ರ ಎಕಾನಮಿಯನ್ನು ಹೊಂದಿದ್ದಾರೆ. ಇದರಲ್ಲಿ ಎರಡು ಐದು ವಿಕೆಟ್‌ಗಳು ಮತ್ತು ಒಂದು ಹತ್ತು ವಿಕೆಟ್‌ಗಳು ಸೇರಿವೆ. ಅವರು ಲಿಸ್ಟ್ ಎ ಮತ್ತು ಟಿ20 ಕ್ರಿಕೆಟ್‌ನಲ್ಲಿ 74 ವಿಕೆಟ್‌ಗಳನ್ನು ಪಡೆದಿದ್ದಾರೆ. ಕಾಂಬೋಜ್ ಕಳೆದ ವರ್ಷ ಕೇರಳ ತಂಡದ ವಿರುದ್ಧದ ರಣಜಿ ಪಂದ್ಯದಲ್ಲಿ ಇನ್ನಿಂಗ್ಸ್‌ನ ಎಲ್ಲಾ 10 ವಿಕೆಟ್‌ಗಳನ್ನು ಕಿತ್ತು ರಣಜಿ ಟ್ರೋಫಿ ದಾಖಲೆ ಬರೆದಿದ್ದರು.

ಲೆಜೆಂಡ್ಸ್ ಕಪ್: ಭಾರತ-ಪಾಕ್ ಪಂದ್ಯ ರದ್ದು

ಪಾಕ್ ವಿರುದ್ಧದ ಪಂದ್ಯಕ್ಕೆ ಆಟಗಾರರಿಂದಲೇ ವಿರೋಧ, ಕ್ಷಮೆ ಕೋರಿದ ಡಬ್ಲ್ಯುಸಿಎಲ್

ಬರ್ಮಿಂಗ್‌ಹ್ಯಾಮ್: ಭಾರತದ ಆಟಗಾರರು ಹಿಂದೆ ಸರಿದ ಬೆನ್ನಲ್ಲೇ ವಿಶ್ವ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ 2025 ಕ್ರಿಕೆಟ್ ಟೂರ್ನಿಯಲ್ಲಿ ಭಾನುವಾರ ನಡೆಯಬೇಕಿದ್ದ ಭಾರತ-ಪಾಕಿಸ್ತಾನ ಕ್ರಿಕೆಟ್ ಪಂದ್ಯ ರದ್ದಾಗಿದೆ.

ಭಾರತ-ಪಾಕಿಸ್ತಾನದ ನಡುವಿನ ಪಂದ್ಯದ ಬಗ್ಗೆ ಹಲವು ಭಾರತೀಯರು ವಿರೋಧ ವ್ಯಕ್ತಪಡಿಸಿದ್ದರು. ಪಂದ್ಯದ ಕುರಿತು ಸಾಮಾಜಿಕ ಜಾಲತಾಣದಲ್ಲಿ ಭಾರೀ ಟೀಕೆ ವ್ಯಕ್ತಪಡಿಸಿದ್ದರು. ಪಹಲ್ಗಾಮ್ ದಾಳಿ, ಆಪರೇಷನ್ ಸಿಂಧೂರ ವಿಚಾರವನ್ನು ಪ್ರಸ್ತಾಪಿಸಿ ಪಾಕ್ ಜೊತೆ ಆಡುವ ಅಗತ್ಯವಿದೆಯೇ ಎಂದು ಪ್ರಶ್ನಿಸಿದ್ದರು. ಜೊತೆಗೆ ಪಂದ್ಯವನ್ನು ಆಡಲು ಭಾರತ ಲೆಜೆಂಡ್ಸ್ ತಂಡದ ಹಲವಾರು ಆಟಗಾರರು ಹಿಂದೇಟು ಹಾಕಿದ್ದರು. ಈ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ವರದಿಗಳಿಂದ ತಿಳಿದುಬಂದಿದೆ.

ವರ್ಲ್ಡ್ ಚಾಂಪಿಯನ್ ಶಿಪ್ ಆಫ್ ಲೆಜೆಂಡ್ಸ್ ಟೂರ್ನಿ ಆಯೋಜಕರು ಸೋಷಿಯಲ್ ಮೀಡಿಯಾದಲ್ಲಿ ಭಾನುವಾರ ನಡೆಯಬೇಕಿದ್ದ ಇಂಡಿಯಾ ಚಾಂಪಿಯನ್ಸ್ ಹಾಗೂ ಪಾಕಿಸ್ತಾನ್ ಚಾಂಪಿಯನ್ಸ್ ನಡುವಣ ಪಂದ್ಯವನ್ನು ರದ್ದುಗೊಳಿಸಿರುವುದಾಗಿ ತಿಳಿಸಿದ್ದಾರೆ.

ಈ ವರ್ಷ ಪಾಕಿಸ್ತಾನ ಹಾಕಿ ತಂಡ ಭಾರತಕ್ಕೆ ಬರಲಿದೆ ಎಂಬ ಸುದ್ದಿ ಹಾಗೂ ಇತ್ತೀಚೆಗೆ ನಡೆದ ಭಾರತ ಹಾಗೂ ಪಾಕಿಸ್ತಾನ ವಾಲಿಬಾಲ್ ಪಂದ್ಯ ಮತ್ತು ವಿವಿಧ ಕ್ರೀಡೆಗಳಲ್ಲಿ ಎರಡೂ ರಾಷ್ಟ್ರಗಳ ನಡುವೆ ಕೆಲವು ಇತರ ಪಂದ್ಯಗಳು ನಡೆದ ಹಿನ್ನೆಲೆಯಲ್ಲಿ, ಡಬ್ಲ್ಯುಸಿಎಲ್‌ನಲ್ಲಿ ಭಾರತ ಹಾಗೂ ಪಾಕ್ ಪಂದ್ಯ ಆಯೋಜನೆಗೆ ನಾವು ಯೋಚಿಸಿದ್ದೆವು. ಎರಡೂ ತಂಡದ ಅಭಿಮಾನಿಗಳಿಗೆ ಕೆಲ ಸಂತಸದ ನೆನಪುಗಳನ್ನು ಸೃಷ್ಟಿಸಲು ಯತ್ನಿಸಿದ್ದೆವು. ಆದರೆ ಇದರಿಂದ ನಾವು ಅನೇಕರ ಭಾವನೆಗಳನ್ನು ನೋಯಿಸಿದ ಹಾಗೂ ಭಾವನೆಗಳನ್ನು ಕಲಕಿದ್ದೇವೆ ಎಂದೆನಿಸುತ್ತದೆ. ಅಲ್ಲದೆ, ನಮ್ಮ ಭಾರತೀಯ ಕ್ರಿಕೆಟ್ ದಂತಕಥೆಗಳಿಗೆ ನಾವು

ಉದ್ದೇಶಪೂರ್ವಕವಾಗಿ ಸಮಸ್ಯೆ ಉಂಟು ಮಾಡಿದಂತಾಗಿದೆ. ಆಟದ ಮೇಲಿನ ಪ್ರೀತಿಯಿಂದ ನಮ್ಮನ್ನು ಬೆಂಬಲಿಸಿದ ಬ್ರ್ಯಾಂಡ್‌ಗಳ ಮೇಲೆಯೂ ಪರಿಣಾಮವಾಗಿದೆ. ಆದ್ದರಿಂದ, ನಾವು ಭಾರತ ಹಾಗೂ ಪಾಕಿಸ್ತಾನ ಪಂದ್ಯವನ್ನು ರದ್ದುಗೊಳಿಸಲು ನಿರ್ಧರಿಸಿದ್ದೇವೆ. ಭಾವನೆಗಳಿಗೆ ನೋವುಂಟು ಮಾಡಿದ್ದಕ್ಕಾಗಿ ನಾವು ಮತ್ತೊಮ್ಮೆ ಪ್ರಾಮಾಣಿಕವಾಗಿ ಕ್ಷಮೆಯಾಚಿಸುತ್ತೇವೆ. ಅಭಿಮಾನಿಗಳಿಗೆ ಕೆಲವು ಸಂತೋಷದ ಕ್ಷಣಗಳನ್ನು ನೀಡುವ ಉದ್ದೇಶ ನಮ್ಮದಾಗಿತ್ತು, ಅದನ್ನು ಜನರು ಅರ್ಥಮಾಡಿಕೊಳ್ಳುತ್ತಾರೆ ಎಂದು ಭಾವಿಸುತ್ತೇವೆ'' ಎಂದು ಡಬ್ಲ್ಯುಸಿಎಲ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ.

ಕ್ರೀಡಾಂಗಣ ಮುಚ್ಚಲಾಗಿರುವುದರಿಂದ ದಯವಿಟ್ಟು ಯಾರೂ ಹಾಜರಾಗಬೇಡಿ. ಟಿಕೆಟ್ ಖರೀದಿಸಿದ ಎಲ್ಲಾ ಪ್ರೇಕ್ಷಕರಿಗೆ ಪೂರ್ಣ ಮರುಪಾವತಿ ಮಾಡಲಾಗುವುದು ಎಂದು ಅದು ತಿಳಿಸಿದೆ. ಕಳೆದ ವರ್ಷ ವಿಶ್ವ ಚಾಂಪಿಯನ್‌ಶಿಪ್ ಆಫ್ ಲೆಜೆಂಡ್ಸ್ ಟೂರ್ನಿ ಆರಂಭಗೊಂಡಿತ್ತು. ಫೈನಲ್‌ನಲ್ಲಿ ಪಾಕಿಸ್ತಾನವನ್ನು ಸೋಲಿಸಿ ಭಾರತ 5 ವಿಕೆಟ್ ಜಯ ಸಾಧಿಸಿ ಕಪ್ ಗೆದ್ದಿತ್ತು.

ಗೋವಾ ತಂಡ ಸೇರಿದ ವೇಗಿ ಕೌಶಿಕ್

ಬೆಂಗಳೂರು: ಕರ್ನಾಟಕ ತಂಡ ತೊರೆದು ವಿದರ್ಭ ಸೇರಿದ್ದ ಕರುಣ್ ನಾಯರ್ ಮತ್ತೆ ರಾಜ್ಯ ತಂಡಕ್ಕೆ ಮರಳಿದ್ದಾರೆ. ಇದೇ ವೇಳೆ ಬಲಗೈ ವೇಗಿ ವಾಸುಕಿ ಕೌಶಿಕ್ ತವರು ತಂಡ ತೊರೆದು ಮುಂಬರುವ ದೇಶಿಯ ಕ್ರಿಕೆಟ್ ಋತುವಿಗಾಗಿ ಗೋವಾ ತಂಡ ಸೇರಿದ್ದಾರೆ. ಗೋವಾ ಕ್ರಿಕೆಟ್ ಅಸೋಸಿಯೇಷನ್ ಇಲ್ಲಿಯವರೆಗೆ ಸಹಿ ಮಾಡಿದ ಇಬ್ಬರು ವೃತ್ತಿಪರ ಆಟಗಾರರಲ್ಲಿ ಅವರು ಒಬ್ಬರು. ಕೌಶಿಕ್ ಈಗಾಗಲೇ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ನಿಂದ ನಿರಾಕ್ಷೇಪಣಾ ಪ್ರಮಾಣಪತ್ರ ಪಡೆದಿದ್ದಾರೆ.

ವಾಸುಕಿ ಕೌಶಿಕ್ ಗೋವಾ ತಂಡ ಸೇರುತ್ತಿರುವುದನ್ನು ಅಲ್ಲಿ ಕ್ರಿಕೆಟ್ ಅಸೋಸಿಯೇಷನ್ ದೃಢಪಡಿಸಿದೆ. ''ನಾವು ಕೌಶಿಕ್ ಅವರೊಂದಿಗೆ ಸಹಿ ಹಾಕಿದ್ದೇವೆ. ಇಲ್ಲಿಯವರೆಗೆ, ಅದು ಮಾತ್ರ ದೃಢೀಕೃತ ವರ್ಗಾವಣೆಯಾಗಿದೆ. ನಾವು ಇತರ ಕೆಲ ಆಯ್ಕೆಗಳನ್ನು ಅನ್ವೇಷಿಸುತ್ತಿದ್ದೇವೆ, ಆದರೆ ಇನ್ನೂ ಯಾವುದೇ ಹೆಸರುಗಳನ್ನು ಅಂತಿಮಗೊಳಿಸಲಾಗಿಲ್ಲ'' ಎಂದು ಜಿಸಿಎ ಕಾರ್ಯದರ್ಶಿ ಶಂಭಾ ದೇಸಾಯಿ ತಿಳಿಸಿದ್ದಾರೆ.

ಕಳೆದ ಋತುವಿನಲ್ಲಿ ಕರ್ನಾಟಕ ಪರ ಕೌಶಿಕ್, 7 ರಣಜಿ ಟ್ರೋಫಿ ಪಂದ್ಯಗಳು, 5 ವಿಜಯ್ ಹಜಾರೆ ಪಂದ್ಯಗಳು ಮತ್ತು 10 ಟಿ20 ಪಂದ್ಯಗಳಲ್ಲಿ ಆಡಿದ್ದು, ಕ್ರಮವಾಗಿ 23, 8 ಮತ್ತು 18 ವಿಕೆಟ್‌ಗಳನ್ನು ಕಬಳಿಸಿದ್ದರು. ಮುಂಬರುವ ಋತುವಿನಲ್ಲಿ ಅವರು ಸಚಿನ್ ತೆಂಡೂಲ್ಕರ್ ಪುತ್ರ ಅರ್ಜುನ್ ತೆಂಡೂಲ್ಕರ್ ಜತೆ ಆಡಲಿದ್ದಾರೆ. ಅರ್ಜುನ್ ತೆಂಡೂಲ್ಕರ್ 2022ರಲ್ಲಿ ಗೋವಾ ತಂಡ ಸೇರಿದ್ದರು. ಯಶಸ್ವಿ ಜೈಸ್ವಾಲ್ ಮುಂಬೈ ತೊರೆದು ಗೋವಾ ತಂಡ ಸೇರಲು ಮುಂದಾಗಿದ್ದರು. ಆದರೆ ಆ ಬಳಿಕ ಅವರು ತಮ್ಮ ನಿರ್ಧಾರ ಬಲಿಸಿ ಮುಂಬೈ ಪರ ಮುಂದುವರಿಯುವುದಾಗಿ ತಿಳಿಸಿದರು. ವಿಜಯ್ ಹಜಾರೆ ಟ್ರೋಫಿಯಲ್ಲಿ, ಗೋವಾ ತಂಡವು ಗ್ರೂಪ್ ಎ ನಲ್ಲಿ 5ನೇ ಸ್ಥಾನ ಪಡೆದರೆ, ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ 6ನೇ ಸ್ಥಾನ ಗಳಿಸಿತ್ತು. ದರ್ಶನ್ ಮಿಸಾಲ್ ರಣಜಿ ಮತ್ತು ವಿಜಯ್ ಹಜಾರೆ ಪಂದ್ಯಾವಳಿಗಳಲ್ಲಿ ತಂಡವನ್ನು ಮುನ್ನಡೆಸಿದರೆ, ದೀಪರಾಜ್ ಗಾಂವ್ಕರ್ ಮುಷ್ತಾಕ್ ಅಲಿ ಸ್ಪರ್ಧೆಯಲ್ಲಿ ತಂಡವನ್ನು ಮುನ್ನಡೆಸಿದ್ದರು.

9 ಸಾವಿರ ರನ್‌ಗಳತ್ತ ಕೆ.ಎಲ್.ರಾಹುಲ್ ನಡೆ

ಮ್ಯಾಂಚೆಸ್ಟರ್: ಇಂಗ್ಲೆಂಡ್ ವಿರುದ್ಧದ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಕನ್ನಡಿಗ ಕೆ.ಎಲ್ ರಾಹುಲ್ ವರಿಗೆ ಭಾರತ ಪರ 9000 ಅಂತಾರಾಷ್ಟ್ರೀಯ ರನ್‌ಗಳನ್ನು ಪೂರ್ತಿಗೊಳಿಸಲು ಕೇವಲ 60 ರನ್‌ಗಳ ಅಗತ್ಯವಿದೆ. ಇಲ್ಲಿಯವರೆಗೆ, ರಾಹುಲ್ 218 ಪಂದ್ಯಗಳಿಂದ 75.01 ರ ಸರಾಸರಿಯಲ್ಲಿ 8,940 ರನ್ ಗಳಿಸಿದ್ದಾರೆ. ಇದರಲ್ಲಿ 19 ಶತಕಗಳು ಮತ್ತು 58 ಅರ್ಧಶತಕ ಒಳಗೊಂಡಿದೆ.

ರಾಹುಲ್‌ಗೆ ಈ ಸರಣಿಯಲ್ಲಿ ತಮ್ಮ ವೈಯಕ್ತಿಕ ದಾಖಲೆಯನ್ನು ತಿದ್ದಿ ಬರೆಯುವ ಅವಕಾಶ ಕೂಡ ಇದೆ. ರಾಹುಲ್ ಕೇವಲ 19 ರನ್ ಬಾರಿಸಿದರೆ ಟೆಸ್ಟ್ ಸರಣಿಯೊಂದರಲ್ಲಿಅತ್ಯಧಿಕ ರನ್ ಗಳಿಸಿದ ಸಾಧನೆ ಮಾಡಲಿದ್ದಾರೆ.



ಡೆವಿಲ್ ಹೊಸ ಅವತಾರದಲ್ಲಿ ದಾಸ

ಎಲ್ಲರೂ ಕಾತರದಿಂದ ಕಾಯುತ್ತಿದ್ದ ಡೆವಿಲ್ ಪೋಸ್ಟರ್ ರಿಲೀಸ್ ಆಗಿದ್ದು ಅಭಿಮಾನಿಗಳು ಖುಷಿಯಾಗಿದ್ದಾರೆ.

ದಾಸ ಹೊಸ ಲುಕ್ ನಲ್ಲಿ ದರ್ಶನ ನೀಡಿದ್ದು ಅಭಿಮಾನಿಗಳು ಖುಷಿಯಾಗಿದ್ದಾರೆ. ಡೆವಿಲ್ ಟೈಟಲ್ ಲ್ಲಿ ಪವರ್ ಇದೆ ಹಾಗಾಗಿ ದಚ್ಚು ಪವರ್ ಫುಲ್ ರೋಲ್ ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಹಾಗಾಗಿ ಮೋಷನ್ ಪೋಸ್ಟರ್ ನಲ್ಲಿಯೂ ದಾಸನ ಪವರ್ ಫುಲ್ ಪೋಸ್ಟರ್ ಕಣ್ತುಂಬಿಕೊಳ್ಳಬಹುದು ಎಂಬ ನಿರೀಕ್ಷೆಯಿತ್ತು. ಆದರೆ ಹೊಸತನದ ಪೋಸ್ಟರ್ ಕಾಣದೆ ಕೊಂಚ ನಿರಾಸೆಯಾಗಿದೆ. ಎರಡೇ ಪೋಸ್ಟರ್ ಇಲ್ಲಿದ್ದು, ಮೋಷನ್ ಪೋಸ್ಟರ್ ಗೆ ಹಿನ್ನೆಲೆ ಸಂಗೀತ ಶಕ್ತಿ ತುಂಬಿದೆ.

ಪ್ರಕಾಶ್ ವೀರ್ ನಿರ್ದೇಶನದಲ್ಲಿ ಡೆವಿಲ್ ಸಿನಿಮಾ ಮೂಡಿಬರುತ್ತಿದೆ. ಬೆಂಗಳೂರು, ರಾಜಸ್ಥಾನದಲ್ಲಿ ಚಿತ್ರೀಕರಣ ಮುಗಿಸಿರುವ ಚಿತ್ರತಂಡ ಹಾಡಿನ ಶೂಟಿಂಗ್ ಗಾಗಿ ಥೈಲ್ಯಾಂಡ್ ಗೆ ಹಾರಿದ್ದು, ಅಲ್ಲಿ ಚಿತ್ರೀಕರಣ ಮುಗಿದ ಬಳಿಕ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಆರಂಭವಾಗಲಿವೆ. ದರ್ಶನ್ ಗೆ ಜತೆಯಾಗಿ ರಚನಾ ರೈ ಬಣ್ಣಹಚ್ಚಿದ್ದು, ಶರ್ಮಿಳಾ ಮಾಂಡ್ರೆ ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ. ಉಳಿದಂತೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಅಜನೀಶ್ ಲೋಕನಾಥ್ ಹಿನ್ನೆಲೆ ಸಂಗೀತ ಈ ಚಿತ್ರಕ್ಕಿದೆ. ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಡೆವಿಲ್ ಅದ್ದೂರಿಯಾಗಿ ತೆರೆಗೆ ಬರಲಿದೆ.

ಉಪ್ಪಿ ವರ್ಸಸ್ ಉಪ್ಪಿ

ನಟ ಉಪೇಂದ್ರ, ಯುಐ ಬಳಿಕ ತಮಿಳು ಹಾಗೂ ತೆಲುಗು ಚಿತ್ರರಂಗದಲ್ಲಿಯೂ ಬ್ಯುಸಿಯಾಗಿದ್ದಾರೆ. ಉಪ್ಪಿ, ರಜನಿಕಾಂತ್ ಅಭನಯದ ಯುಐ ಸಿನಿಮಾದಲ್ಲಿ ಪವರ್ ಫುಲ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕೂಲಿ ಆಗಸ್ಟ್ 15ರ ಸ್ವಾತಂತ್ರ್ಯ ದಿನದಂದೇ ತೆರೆಗೆ ಬರಲಿದೆ. ಲೋಕೇಶ್ ಕನಕರಾಜು ನಿರ್ದೇಶನದ ಕೂಲಿ ಅದ್ದೂರಿಯಾಗಿ ಮೂಡಿಬಂದಿದೆ. ಬರೋಬ್ಬರಿ ಮುನ್ನೂರು ಕೋಟಿಗೂ ಹೆಚ್ಚು ಬಜೆಟ್ ನಲ್ಲಿ ನಿರ್ಮಾಣವಾಗಿರುವ ಈ ಚಿತ್ರದಲ್ಲಿ ಅಮೀರ್ ಖಾನ್ ಸೇರಿದಂತೆ ದೊಡ್ಡ ತಾರಾಬಳಗವೇ ಇದೆ. ಹಾಗಾಗಿ ಕೂಲಿ ಬಾಕ್ಸ್ ಆಫೀಸ್‌ನಲ್ಲಿ ಸಾವಿರ ಕೋಟಿ ರು ಗಳಿಸಬಹುದು ಎಂಬ ನಿರೀಕ್ಷೆ ಇದೆ.

ಇತ್ತ ಕನ್ನಡದಲ್ಲಿ ಅದ್ದೂರಿಯಾಗಿ ನಿರ್ಮಾಣವಾಗಿರುವ 45 ಚಿತ್ರದಲ್ಲಿಯೂ ಉಪೇಂದ್ರ, ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ನಿರ್ದೇಶನದಲ್ಲಿ ಸಿನಿಮಾ ಮೂಡಿಬಂದಿದ್ದು 45 ಕೂಡ ಆಗಸ್ಟ್ 15 ರಂದೇ ತೆರೆಗೆ ಬರಲಿದೆ. ಇದರಿಂದ ಉಪ್ಪಿ ಅಭಿನಯದ ಕೂಲಿ ಹಾಗೂ 45 ಎರಡು ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ಪೈಪೋಟಿಗೆ ಸಿದ್ಧವಾಗಿವೆ.

45 ನಲ್ಲಿ ಶಿವರಾಜ್ ಕುಮಾರ್, ರಾಜ್ ಬಿ ಶೆಟ್ಟಿ ಕೂಡ ನಟಿಸಿದ್ದಾರೆ. ಮಲ್ಟಿ ಸ್ಟಾರ್ ಸಿನಿಮಾ ಇದಾಗಿದ್ದು ನಿರೀಕ್ಷೆ ಮೂಡಿಸಿದೆ. ಈ ಹಿಂದೆ ಗಾಳಿಪಟ 2 ಸಿನಿಮಾ ನಿರ್ಮಾಣ ಮಾಡಿದ್ದ ರಮೇಶ್ ರೆಡ್ಡಿ ತಮ್ಮ ಸೂರಜ್ ಪ್ರೊಡಕ್ಷನ್ ನಲ್ಲಿ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ.

ಚೌಕಿದಾರ್‌ಗೆ ರೀರೆಕಾರ್ಡಿಂಗ್

ರಥಾವರ ಸಾರಥಿ ಚಂದ್ರಶೇಖರ್ ಬಂಡಿಯಪ್ಪ ಚೌಕಿದಾರ್ ಸಿನಿಮಾ ಮೂಲಕ ಮತ್ತೊಮ್ಮೆ ಬೆಳ್ಳಿಪರದೆಯಲ್ಲಿ ಚಮತ್ಕಾರ ಮಾಡಲು ರೆಡಿಯಾಗಿದ್ದಾರೆ. ಈಗಾಗಲೇ ರಿಲೀಸ್ ಆಗಿರುವ ಟೀಸರ್ ಹಾಗೂ ಹಾಡುಗಳನ್ನು ಸಿನಿಪ್ರಿಯರು ಮೆಚ್ಚಿದ್ದಾರೆ. ಶೂಟಿಂಗ್ ಮುಗಿಸಿರುವ ಚಿತ್ರತಂಡ, ರೀ-ರೆಕಾರ್ಡಿಂಗ್ ಆರಂಭಿಸಿದೆ.

ತೆಲುಗು ಖ್ಯಾತ ರೀ ರೆಕಾರ್ಡಿಂಗ್ ಸ್ಪೆಷಲಿಸ್ಟ್ ಆಗಿರುವ ಎಸ್ ಚಿನ್ನಾ, ಈಗ ಚೌಕಿದಾರ ಚಿತ್ರತಂಡ ಸೇರಿದ್ದು ಸಿನಿಮಾದ ಬಗ್ಗೆ ಕುತೂಹಲ ಮೂಡಿಸಿದೆ. ಪ್ರಭಾಸ್ ನಟನೆಯ ರೆಬಲ್ ಸಿನಿಮಾ, ನಾಗಾರ್ಜುನ್ ನಟನೆಯ ಡಾನ್, ರವಿತೇಜಾ ಬೆಂಗಾಲ್ ಟೈಗರ್, ಬಾಲಯ್ಯ ನಟನೆಯ ಸಿಂಹ ಚಿತ್ರಗಳಿಗೆ ರೀ ರೆಕಾರ್ಡಿಂಗ್ ಮಾಡಿರುವ ಚಿನ್ನಾ. ಬಹಳ ವರ್ಷಗಳ ನಂತರ ಚೌಕಿದಾರ್‌ಗಾಗಿ ಕನ್ನಡ ಚಿತ್ರರಂಗದತ್ತ ಮುಖ ಮಾಡಿದ್ದಾರೆ.

ದೊಡ್ಮನೆಯ ಮೊಮ್ಮಗಳು ಧನ್ಯಾ ರಾಮ್‌ಕುಮಾರ್ ಈ ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದು, ದಿಯಾ ಖ್ಯಾತಿಯ ನಟ ಪೃಥ್ವಿ ಅಂಬಾರ್ ನಾಯಕನಾಗಿ ಅಭಿನಯಿಸಿದ್ದು ವಿಭಿನ್ನವಾಗಿಯೇ ಕಾಣಿಸಿಕೊಂಡಿದ್ದಾರೆ. ರಗಡ್ ರೋಲ್ ಮೂಲಕವೇ ಎಲ್ಲರ ಗಮನ ಸೆಳೆಯಲಿದ್ದಾರೆ. ಚೈತ್ರದಪ್ರೇಮಾಂಜಲಿ ಚಿತ್ರದ ನಾಯಕಿ ಶ್ವೇತಾ, ಡೈಲಾಗ್ ಕಿಂಗ್ ಸಾಯಿಕುಮಾರ್ ಕೂಡ ಈ ಸಿನಿಮಾದಲ್ಲಿದ್ದು, ಸುಧಾರಾಣಿ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಗಮನಸೆಳೆಯಲಿದ್ದಾರೆ..

. ಕಲ್ಲಹಳ್ಳಿ ಚಂದ್ರಶೇಖರ್ ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದು, ವಿ.ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ, ಸಂತೋಷ್ ನಾಯಕ್ ಸಿನಿಮಾದ ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಸಚಿನ್ ಬಸ್ರೂರು ಸಂಗೀತ ನಿರ್ದೇಶನ,. ಸಿದ್ದು ಕಂಚನಹಳ್ಳಿ ಛಾಯಾಗ್ರಹಣ ಈ ಚಿತ್ರಕ್ಕಿದೆ. ಚೌಕಿದಾರ್ ಕನ್ನಡ ಸೇರಿದಂತೆ ಪಂಚ ಭಾಷೆಗಳಲ ಬಿಡುಗಡೆಯಾಗಲಿದೆ.

ಜಸ್ಟ್ ಮ್ಯಾರೀಡ್ ಮಾಂಗಲ್ಯಂ ಗಾನ

ಖ್ಯಾತ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಹಾಗೂ ಸಿ.ಆರ್ ಬಾಬಿ ಒಟ್ಟಾಗಿ ಜಸ್ಟ್ ಮ್ಯಾರೀಡ್ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಸೆನ್ಸಾರ್ ಪಾಸ್ ಆಗಿರುವ ಜಸ್ಟ್ ಮ್ಯಾರೀಡ್ ಶೀಘ್ರದಲ್ಲಿಯೇ ತೆರೆಗೆ ಬರಲಿದೆ. ಅದಕ್ಕೂ ಮೊದಲು ಚಿತ್ರದ ಹಾಡುಗಳು ಸಿನಿಪ್ರಿಯರ ಮನಗೆದ್ದಿವೆ. ಈ ಚಿತ್ರಕ್ಕಾಗಿ ವಿ.ನಾಗೇಂದ್ರ ಪ್ರಸಾದ್ ಬರೆದಿರುವ ಮಾಂಗಲ್ಯಂ ತಂತು ನಾನೇನಾ.. ಎಂಬ ಹಾಡು ಬಿಡುಗಡೆಯಾಗಿದೆ. ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿರುವ ಈ ಹಾಡನ್ನು ಸಂಜಿತ್ ಹೆಗ್ಡೆ, ಐಶ್ವರ್ಯಾ ರಂಗರಾಜನ್ ಹಾಗೂ ವರುಣ್ ರಾಮಚಂದ್ರನ್ ಅಮೋಘವಾಗಿ ಹಾಡಿದ್ದಾರೆ. ಈ ಸುಮಧುರ ಹಾಡಿಗೆ ಅಭಿಮಾನಿಗಳು ಫಿದಾ ಆಗಿದ್ದಾರೆ. ಹಾಡುಗಳು ಹಾಗೂ ಟೀಸರ್ ಮೂಲಕ ಜನರ ಮನಸ್ಸಿಗೆ ಹತ್ತಿರವಾಗಿರುವ ಬಹು ನಿರೀಕ್ಷಿತ ಈ ಪ್ರೇಮ ಕಥಾನಕ ಪ್ರೇಕ್ಷಕರಲ್ಲಿ ಕುತೂಹಲ ಮೂಡಿಸಿದೆ.

ಸಂಗೀತ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಸಿ.ಆರ್.ಬಾಬಿ ಚೊಚ್ಚಲ ನಿರ್ದೇಶನದಲ್ಲಿ ಮೂಡಿಬಂದಿರುವ ಚಿತ್ರ ಇದಾಗಿದ್ದು, ಬಿಗ್ ಬಾಸ್ ಖ್ಯಾತಿಯ ಶೈನ್ ಶೆಟ್ಟಿ ನಾಯಕನಾಗಿ ನಟಿಸಿದ್ದು ಅಂಕಿತಾ ಅಮರ್ ನಾಯಕಿಯಾಗಿ ಅಭಿನಯಿಸಿದ್ದಾರೆ.

ದೇವರಾಜ್, ಅಚ್ಯುತ. ಕುಮಾರ್, ಮಾಳವಿಕಾ ಅವಿನಾಶ್, ಅನೂಪ್ ಭಂಡಾರಿ, ಶ್ರುತಿ ಹರಿಹರನ್, ಶ್ರುತಿ ಕೃಷ್ಣ, ಸಾಕ್ಷಿ ಅಗರವಾಲ್, ಶ್ರೀಮಾನ್, ರವಿಶಂಕರ್ ಗೌಡ, ರವಿ ಭಟ್, ವಾಣಿ ಹರಿಕೃಷ್ಣ, ಸಂಗೀತಾ, ಅನಿಲ್, ವೇದಿಕಾ ಕಾರ್ಕಳ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಸಿ.ಆರ್ ಬಾಬಿ ಅವರೆ ಚಿತ್ರಕ್ಕೆ ಕಥೆ ಬರೆದಿದ್ದು, ರಘು ನಿಡುವಳ್ಳಿ ಸಂಭಾಷಣೆ, ಪಿ ಜಿ .ಛಾಯಾಗ್ರಹಣ, ಶ್ರೀಕಾಂತ್ ಮತ್ತು ಪ್ರತೀಕ್ ಶೆಟ್ಟಿ ಸಂಕಲನ, ಅಮರ್ ಕಲಾ ನಿರ್ದೇಶನ, ವಿಕ್ರಮ್ ಸಾಹಸ ನಿರ್ದೇಶನ ಹಾಗೂ ಬಾಬಾ ಭಾಸ್ಕರ್, ಶಾಂತಿ ಅರವಿಂದ್ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ಕೆ.ಕಲ್ಯಾಣ್, ಡಾ.ವಿ.ನಾಗೇಂದ್ರಪ್ರಸಾದ್, ಪ್ರಮೋದ್ ಮರವಂತೆ, ಧನಂಜಯ್ ರಂಜನ್ ಹಾಡುಗಳಿಗೆ ಸಾಹಿತ್ಯ ರಚಿಸಿದ್ದಾರೆ.